الكنادية
Kannada

مترجم لعدة لغات

# صحيح الدعاء والثناء على الله تعالى

# ಅಧಿಕೃತ ಪ್ರಾರ್ಥನೆ ಮತ್ತು ಅಲ್ಲಾಹನ ಸ್ತುತಿಗಳು

ಡಾ. ಅಬ್ದುಲ್ಲಾ ಬಿನ್ ಹಮೂದ್ ಅಲ್-ಫರೀಹ್

د. عبدالله بن حمود الفريح

- ಪ್ರಾರ್ಥನೆಯ ಶಿಷ್ಟಾಚಾರಗಳು
- ಅಲ್ಲಾಹನ ಸ್ತುತಿಗಳು
- ಕುರ್‌ಆನ್‌ನಲ್ಲಿರುವ ಪ್ರಾರ್ಥನೆಗಳು
- ನಮಾಝ್‌ನಲ್ಲಿ ಹೇಳುವ ಪ್ರಾರ್ಥನೆಗಳು
- ಪ್ರವಾದಿ(ಸ) ರವರ ಪ್ರಾರ್ಥನೆಗಳು
- ಪ್ರವಾದಿ(ಸ) ರವರ ಅಭಯಯಾಚನೆಗಳು
- ಮಂತ್ರದ ಪ್ರಾರ್ಥನೆಗಳು
- ಬೆಳಿಗ್ಗೆ ಮತ್ತು ಸಂಜೆ ಹೇಳುವ ಪ್ರಾರ್ಥನೆಗಳು

ವಿಶೇಷ ಧಿಕ್ರ್ ಮತ್ತು ಪ್ರಾರ್ಥನೆಗಳಿಗೆ ತಲುಪಲು ಈ ವಿಷಯಗಳ ಮೇಲೆ ಕ್ಲಿಕ್ ಮಾಡಿ

doa.eqtidaa.com

بسم الله الرحمن الرحيم

# ಪರಿಚಯ

ಸರ್ವಸ್ತುತಿ ಸರ್ವಲೋಕಗಳ ಒಡೆಯನಾದ ಅಲ್ಲಾಹನಿಗೆ ಮೀಸಲು. ಅವನ ಸಲಾತ್ ಮತ್ತು ಸಲಾಮ್ ಪ್ರವಾದಿಯವರ(ಸ) ಮೇಲೆ, ಅವರ ಕುಟುಂಬದ ಮೇಲೆ ಮತ್ತು ಅವರ ಎಲ್ಲಾ ಸಹಚರರ ಮೇಲಿರಲಿ.

ಇದೊಂದು ಚಿಕ್ಕ ಪುಸ್ತಕವಾಗಿದ್ದು, ಇದರಲ್ಲಿ ಹಲವಾರು ರೀತಿಯ ಪ್ರಾರ್ಥನೆಗಳ ಸಂಗ್ರಹಗಳಿವೆ. (ಅಲ್ಲಾಹನ ಸ್ತುತಿ, ಕುರ್‌ಆನ್‌ನಲ್ಲಿರುವ ಪ್ರಾರ್ಥನೆಗಳು, ಪ್ರವಾದಿ(ಸ) ಯವರ ಪ್ರಾರ್ಥನೆಗಳು, ಪ್ರವಾದಿ(ಸ) ಯವರ ಅಭಯಯಾಚನೆಗಳು, ಧಾರ್ಮಿಕ ಮಂತ್ರಗಳು ಮತ್ತು ಬೆಳಿಗ್ಗೆ ಮತ್ತು ಸಂಜೆ ಹೇಳುವ ದಿಕ್ರ್‌ಗಳು ಇತ್ಯಾದಿ). ಅದೇ

ರೀತಿ ಪ್ರಾರ್ಥನೆಯ ಶಿಷ್ಟಾಚಾರಗಳನ್ನೂ ಇದು ಒಳಗೊಂಡಿದೆ. ಮುಸ್ಲಿಮರು ಸಾಕಷ್ಟು ಒಳಿತುಗಳನ್ನು ಸಂಗ್ರಹಿಸುವುದಕ್ಕಾಗಿ, ಕುರ್‌ಆನ್ ಮತ್ತು ಸುನ್ನತ್‌ನಲ್ಲಿರುವ ಅಧಿಕೃತ ಪ್ರಾರ್ಥನೆಗಳನ್ನು ಮಾತ್ರ ಆಯ್ಕೆ ಮಾಡಲು ನಾನು ಅತೀವ ಆಸಕ್ತಿ ವಹಿಸಿದ್ದೇನೆ. ಪ್ರತಿಯೊಂದು ಪ್ರಾರ್ಥನೆಯನ್ನು ಅರೇಬಿಕ್‌ನಲ್ಲಿ ಬರೆದು ನಂತರ ಕನ್ನಡ ಭಾಷೆಗೆ ಅದನ್ನು ಅನುವಾದ ಮಾಡಲಾಗಿದೆ. ಅದರ ಅರೇಬಿಕ್ ಉಚ್ಚಾರಣೆಯನ್ನು ಸಹ ನೀಡಲಾಗಿದೆ. ಪುಸ್ತಕದ ಕೊನೆಯಲ್ಲಿ ಪ್ರಾರ್ಥನೆಗಳು ವರದಿಯಾದ ಹದೀಸ್‌ನ ತಖ್ರೀಜನ್ನು ಉಲ್ಲೇಖಿಸಲಾಗಿದೆ. ಇದನ್ನು ಅಲ್ಲಾಹನ ಮುಖವನ್ನು ಮಾತ್ರ ಬಯಸಿ ಬರೆಯಲಾದ ಒಂದು ಪುಸ್ತಕವನ್ನಾಗಿ ಮಾಡಲು ನಾನು ಸರ್ವಶಕ್ತನಾದ ಅಲ್ಲಾಹನಲ್ಲಿ ಪ್ರಾರ್ಥಿಸುತ್ತೇನೆ. ಅಲ್ಲಾಹನ ಸಲಾತ್ ಮತ್ತು

ಸಲಾಮ್ ನಮ್ಮ ಪ್ರವಾದಿವರ್ಯರಾದ ಮುಹಮ್ಮದ್(ಸ) ರ ಮೇಲೆ, ಅವರ ಕುಟುಂಬ ಮತ್ತು ಸಹಚರರಿಗೆ ಮೇಲೆ ಇರಲಿ.

**ಡಾ ಅಬ್ದುಲ್ಲಾ ಬಿನ್ ಹಮೂದ್ ಅಲ್-ಫರೀಹ್**

# ಪ್ರಾರ್ಥಿಸುವುದಕ್ಕೆ ಮುಂಚೆ

ಓ ಮುಸಲ್ಮಾನರೇ, ನೀವು ನಿಮ್ಮ ರಬ್ಬಿನ ಅಗತ್ಯವುಳ್ಳವರಾಗಿರುವಿರಿ... ಆದರೆ ಅಲ್ಲಾಹನಿಗೆ ನಿಮ್ಮ ಅಗತ್ಯವಿಲ್ಲ...

ಕೆಲವು ಪ್ರಾರ್ಥನೆಗಳು ಇಲ್ಲಿವೆ... ಇದಕ್ಕಾಗಿ ನಿಮ್ಮ ಹೃದಯವನ್ನು ಸಿದ್ಧಪಡಿಸಿಕೊಳ್ಳಿ...

ಇದು ಎಲ್ಲಾ ಒಳಿತುಗಳಿಗೂ ಇರುವ ಪ್ರಾರ್ಥನೆಗಳಾಗಿವೆ

ನಿಮಗೆ ಸಾಧ್ಯವಾದದ್ದನ್ನು ಕಂಠಪಾಠ ಮಾಡಿಕೊಳ್ಳಿ

ನಿಮ್ಮ ಎಲ್ಲಾ ಅಗತ್ಯಗಳಿಗೆ ಸಾಕಾಗುವ ಎಷ್ಟೋ ಪ್ರಾರ್ಥನೆಗಳಿವೆ

ಏಕೆಂದರೆ ಇವು ವಿಶಾಲವಾದ ಅರ್ಥಗಳನ್ನು ಹೊಂದಿರುವ ಸಂಕ್ಷಿಪ್ತ ಪದಗಳ ಪ್ರಾರ್ಥನೆಗಳಾಗಿವೆ

ಪ್ರಾರ್ಥಿಸುವಾಗ ಹೃದಯ ಸಾನಿಧ್ಯತೆಯನ್ನು ಮತ್ತು ಭಯಭಕ್ತಿಯನ್ನು ಪ್ರಕಟಿಸಲು ಮರೆಯಬೇಡಿ...

ಮುಂದಿನ

ಮೊದಲ ಪುಟಕ್ಕೆ

# ಪ್ರಾರ್ಥನೆಯ ಶಿಷ್ಟಾಚಾರಗಳು

**ಒಂದು:** ಪ್ರಾರ್ಥಿಸುವವನು ತನ್ನ ಪ್ರಾರ್ಥನೆಯನ್ನು ಅಲ್ಲಾಹನಿಗೆ ನಿಷ್ಕಳಂಕಗೊಳಿಸಬೇಕು. ಸರ್ವಶಕ್ತನಾದ ಅಲ್ಲಾಹು ಮಾತ್ರ ತನ್ನ ಪ್ರಾರ್ಥನೆಗೆ ಉತ್ತರಿಸಬಲ್ಲನೆಂದು ದೃಢವಾಗಿ ವಿಶ್ವಾಸವಿಡಬೇಕು. ಆದ್ದರಿಂದ ಸರ್ವಶಕ್ತನಾದ ಅಲ್ಲಾಹನನ್ನು ಬಿಟ್ಟು ಬೇರೆ ಯಾರಲ್ಲೂ ಪ್ರಾರ್ಥಿಸಬಾರದು. ಪ್ರವಾದಿ, ವಲಿ, ರಾಜ, ಮಹಾತ್ಮ ಅಥವಾ ಇತರ ಯಾರ ಮೂಲಕವೂ ಅಲ್ಲಾಹನಿಗೆ ತವಸ್ಸುಲ್ ಮಾಡಬಾರದು. ಅಲ್ಲಾಹು ಹೇಳುತ್ತಾನೆ:

﴿فَٱدۡعُواْ ٱللَّهَ مُخۡلِصِينَ لَهُ ٱلدِّينَ﴾ [غافر: ١٤]

ಶರಣಾಗತಿಯನ್ನು ಅಲ್ಲಾಹನಿಗೆ

ನಿಷ್ಕಳಂಕಗೊಳಿಸಿ ಅವನನ್ನು ಕರೆದು ಪ್ರಾರ್ಥಿಸಿರಿ. [ಸೂರತ್ ಗಾಫಿರ್: 14].

**ಎರಡು:** ಪ್ರಾರ್ಥನೆಯಲ್ಲಿ ಮಗ್ನರಾಗುವುದು ಸರ್ವಶಕ್ತನಾದ ಅಲ್ಲಾಹು ಇಷ್ಟಪಡುವ ಒಂದು ದೊಡ್ಡ ಆರಾಧನೆಯಾಗಿದೆ ಮತ್ತು ಉತ್ತರ ಸಿಗದಿದ್ದರೂ ಸಹ ಪ್ರಾರ್ಥಿಸಿದ್ದಕ್ಕಾಗಿ ಮಹಾ ಪ್ರತಿಫಲವಿದೆ ಎನ್ನುವುದನ್ನು ಗಮನದಲ್ಲಿಟ್ಟುಕೊಳ್ಳಬೇಕು.

**ಮೂರು:** ಅಲ್ಲಾಹನಲ್ಲಿ ದೃಢವಾದ ಭರವಸೆಯನ್ನು ಹೊಂದಿರಬೇಕು. ನಿಮ್ಮ ಪ್ರಾರ್ಥನೆಗಳಿಗೆ ಉತ್ತರಿಸಲು ಅಲ್ಲಾಹು ಸಮರ್ಥನಾಗಿದ್ದಾನೆ ಮತ್ತು ನಿಮ್ಮನ್ನು ಅಲ್ಲಾಹನಿಗೆ ಸಮೀಪಗೊಳಿಸಲು ಬೇರೆಯವರನ್ನು ಸಮೀಪಿಸುವಂತಹ ತವಸ್ಸುಲ್ ಮುಂತಾದ ಅಧಾರ್ಮಿಕ

ಪ್ರವೃತ್ತಿಗಳಿಗೆ ತಳ್ಳುವ ಕೃತ್ಯಗಳನ್ನು ಬಿಟ್ಟುಬಿಡಬೇಕು.

**ನಾಲ್ಕು:** ನೀವು ನಿಮ್ಮ ಪಾಪಗಳ ಮೂಲಕ ಅಲ್ಲಾಹನಿಂದ ಎಷ್ಟೇ ದೂರ ಸಾಗಿದ್ದರೂ, ನೀವು ಪಶ್ಚಾತ್ತಾಪಪಡುವಾಗ ಮತ್ತು ಅಲ್ಲಾಹನ ಕಡೆಗೆ ತಿರುಗುವಾಗ ಅಲ್ಲಾಹು ಬಹಳ ಸಂತೋಷಪಡುತ್ತಾನೆ. ಆದ್ದರಿಂದ ಪ್ರಾರ್ಥನೆಗೆ ಉತ್ತರ ಸಿಗಲಿಲ್ಲವೆಂಬ ನೋವು ಅಥವಾ ಅಲ್ಲಾಹನ ಕರುಣೆಯ ಕುರಿತಾದ ಹತಾಶೆ ನಿಮ್ಮಲ್ಲಿ ಹರಿದಾಡದಂತೆ ಎಚ್ಚರವಹಿಸಿ. ಬದಲಾಗಿ ತೌಬಾ ಮಾಡುವ ಮೂಲಕ ಮತ್ತು ಅಲ್ಲಾಹನ ಕಡೆಗೆ ತಿರುಗುವ ಮೂಲಕ ಅಲ್ಲಾಹು ಸಂತೋಷಪಡುವುದನ್ನು ನಿಮ್ಮ ಮನಸ್ಸಿನಲ್ಲಿ ಭಾವಿಸಿಕೊಳ್ಳಿ. ಅಲ್ಲಾಹು ನಿರಪೇಕ್ಷನಾಗಿದ್ದಾನೆ. ಅವನು ಹೇಳುವುದು ನೋಡಿ:

﴿إِنَّ ٱللَّهَ يَغۡفِرُ ٱلذُّنُوبَ جَمِيعًاۚ﴾ [زمر: ٥٣]

"ಖಂಡಿತವಾಗಿಯೂ ಅಲ್ಲಾಹು ಎಲ್ಲಾ ಪಾಪಗಳನ್ನೂ ಕ್ಷಮಿಸುತ್ತಾನೆ."

﴿وَإِذَا سَأَلَكَ عِبَادِي عَنِّي فَإِنِّي قَرِيبٌۖ أُجِيبُ دَعۡوَةَ ٱلدَّاعِ إِذَا دَعَانِۖ﴾ [بقره: ١٨٦]

"ನನ್ನ ದಾಸರು ನನ್ನ ಬಗ್ಗೆ ಕೇಳಿದರೆ, ನಾನು ಹತ್ತಿರದಲ್ಲಿದ್ದೇನೆ, ಮತ್ತು ಪ್ರಾರ್ಥಿಸುವವರ ಪ್ರಾರ್ಥನೆಗೆ ನಾನು ಉತ್ತರಿಸುತ್ತೇನೆ ಎಂದು ಹೇಳಿರಿ."

**ಐದು:** ಪ್ರಾರ್ಥಿಸುವವನ ಆಹಾರ ಮತ್ತು ಪಾನೀಯವು ಕಾನೂನುಬಾಹಿರ ಗಳಿಕೆಯದ್ದಾಗಿರಬಾರದು. ಏಕೆಂದರೆ ಇದು ಪ್ರಾರ್ಥನೆಗೆ ಉತ್ತರ ಸಿಗುವುದನ್ನು ತಡೆಯುವಅಡೆತಡೆಗಳಲ್ಲಿಒಂದಾಗಿದೆ.ಅಬು ಹುರೈರ(ರ) ರವರ ಹದೀಸಿನಲ್ಲಿರುವಂತೆ

ಅಲ್ಲಾಹನ ಸಂದೇಶವಾಹಕರು(ಸ) ಹೇಳಿದರು: ಕೆದರಿದ ಕೂದಲಿನ,

«الرَّجُلَ يُطِيلُ السَّفَرَ أَشْعَثَ أَغْبَرَ، يَمُدُّ يَدَيْهِ إِلَى السَّمَاءِ، يَا رَبِّ، يَا رَبِّ، وَمَطْعَمُهُ حَرَامٌ، وَمَشْرَبُهُ حَرَامٌ، وَمَلْبَسُهُ حَرَامٌ، وَغُذِيَ بِالْحَرَامِ، فَأَنَّى يُسْتَجَابُ لِذَلِكَ؟»:

ಧೂಳು ಮೆತ್ತಿದ ಬಟ್ಟೆಗಳಿರುವ ಒಬ್ಬ ಪ್ರಯಾಣಿಕ ತನ್ನ ಪ್ರಯಾಣವನ್ನು ಮುಂದುವರಿಸುತ್ತಾನೆ. ತನ್ನ ಎರಡು ಕೈಗಳನ್ನು ಆಕಾಶಕ್ಕೆ ಎತ್ತಿ ಹಿಡಿದು, 'ನನ್ನ ರಬ್ಬೇ ನನ್ನ ರಬ್ಬೇ' ಎಂದು ಆತ ಕೂಗಿ ಕರೆಯುತ್ತಾನೆ. ಆದರೆ ಅವನ ಆಹಾರವು ಹರಾಮ್ ಆಗಿದೆ. ಅವನ ಪಾನೀಯವು ಹರಾಮ್ ಆಗಿದೆ. ಅವನ ಬಟ್ಟೆಬರೆ ಹರಾಮ್ ಆಗಿದೆ. ಆತ ನಿಷಿದ್ಧವಾದ ಪೋಷಕಾಂಶಗಳಿಂದ ಪೋಷಿಸಲ್ಪಟ್ಟಿದ್ದಾನೆ.

ಹೀಗಿರುವಾಗ ಅವನಿಗೆ ಹೇಗೆ ಉತ್ತರ ಸಿಗಬಹುದು? (ಮುಸ್ಲಿಂ 1015)

**ಆರು:** ಪ್ರಾರ್ಥಿಸುವವನು ಪ್ರಾರ್ಥನೆಯ ಶಿಷ್ಟಾಚಾರಗಳನ್ನು ಮತ್ತು ಸುನ್ನತ್‌ಗಳನ್ನು ಪಾಲಿಸಬೇಕು. ಅವು:

1. ವುದೂ ಇರುವ ಸ್ಥಿತಿಯಲ್ಲಿ ಪ್ರಾರ್ಥಿಸುವುದು. ನಮಾಝ್‌ಗಾಗಿ ವುದೂ ಮಾಡುವಂತೆ ವುದೂ ಮಾಡುವುದು.

ಅಲ್-ಬುಖಾರಿ ಮತ್ತು ಮುಸ್ಲಿಮ್‌ನಲ್ಲಿರುವ ಅಬೂ ಮೂಸಾ(ರ) ರವರ ಹದೀಸ್ ನಲ್ಲಿರುವಂತೆ. ಅದರಲ್ಲಿ ಅವರ ಚಿಕ್ಕಪ್ಪ ಅಬೂ ಅಮಿರ್(ರ) ರ ಒಂದು ಘಟನೆಯ ಉಲ್ಲೇಖವಿದೆ. ಪ್ರವಾದಿ(ಸ) ರವರ ಬಳಿಗೆ ಹೋಗಿ ತಮಗಾಗಿ ಪ್ರಾರ್ಥಿಸಲು ಹೇಳಬೇಕೆಂದು

ಅಬೂ ಆಮಿರ್(ರ) ಅಬೂ ಮೂಸಾ(ರ) ರನ್ನು ಪ್ರವಾದಿಯ(ಸ) ಬಳಿಗೆ ಕಳಿಸಿದರು. ಆಗ ಪ್ರವಾದಿ(ಸ) ರವರು ನೀರು ತರಲು ಆಜ್ಞಾಪಿಸಿದರು. ನಂತರ ಅದರಲ್ಲಿ ವುದೂ ನಿರ್ವಹಿಸಿದರು. ನಂತರ ಕೈಗಳನ್ನು ಮೇಲಕ್ಕೆತ್ತಿ ಪ್ರಾರ್ಥಿಸಿದರು:

«اللَّهُمَّ اغْفِرْ لِعُبَيْدٍ، أَبِي عَامِرٍ»

"ಓ ಅಲ್ಲಾಹನೇ. ಅಬೂ ಆಮಿರ್ ಉಬೈದ್‌ರನ್ನು ಕ್ಷಮಿಸು."

ಅವರು ಎಷ್ಟರಮಟ್ಟಿಗೆ ಕೈಗಳನ್ನೆತ್ತಿದರು ಎಂದರೆ ಅವರ ಕಂಕುಳದ ಬಿಳುಪು ನನಗೆ ಕಾಣುತ್ತಿತ್ತು. ನಂತರ ಅವರು ಪ್ರಾರ್ಥಿಸಿದರು:

«اللَّهُمَّ اجْعَلْهُ يَوْمَ الْقِيَامَةِ فَوْقَ كَثِيرٍ مِنْ خَلْقِكَ، أَوْ مِنَ النَّاسِ»:

"ಓ ಅಲ್ಲಾಹನೇ, ಪುನರುತ್ಥಾನದ ದಿನ

ಅವರನ್ನು ನಿನ್ನ ಅನೇಕ ಸೃಷ್ಟಿಗಳಿಗಿಂತ ಹೆಚ್ಚಿನ ಪದವಿಯನ್ನು ನೀಡು." ಅಲ್-ಬುಖಾರಿ (4323) ಮುಸ್ಲಿಂ (2498).

2 ಕಿಬ್ಲಾದ ಕಡೆಗೆ ಮುಖ ಮಾಡುವುದು.

3 ಕೈಗಳನ್ನು ಎತ್ತುವುದು.

ಬಿನ್ ಅಬ್ಬಾಸ್(ರ) ರವರ ಹದೀಸಿನಲ್ಲಿ ಈ ಎರಡು ವಿಷಯಗಳನ್ನು ಸೂಚಿಸಲಾಗಿದೆ. ಅವರು ಹೇಳುತ್ತಾರೆ: "ಉಮರ್ ಇಬ್ನುಲ್-ಖತ್ತಾಬ್(ರ) ಹೇಳಿದರು: ಬದ್ರ್ ಯುದ್ಧದ ದಿನ ಅಲ್ಲಾಹನ ಸಂದೇಶವಾಹಕರು(ಸ) ಮುಶ್ರಿಕರ ಕಡೆಗೆ ನೋಡಿದರು. ಅವರು ಸಾವಿರ ಸಂಖ್ಯೆಯಲ್ಲಿದ್ದರು. ಆದರೆ ಸಹಾಬಿಗಳು ಕೇವಲ ಮುನ್ನೂರ ತೊಂಬತ್ತು. ಆಗ ಪ್ರವಾದಿ(ಸ) ರವರು ಕಿಬ್ಲಾದ ಕಡೆಗೆ ತಿರುಗಿದರು. ನಂತರ ಕೈಗಳನ್ನು

ಎತ್ತಿ ಅಲ್ಲಾಹನೊಂದಿಗೆ ಪ್ರಾರ್ಥಿಸಲು ಪ್ರಾರಂಭಿಸಿದರು:

«اللَّهُمَّ أَنْجِزْ لِي مَا وَعَدْتَنِي، اللَّهُمَّ آتِ مَا وَعَدْتَنِي»:

"ಓ ಅಲ್ಲಾಹನೇ. ನನಗೆ ವಾಗ್ದಾನ ಮಾಡಿದ್ದನ್ನು ನೆರವೇರಿಸು. ಓ ಅಲ್ಲಾಹನೇ. ನನಗೆ ಭರವಸೆ ನೀಡಿದ್ದನ್ನು ನೀಡು.. " ಮುಸ್ಲಿಂ (1763).

4 ಅಲ್ಲಾಹನನ್ನು ಸ್ತುತಿಸುವ ಮೂಲಕ ಮತ್ತು ಪ್ರವಾದಿ(ಸ) ರವರ ಮೇಲೆ ಸಲಾತ್ ಹೇಳುವ ಮೂಲಕ ಆರಂಭಿಸುವುದು. ಫದಾಲ ಬಿನ್ ಉಬೈದ್(ರ) ರವರ ಹದೀಸಿನಲ್ಲಿ ಇದನ್ನು ಸೂಚಿಸಲಾಗಿದೆ. ಅವರು ಹೇಳುತ್ತಾರೆ: ಒಬ್ಬ ವ್ಯಕ್ತಿ ಅಲ್ಲಾಹನನ್ನು ಸ್ತುತಿಸದೆ ಮತ್ತು ಪ್ರವಾದಿಯ(ಸ) ಮೇಲೆ ಸಲಾತ್

ಹೇಳದೆ ಪ್ರಾರ್ಥಿಸುವುದನ್ನು ಅಲ್ಲಾಹನ ಸಂದೇಶವಾಹಕರು(ಸ) ಕೇಳಿದರು. ಆಗ ಪ್ರವಾದಿ(ಸ) ಹೇಳಿದರು: «عَجِلَ هَذَا»: ಈತ ಆತುರಪಟ್ಟಿದ್ದಾನೆ. ನಂತರ ಅವನನ್ನು ಕರೆದು ಹೇಳಿದರು:

«إِذَا صَلَّى أَحَدُكُمْ، فَلْيَبْدَأْ بِتَمْجِيدِ رَبِّهِ جَلَّ وَعَزَّ، وَالثَّنَاءِ عَلَيْهِ، ثُمَّ يُصَلِّي عَلَى النَّبِيِّ صَلَّى اللهُ عَلَيْهِ وَسَلَّمَ، ثُمَّ يَدْعُو بَعْدُ بِمَا شَاءَ»:

ನಿಮ್ಮಲ್ಲಿ ಒಬ್ಬರು ಪ್ರಾರ್ಥಿಸುವಾಗ ಅಲ್ಲಾಹನನ್ನು ಸ್ತುತಿಸುವ ಮೂಲಕ ಪ್ರಾರಂಭಿಸಲಿ. ನಂತರ ಪ್ರವಾದಿ(ಸ) ರವರ ಮೇಲೆ ಸಲಾತ್ ಹೇಳಲಿ. ನಂತರ ತಾನು ಬಯಸಿದ್ದನ್ನು ಪ್ರಾರ್ಥಿಸಲಿ.[1]

1 ಇದನ್ನು ಅಬೂದಾವೂದ್ (1481), ಅತ್ತಿರ್ಮಿದಿ (3477) ವರದಿ ಮಾಡಿದ್ದಾರೆ. ಇದನ್ನು ಅಲ್‌ಅಲ್ಬಾನಿ ತಹ್ಕೀಕು ಸ್ವಲಾತಿ ಅಲನ್ನಬಿಯ್ಯಿ(ಸ) (86) ದಲ್ಲಿ ಸಹೀಹ್ ಎಂದಿದ್ದಾರೆ

ಕುರ್‌ಆನಿನ ಸೂರಗಳ ಆರಂಭದಲ್ಲಿ ವರದಿಯಾಗಿರುವ ಅಲ್ಲಾಹನ ಸ್ತುತಿಗಳ ಮೂಲಕ ಅಲ್ಲಾಹನನ್ನು ಸ್ತುತಿಸಿ, ನಂತರ ಪ್ರವಾದಿ(ಸ) ರವರ ಮೇಲೆ ಸಲಾತ್ ಹೇಳಿ, ನಂತರ ಈ ಕೃತಿಯಲ್ಲಿರುವಂತೆ ನಾನಾ ಸ್ತುತಿಗಳ ಮೂಲಕ ಅಲ್ಲಾಹನನ್ನು ಸ್ತುತಿಸಿದರೆ ಪ್ರಾರ್ಥನೆಗೆ ಉತ್ತರ ಸಿಗುವುದು ನಿಶ್ಚಿತ.

5 ಅಲ್ಲಾಹನಲ್ಲಿ ಸದ್ಭಾವನೆಯನ್ನಿಟ್ಟು ಅವನು ಪ್ರಾರ್ಥನೆಗೆ ಉತ್ತರ ನೀಡುತ್ತಾನೆಂಬ ದೃಢ ವಿಶ್ವಾಸದಿಂದ ಪ್ರಾರ್ಥಿಸುವುದು. ಉತ್ತರ ಸಿಗಲು ಆತುರಪಡಬಾರದು. ಅಲ್ಲಾಹು ಖಂಡಿತ ಉತ್ತರ ನೀಡುತ್ತಾನೆಂಬ ದೃಢವಿಶ್ವಾಸವಿರಬೇಕು. ಅಬೂ ಹುರೈರ(ರ) ರಿಂದ ವರದಿ. ಪ್ರವಾದಿ(ಸ) ಹೇಳಿದರು:

«لَا يَزَالُ يُسْتَجَابُ لِلْعَبْدِ، مَا لَمْ يَدْعُ بِإِثْمٍ أَوْ قَطِيعَةِ رَحِمٍ، مَا لَمْ يَسْتَعْجِلْ»:

ದಾಸನು ಪಾಪವನ್ನು ಮಾಡಲು ಅಥವಾ ಕುಟುಂಬ ಸಂಬಂಧವನ್ನು ಮುರಿಯಲು ಎಲ್ಲಿಯ ತನಕ ಪ್ರಾರ್ಥಿಸುವುದಿಲ್ಲವೋ ಮತ್ತು ಎಲ್ಲಿಯ ತನಕ ಆತುರಪಡುವುದಿಲ್ಲವೋ ಅಲ್ಲಿಯ ತನಕ ಅಲ್ಲಾಹು ಅವನ ಪ್ರಾರ್ಥನೆಗೆ ಖಂಡಿತ ಉತ್ತರ ನೀಡುತ್ತಾನೆ. ಸಹಾಬಿಗಳು ಕೇಳಿದರು: ಓ ಅಲ್ಲಾಹನ ಸಂದೇಶವಾಹಕರೇ, ಆತುರಪಡುವುದು ಎಂದರೇನು? ಅವರು ಹೇಳಿದರು:

«يَقُولُ قَدْ دَعَوْتُ وَقَدْ دَعَوْتُ، فَلَمْ أَرَ يَسْتَجِيبُ لِي، فَيَسْتَحْسِرُ عِنْدَ ذَلِكَ وَيَدَعُ الدُّعَاءَ»:

"ನಾನು ಪ್ರಾರ್ಥಿಸಿದೆ, ಪ್ರಾರ್ಥಿಸಿದೆ. ಆದರೆ ನನಗೆ ಉತ್ತರ ಸಿಗಲಿಲ್ಲ ಎಂಬ ಹೇಳುತ್ತಾ ಸುಸ್ತಾಗಿ ಪ್ರಾರ್ಥಿಸುವುದನ್ನು

ಬಿಟ್ಟುಬಿಡುವುದು." ಮುಸ್ಲಿಂ (35).

6 ಅಲ್ಲಾಹನನ್ನು ಅವನ ಅತ್ಯುತ್ತಮ ಹೆಸರುಗಳ ಮೂಲಕ ಕರೆದು ಪ್ರಾರ್ಥಿಸುವುದು ಮತ್ತು ಸಂದರ್ಭಕ್ಕೆ ತಕ್ಕಂತೆ ಅವನ ಹೆಸರುಗಳನ್ನು ಬಳಸುವುದು. ಉದಾಹರಣೆಗೆ, ರಿಝ್ಕ್‌ಗಾಗಿ ಪ್ರಾರ್ಥಿಸುವಾಗ ಯಾ ರಝ್ಝಾಕ್ ಎಂದು ಕರೆಯುವುದು. ಕರುಣೆಗಾಗಿ ಪ್ರಾರ್ಥಿಸುವಾಗ ಯಾ ರಹ್ಮಾನ್ ಯಾ ರಹೀಮ್ ಎಂದು ಕರೆಯುವುದು. ಇಝ್ಝತ್‌ಗಾಗಿ ಪ್ರಾರ್ಥಿಸುವಾಗ ಯಾ ಅಝೀಝ್ ಎಂದು ಕರೆಯುವುದು. ಕ್ಷಮೆಗಾಗಿ ಪ್ರಾರ್ಥಿಸುವಾಗ ಯಾ ಗಫೂರ್ ಎಂದು ಕರೆಯುವುದು. ಗುಣಪಡಿಸುವುದಕ್ಕಾಗಿ ಪ್ರಾರ್ಥಿಸುವಾಗ ಯಾ ಶಾಫೀ ಎಂದು ಕರೆಯುವುದು. ಅಲ್ಲಾಹು ಹೇಳುತ್ತಾನೆ.

﴿وَلِلَّهِ ٱلۡأَسۡمَآءُ ٱلۡحُسۡنَىٰ فَٱدۡعُوهُ بِهَاۖ﴾ [الأعراف:١٨٠]

“ಅತ್ಯುತ್ತಮ ಹೆಸರುಗಳಿರುವುದು ಅಲ್ಲಾಹನಿಗೆ ಮಾತ್ರ. ಆದ್ದರಿಂದ ಆ ಹೆಸರುಗಳ ಮೂಲಕ ಅವನನ್ನು ಕರೆದು ಪ್ರಾರ್ಥಿಸಿರಿ.” [ಅಲ್-ಅಅರಾಫ್: 180].

7 ಪ್ರಾರ್ಥನೆಯ ವಚನಗಳನ್ನು ಪುನರಾವರ್ತಿಸುವುದು ಮತ್ತು ಪ್ರಾರ್ಥನೆ ಸ್ವೀಕರಿಸುವಂತೆ ಅಲ್ಲಾಹನನ್ನು ಒತ್ತಾಯಿಸುವುದು. ಇಬ್ನ್ ಅಬ್ಬಾಸ್(ರ) ರಿಂದ ವರದಿ. ಬದ್ರ್ ಯುದ್ಧದ ಸಂದರ್ಭ ಪ್ರವಾದಿ(ಸ) ರವರು ತಮ್ಮ ಸಹಾಬಾಗಳಿಗೆ ಪ್ರಾರ್ಥಿಸುತ್ತಿದ್ದರು. ಅವರ ಪ್ರಾರ್ಥನೆ ಹೀಗಿತ್ತು:

«اللَّهُمَّ أَنْجِزْ لِي مَا وَعَدْتَنِي، اللَّهُمَّ آتِ مَا وَعَدْتَنِي»:

“ಓ ಅಲ್ಲಾಹನೇ. ನೀನು ನನಗೆ ವಾಗ್ದಾನ

ಮಾಡಿದ್ದನ್ನು ನೆರವೇರಿಸು. ಓ ಅಲ್ಲಾಹನೇ. ನೀನು ನನಗೆ ವಾಗ್ದಾನ ಮಾಡಿದ್ದನ್ನು ಕೊಡು. ಪ್ರವಾದಿ(ಸ) ರವರು ಹೀಗೆ ಪ್ರಾರ್ಥಿಸುತ್ತಲೇ ಇದ್ದರು. ಎಲ್ಲಿಯವರೆಗೆಂದರೆ ಅವರ ಶಾಲು ಹೆಗಲಿನಿಂದ ಕೆಳಗೆ ಬೀಳುವ ತನಕ. ಅವರ ಬಳಿಯಿದ್ದ ಅಬೂಬಕರ್(ರ) ಹೇಳುತ್ತಿದ್ದರು: ಓ ಅಲ್ಲಾಹನ ಪ್ರವಾದಿಯವರೇ! ತಾವು ಪ್ರಾರ್ಥಿಸಿದ್ದು ಸಾಕು. (ಮುಸ್ಲಿಂ ಸಂಖ್ಯೆ 1763)

«اللَّهُمَّ اهْدِ دَوْساً وائْتِ بهم، اللَّهُمَّ اهْدِ دَوْساً وائت بهم»:

8 ಮೆತ್ತಗಿನ ಸ್ವರದಲ್ಲಿ ಪ್ರಾರ್ಥಿಸುವುದು. ಉಚ್ಚ ಸ್ವರದಲ್ಲಿ ಪ್ರಾರ್ಥಿಸಬಾರದು. ಅಲ್ಲಾಹು ಹೇಳುತ್ತಾನೆ:

﴿ٱدْعُوا۟ رَبَّكُمْ تَضَرُّعًا وَخُفْيَةً﴾ [الأعراف: ٥٥]

"ನೀವು ನಿಮ್ಮ ರಬ್ಬಿನೊಂದಿಗೆ ವಿನಮ್ರವಾಗಿ ಮತ್ತು ಮೆತ್ತಗಿನ ಸ್ವರದಲ್ಲಿ ಪ್ರಾರ್ಥಿಸಿರಿ." [ಅಲ್-ಅಅರಾಫ್: 55].

ಮೆತ್ತಗಿನ ಸ್ವರದಲ್ಲಿ ಪ್ರಾರ್ಥಿಸುವುದು ಪ್ರಾಮಾಣಿಕತೆಗೆ ಹೆಚ್ಚು ಹತ್ತಿರವಾಗಿದೆ. ಅಲ್ಲಾಹು ಝುಕರಿಯ್ಯ(ಅ) ರವರ ಪ್ರಾರ್ಥನೆಯನ್ನು ಈ ಕಾರಣದಿಂದಲೇ ಹೊಗಳಿದ್ದಾನೆ. ಅಲ್ಲಾಹು ಹೇಳುತ್ತಾನೆ:

﴿إِذْ نَادَىٰ رَبَّهُۥ نِدَآءً خَفِيًّا ٣﴾ [مريم: ٣]

"ಅವರು (ಝುಕರಿಯ್ಯ) ಮೆತ್ತಗಿನ ಸ್ವರದಲ್ಲಿ ಪ್ರಾರ್ಥಿಸಿದಾಗ.." [ಮರ್ಯಮ್ 3]

9 ಪ್ರಾರ್ಥನೆಯು ಅಲ್ಲಾಹನ ಸ್ತುತಿ ಮತ್ತು ಪ್ರಶಂಸೆಗಳನ್ನು ಒಳಗೊಂಡಿರುವುದು. ಏಕೆಂದರೆ ದಾಸನು ತನ್ನನ್ನು ಸ್ತುತಿಸುವುದರಲ್ಲಿ ನಿರತನಾಗುವುದನ್ನು ಅಲ್ಲಾಹು ಇಷ್ಟಪಡುತ್ತಾನೆ. ಇಬ್ನ್

ಮಸ್‌ಊದ್(ರ) ರಿಂದ ವರದಿ. ಪ್ರವಾದಿ(ಸ) ಹೇಳಿದರು:

«وَلَا أَحَدٌ أَحَبَّ إِلَيْهِ الْمَدْحُ مِنَ اللهِ وَلِذَلِكَ مَدَحَ نَفْسَهُ»:

"ಅಲ್ಲಾಹನಿಗಿಂತ ಹೆಚ್ಚು ಪ್ರಶಂಸೆಗಳನ್ನು ಪ್ರೀತಿಸುವವರುಯಾರೂಇಲ್ಲ.ಆದ್ದರಿಂದಲೇ ಅವನು ತನ್ನನ್ನು ತಾನೇ ಪ್ರಶಂಸಿಸಿದ್ದಾನೆ." (ಅಲ್-ಬುಖಾರಿ ಮುಸ್ಲಿಮ್)

10 ಪ್ರಾರ್ಥಸುವವನು ಪ್ರಾರ್ಥನೆಗೆ ಉತ್ತರ ಸಿಗುವ ಸಮಯಗಳನ್ನು ಹುಡುಕಿ ಆ ಸಮಯಗಳಲ್ಲಿ ಪ್ರಾರ್ಥಿಸುವುದು. ಕುರ್‌ಆನ್ ಮತ್ತು ಸುನ್ನತ್ತಿನಲ್ಲಿರುವಂತೆ ಉತ್ತರ ಸಿಗುವ ಸ್ಥಳಗಳು ಮತ್ತು ಸಮಯಗಳೆಂದರೆ: ಅಝಾನ್ ಮತ್ತು ಇಕಾಮತ್‌ನ ನಡುವೆ - ರಾತ್ರಿಯ ಕೊನೆಯ ಮೂರನೇ ಒಂದರಲ್ಲಿ -

ಶುಕ್ರವಾರದ ಒಂದು ಸಮಯದಲ್ಲಿ - ಕಡ್ಡಾಯ ನಮಾಝ್‌ಗಳ ನಂತರ- ಸುಜೂದ್‌ನಲ್ಲಿರುವಾಗ- ಮಳೆ ಸುರಿಯುವಾಗ - ಮುಸ್ಲಿಮನು ತನ್ನ ಸಹೋದರನಿಗಾಗಿ ಅವನ ಅನುಪಸ್ಥಿತಿಯಲ್ಲಿ ಪ್ರಾರ್ಥಿಸುವುದು - ತಂದೆಗಾಗಿ ಮಗ ಪ್ರಾರ್ಥಿಸುವುದು - ಪ್ರಯಾಣದಲ್ಲಿರುವಾಗ - ತುಳಿತಕ್ಕೊಳಗಾದಾಗ)

صحيح الدعاء والثناء على الله تعالى

# ಅಲ್ಲಾಹನ ಸ್ತುತಿಗಳು



﴿ٱلۡحَمۡدُ لِلَّهِ رَبِّ ٱلۡعَٰلَمِينَ ٢ ٱلرَّحۡمَٰنِ ٱلرَّحِيمِ ٣ مَٰلِكِ يَوۡمِ ٱلدِّينِ ٤﴾

[الفاتحة: ٢-٤]

ಸರ್ವಲೋಕಗಳ ಪರಿಪಾಲಕನಾಗಿರುವ, ಪರಮ ದಯಾಮಯನೂ, ಕರುಣಾನಿಧಿಯೂ, ಪ್ರತಿಫಲ ದಿನದ ಒಡೆಯನೂ ಆಗಿರುವ ಅಲ್ಲಾಹುವಿಗೆ ಸ್ತುತಿ.

﴿ٱلۡحَمۡدُ لِلَّهِ فَاطِرِ ٱلسَّمَٰوَٰتِ وَٱلۡأَرۡضِ جَاعِلِ ٱلۡمَلَٰٓئِكَةِ رُسُلًا أُوْلِيٓ أَجۡنِحَةٖ مَّثۡنَىٰ وَثُلَٰثَ وَرُبَٰعَۚ يَزِيدُ فِي ٱلۡخَلۡقِ مَا يَشَآءُۚ إِنَّ ٱللَّهَ عَلَىٰ كُلِّ شَيۡءٖ قَدِيرٞ ١﴾ [فاطر:١]

"ಆಕಾಶಗಳನ್ನು ಮತ್ತು ಭೂಮಿಯನ್ನು ಸೃಷ್ಟಿಸಿರುವ ಮತ್ತು ಮಲಕ್‌ಗಳನ್ನು ಎರಡು, ಮೂರು ಹಾಗೂ ನಾಲ್ಕು ರೆಕ್ಕೆಗಳುಳ್ಳ ದೂತರನ್ನಾಗಿ ಕಳುಹಿಸಿರುವ ಅಲ್ಲಾಹನಿಗೆ ಸ್ತುತಿ. ಸೃಷ್ಟಿಯಲ್ಲಿ ಅವನಿಚ್ಛಿಸುವುದನ್ನು ಅವನು ಅಧಿಕಗೊಳಿಸುವನು. ಖಂಡಿತವಾಗಿಯೂ ಅಲ್ಲಾಹು ಸರ್ವ ವಿಷಯಗಳಲ್ಲೂ ಸಾಮರ್ಥ್ಯವುಳ್ಳವನಾಗಿರುವನು." (ಕುರ್‌ಆನ್ 35:1)

﴿ٱلْحَمْدُ لِلَّهِ ٱلَّذِى خَلَقَ ٱلسَّمَٰوَٰتِ وَٱلْأَرْضَ وَجَعَلَ ٱلظُّلُمَٰتِ وَٱلنُّورَ﴾ [الأنعام:١]

"ಆಕಾಶಗಳನ್ನೂ ಭೂಮಿಯನ್ನೂ ಸೃಷ್ಟಿಸಿರುವ ಮತ್ತು ಅಂಧಕಾರಗಳನ್ನೂ ಪ್ರಕಾಶವನ್ನೂ ಉಂಟುಮಾಡಿರುವ ಅಲ್ಲಾಹನಿಗೆ ಸ್ತುತಿ. " (ಕುರ್‌ಆನ್ 6:1)

﴿ٱلۡحَمۡدُ لِلَّهِ ٱلَّذِي لَهُۥ مَا فِي ٱلسَّمَٰوَٰتِ وَمَا فِي ٱلۡأَرۡضِ وَلَهُ ٱلۡحَمۡدُ فِي ٱلۡأٓخِرَةِۚ وَهُوَ ٱلۡحَكِيمُ ٱلۡخَبِيرُ ١﴾ [سبأ:١]

"ಆಕಾಶಗಳಲ್ಲಿರುವುದು ಮತ್ತು ಭೂಮಿಯಲ್ಲಿರುವುದು ಯಾರದೋ ಆ ಅಲ್ಲಾಹನಿಗೆ ಸ್ತುತಿ. ಪರಲೋಕದಲ್ಲೂ ಅವನಿಗೇ ಸ್ತುತಿ. ಅವನು ಯುಕ್ತಿಪೂರ್ಣನೂ, ಸೂಕ್ಷ್ಮಜ್ಞಾನಿಯೂ ಆಗಿರುವನು." (ಕುರ್‌ಆನ್ 34:1)

1

«الْحَمْدُ لِلهِ حَمْدًا كَثِيرًا طَيِّبًا مُبَارَكًا فِيهِ»

ಅಲ್‌ಹಮ್ದು ಲಿಲ್ಲಾಹಿ ಹಮ್ದನ್, ಕಸೀರನ್, ತಯ್ಯಿಬನ್, ಮುಬಾರಕನ್ ಫೀಹಿ

ಅಲ್ಲಾಹನಿಗೆ ಸರ್ವಸ್ತುತಿ. ಅತ್ಯಧಿಕವಾದ, ಉತ್ತಮವಾದ, ಅನುಗ್ರಹೀತವಾದ ಸ್ತುತಿ.

2

«رَبَّنَا لَكَ الْحَمْدُ مِلْءُ السَّمَاوَاتِ وَالْأَرْضِ، وَمِلْءُ مَا شِئْتَ مِنْ شَيْءٍ بَعْدُ، أَهْلَ الثَّنَاءِ وَالْمَجْدِ، أَحَقُّ مَا قَالَ الْعَبْدُ، وَكُلُّنَا لَكَ عَبْدٌ: اللَّهُمَّ لَا مَانِعَ لِمَا أَعْطَيْتَ، وَلَا مُعْطِيَ لِمَا مَنَعْتَ، وَلَا يَنْفَعُ ذَا الْجَدِّ مِنْكَ الْجَدُّ»

ರಬ್ಬನಾ ಲಕಲ್ ಹಮ್ದ್, ಮಿಲ್‌ಉಸ್ಸಮಾವಾತಿ ವಲ್ ಅರ್‌ದಿ, ವಮಿಲ್‌ಉ ಮಾ ಶಿಅ್‌ತ ಮಿನ್ ಶೈಇನ್ ಬಅ್‌ದು, ಅಹ್ಲಸ್ಸನಾಇ ವಲ್ ಮಜ್‌ದಿ, ಅಹಕ್ಕು ಮಾ ಕಾಲಲ್ ಅಬ್ದು, ವಕುಲ್ಲುನಾ ಲಕ ಅಬ್ದ್. ಅಲ್ಲಾಹುಮ್ಮ ಲಾ ಮಾನಿಅ ಲಿಮಾ ಅಅ್‌ತಯ್ತ, ವಲಾ ಮುಅ್‌ತಿಯ ಲಿಮಾ ಮನಅ್‌ತ, ವಲಾ ಯನ್‌ಫಉ ದಲ್ ಜದ್ದಿ ಮಿನ್ಕಲ್ ಜದ್ದ್.

ಓ ನಮ್ಮ ರಬ್ಬೇ! ನಿನಗೆ ಸರ್ವಸ್ತುತಿ. ಆಕಾಶಗಳ ಮತ್ತು ಭೂಮಿಯ ತುಂಬಾ ಮತ್ತು ನೀನಿಚ್ಛಿಸುವ ಎಲ್ಲ ವಸ್ತುಗಳ ತುಂಬಾ (ನಿನಗೆ ಸ್ತುತಿ). ಸ್ತುತಿ ಮತ್ತು ಮಹಾತ್ಮೆಗೆ ಅರ್ಹನಾದವನೇ! ದಾಸನು ಹೇಳಿದ ಅತಿದೊಡ್ಡ ಸತ್ಯವಿದು. ನಾವೆಲ್ಲರೂ ನಿನ್ನ ದಾಸರು. ಓ ಅಲ್ಲಾಹ್! ನೀನು ಕೊಟ್ಟದ್ದನ್ನು ತಡೆಯುವವರಿಲ್ಲ. ನೀನು ತಡೆದುದನ್ನು ಕೊಡುವವರಿಲ್ಲ. ಸಿರಿವಂತನ ಯಾವುದೇ ಸಿರಿವಂತಿಕೆಯು ನಿನ್ನ ಬಳಿ ಪ್ರಯೋಜನಪಡದು.

3

«اللَّهُمَّ لَكَ الْحَمْدُ كُلُّهُ، وَإِلَيْكَ يَرْجِعُ الْأَمْرُ كُلُّهُ»

ಅಲ್ಲಾಹುಮ್ಮ ಲಕಲ್ ಹಮ್ದು ಕುಲ್ಲುಹೂ ವಇಲೈಕ ಯರ್ಜಿಉಲ್ ಅಮ್ರು ಕುಲ್ಲುಹೂ

ಓ ಅಲ್ಲಾಹ್! ಸ್ತುತಿಗಳೆಲ್ಲವೂ ನಿನಗೆ ಮೀಸಲು. ವಿಷಯಗಳೆಲ್ಲವೂ ಮರಳುವುದು ನಿನ್ನ ಬಳಿಗೇ ಆಗಿದೆ.

4

«اللَّهُمَّ رَبَّنَا لَكَ الحَمْدُ أَنْتَ قَيِّمُ السَّمَوَاتِ وَالأَرْضِ، وَلَكَ الحَمْدُ أَنْتَ رَبُّ السَّمَوَاتِ وَالأَرْضِ وَمَنْ فِيهِنَّ، وَلَكَ الحَمْدُ أَنْتَ نُورُ السَّمَوَاتِ وَالأَرْضِ وَمَنْ فِيهِنَّ، أَنْتَ الحَقُّ، وَقَوْلُكَ الحَقُّ، وَوَعْدُكَ الحَقُّ، وَلِقَاؤُكَ الحَقُّ، وَالجَنَّةُ حَقٌّ، وَالنَّارُ حَقٌّ، (وَالنَّبِيُّونَ حَقٌّ، وَمُحَمَّدٌ صَلَّى اللهُ عَلَيْهِ وَسَلَّمَ حَقٌّ) وَالسَّاعَةُ حَقٌّ، اللَّهُمَّ لَكَ أَسْلَمْتُ، وَبِكَ آمَنْتُ، وَعَلَيْكَ تَوَكَّلْتُ، (وَإِلَيْكَ أَنَبْتُ) وَإِلَيْكَ خَاصَمْتُ، وَبِكَ حَاكَمْتُ، فَاغْفِرْ لِي مَا قَدَّمْتُ وَمَا أَخَّرْتُ، وَأَسْرَرْتُ وَأَعْلَنْتُ، وَمَا أَنْتَ أَعْلَمُ بِهِ مِنِّي، (أَنْتَ المُقَدِّمُ، وَأَنْتَ المُؤَخِّرُ) لاَ إِلَهَ إِلَّا أَنْتَ»

ಅಲ್ಲಾಹುಮ್ಮ ರಬ್ಬನಾ ಲಕಲ್ ಹಮ್ದು, ಅನ್ತ ಕಯ್ಯಿಮು ಸ್ಸಮಾವಾತಿ ವಲ್ ಅರ್‌ದಿ, ವಲಕಲ್ ಹಮ್ದು, ಅನ್ತ ರಬ್ಬು ಸ್ಸಮಾವಾತಿ ವಲ್ ಅರ್‌ದಿ, ವಮನ್ ಫೀಹಿನ್ನ, ವಲಕಲ್ ಹಮ್ದು, ಅನ್ತ ನೂರು ಸ್ಸಮಾವಾತಿ ವಲ್ ಅರ್‌ದಿ, ವಮನ್ ಫೀಹಿನ್ನ, ಅನ್ತಲ್ ಹಕ್ಕು, ವಕೌಲುಕಲ್ ಹಕ್ಕು, ವವಅ್‌ದುಕಲ್ ಹಕ್ಕು, ವಲಿಕಾಉಕ ಹಕ್ಕುನ್, ವಲ್ ಜನ್ನತು ಹಕ್ಕುನ್, ವನ್ನಾರು ಹಕ್ಕುನ್, ವನ್ನಬಿಯ್ಯೂನ ಹಕ್ಕುನ್, ವಮುಹಮ್ಮದುನ್ ಸಲ್ಲಲ್ಲಾಹು ಅಲೈಹಿ ವಸಲ್ಲಮ ಹಕ್ಕುನ್, ವಸ್ಸಾಅತು ಹಕ್ಕುನ್, ಅಲ್ಲಾಹುಮ್ಮ ಲಕ ಅಸ್ಲಮ್ತು, ವಬಿಕ ಆಮನ್ತು, ವಅಲೈಕ ತವಕ್ಕಲ್ತು, ವಇಲೈಕ ಅನಬ್ತು, ವಇಲೈಕ ಖಾಸಮ್ತು, ವಬಿಕ ಹಾಕಮ್ತು, ಫಗ್‌ಫಿರ್ ಲೀ ಮಾ ಕದ್ದಮ್ತು ವಮಾ ಅಖ್ಖರ್ತು, ವಅಸ್ರರ್ತು ವಅಅ್‌ಲನ್ತು, ವಮಾ ಅನ್ತ ಅಅಲಮು ಬಿಹೀ ಮಿನ್ನೀ,

## ಅನ್ತಲ್ ಮುಕದ್ದಿಮು ವಅನ್ತಲ್ ಮುಅಖ್ಖಿರು ಲಾ ಇಲಾಹ ಇಲ್ಲಾ ಅನ್ತ.

ಓ ಅಲ್ಲಾಹ್! ನಿನಗೆ ಸರ್ವಸ್ತುತಿ. ನೀನು ಭೂಮ್ಯಾಕಾಶಗಳ ನಿಯಂತ್ರಕನಾಗಿರುವೆ. ನಿನಗೆ ಸರ್ವಸ್ತುತಿ. ನೀನು ಭೂಮ್ಯಾಕಾಶಗಳ ಮತ್ತು ಅದರಲ್ಲಿರುವವರ ರಬ್ಬ್ ಆಗಿರುವೆ. ನಿನಗೆ ಸರ್ವಸ್ತುತಿ. ನೀನು ಭೂಮ್ಯಾಕಾಶಗಳ ಮತ್ತು ಅದರಲ್ಲಿರುವವರ ಬೆಳಕಾಗಿರುವೆ. ನೀನು ಸತ್ಯ. ನಿನ್ನ ಮಾತು ಸತ್ಯ. ನಿನ್ನ ವಾಗ್ದಾನ ಸತ್ಯ. ನಿನ್ನ ಭೇಟಿ ಸತ್ಯ. ಸ್ವರ್ಗ ಸತ್ಯ. ನರಕ ಸತ್ಯ. ಪ್ರವಾದಿಗಳು ಸತ್ಯ. ಮುಹಮ್ಮದ್(ಸ) ಸತ್ಯ. ಅಂತ್ಯಘಳಿಗೆಯು ಸತ್ಯ. ಓ ಅಲ್ಲಾಹ್! ನಾನು ನಿನಗೆ ಶರಣಾಗಿದ್ದೇನೆ. ನಿನ್ನಲ್ಲಿ ವಿಶ್ವಾಸವನ್ನಿಟ್ಟಿದ್ದೇನೆ. ನಿನ್ನ ಕಡೆಗೆ ಪಶ್ಚಾತ್ತಾಪಪಟ್ಟು ಮರಳಿದ್ದೇನೆ. ನಿನಗಾಗಿ

ತರ್ಕಿಸುತ್ತೇನೆ. ನಿನ್ನಲ್ಲಿ ವಿಧಿಯನ್ನು ಹುಡುಕುತ್ತೇನೆ. ಆದುದರಿಂದ ನಾನು ಈಗಾಗಲೇ ಮಾಡಿರುವ ಮತ್ತು ಮುಂದೆ ಮಾಡಲಿರುವ, ಮರೆಮಾಚಿರುವ ಮತ್ತು ಬಹಿರಂಗಪಡಿಸಿರುವ ಮತ್ತು ನನ್ನ ಬಗ್ಗೆ ನಿನಗೆ ತಿಳಿದಿರುವ ಎಲ್ಲಾ ಪಾಪಗಳನ್ನು ಕ್ಷಮಿಸು. ನೀನು ಮುಂದೂಡುವವನು ಮತ್ತು ಹಿಂದೂಡುವವನು. ನಿನ್ನ ಹೊರತು ಅನ್ಯ ಸತ್ಯ ಆರಾಧ್ಯರಿಲ್ಲ.

﴿ٱللَّهُمَّ مَٰلِكَ ٱلۡمُلۡكِ تُؤۡتِي ٱلۡمُلۡكَ مَن تَشَآءُ
وَتَنزِعُ ٱلۡمُلۡكَ مِمَّن تَشَآءُ وَتُعِزُّ مَن تَشَآءُ
وَتُذِلُّ مَن تَشَآءُۖ بِيَدِكَ ٱلۡخَيۡرُۖ إِنَّكَ عَلَىٰ كُلِّ
شَيۡءٖ قَدِيرٞ ٢٦ تُولِجُ ٱلَّيۡلَ فِي ٱلنَّهَارِ وَتُولِجُ
ٱلنَّهَارَ فِي ٱلَّيۡلِۖ وَتُخۡرِجُ ٱلۡحَيَّ مِنَ ٱلۡمَيِّتِ
وَتُخۡرِجُ ٱلۡمَيِّتَ مِنَ ٱلۡحَيِّۖ وَتَرۡزُقُ مَن تَشَآءُ
بِغَيۡرِ حِسَابٖ ٢٧﴾ [آل عمران:٢٦-٢٧]

"ಹೇಳಿರಿ: ‘ಓ ಆಧಿಪತ್ಯದ ಒಡೆಯನಾಗಿರುವ ಅಲ್ಲಾಹುವೇ! ನೀನಿಚ್ಛಿಸುವವರಿಗೆ ನೀನು ಆಧಿಪತ್ಯವನ್ನು ನೀಡುವೆ ಮತ್ತು ನೀನಿಚ್ಛಿಸುವವರಿಂದ ನೀನು ಆಧಿಪತ್ಯವನ್ನು ತೆಗೆದುಬಿಡುವೆ.

ನೀನಿಚ್ಛಿಸುವವರನ್ನು ನೀನು ಗೌರವಿಸುವೆ ಮತ್ತು ನೀನಿಚ್ಛಿಸುವವರನ್ನು ನೀನು ಅವಮಾನ ಮಾಡುವೆ. ಒಳಿತಿರುವುದು ನಿನ್ನ ಕೈಯಲ್ಲಾಗಿದೆ. ಖಂಡಿತವಾಗಿಯೂ ನೀನು ಸಕಲ ವಿಷಯಗಳಲ್ಲೂ ಸಾಮರ್ಥ್ಯವುಳ್ಳವನಾಗಿರುವೆ. ನೀನು ರಾತ್ರಿಯನ್ನು ಹಗಲಿನಲ್ಲಿ ನುಸುಳಿಸುವೆ ಮತ್ತು ಹಗಲನ್ನು ರಾತ್ರಿಯಲ್ಲಿ ನುಸುಳಿಸುವೆ. ನಿರ್ಜೀವಿಯಿಂದ ಜೀವವಿರುವುದನ್ನು ಹೊರತರುವೆ ಮತ್ತು ಜೀವವಿರುವುದರಿಂದ ನಿರ್ಜೀವಿಯನ್ನು ಹೊರತರುವೆ. ನೀನಿಚ್ಛಿಸುವವರಿಗೆ ನೀನು ಲೆಕ್ಕವಿಲ್ಲದೆ ನೀಡುವೆ'." (ಕುರ್‌ಆನ್ 3:27)

ಇವು ಸೂರ ಆಲು ಇಮ್ರಾನ್‌ನ 26-27 ಆಯತ್‌ಗಳು. ಆಯತ್ತನ್ನು ಪ್ರಾರ್ಥನೆಯ ರೂಪಕ್ಕೆ ತರುವುದಕ್ಕಾಗಿ ಆರಂಭದಲ್ಲಿರುವ ಕುಲ್ ಎಂಬ ಪದವನ್ನು ಬಿಡಲಾಗಿದೆ.

5

«اللَّهُمَّ رَبَّ السَّمَوَاتِ وَرَبَّ الْأَرْضِ وَرَبَّ الْعَرْشِ الْعَظِيمِ، رَبَّنَا وَرَبَّ كُلِّ شَيْءٍ، فَالِقَ الْحَبِّ وَالنَّوَى، وَمُنْزِلَ التَّوْرَاةِ وَالْإِنْجِيلِ وَالْفُرْقَانِ، أَعُوذُ بِكَ مِنْ شَرِّ كُلِّ شَيْءٍ أَنْتَ آخِذٌ بِنَاصِيَتِهِ، اللَّهُمَّ أَنْتَ الْأَوَّلُ فَلَيْسَ قَبْلَكَ شَيْءٌ، وَأَنْتَ الْآخِرُ فَلَيْسَ بَعْدَكَ شَيْءٌ، وَأَنْتَ الظَّاهِرُ فَلَيْسَ فَوْقَكَ شَيْءٌ، وَأَنْتَ الْبَاطِنُ فَلَيْسَ دُونَكَ شَيْءٌ، اقْضِ عَنَّا الدَّيْنَ، وَأَغْنِنَا مِنَ الْفَقْرِ»

ಅಲ್ಲಾಹುಮ್ಮ ರಬ್ಬ ಸ್ಸಮಾವಾತಿ ಸ್ಸಬ್‌ಇ ವರಬ್ಬಲ್ ಅರ್ಶಿಲ್ ಅಝೀಮ್, ರಬ್ಬನಾ

ವರಬ್ಬ ಕುಲ್ ಶೈಇನ್, ಫಾಲಿಕಲ್ ಹಬ್ಬಿ ವನ್ನವಾ, ವಮುನ್ಝಿಲ ತೌರಾತಿ ವಲ್ ಇಂಜೀಲಿ ವಲ್ ಫುರ್ಕಾನ್, ಅಊದು ಬಿಕ ಮಿನ್ ಶರ್‍ರಿ ಕುಲ್ಲಿ ಶೈಇನ್ ಅನ್ತ ಆಖಿದುನ್ ಬಿನಾಸಿಯತಿಹೀ, ಅಲ್ಲಾಹುಮ್ಮ ಅನ್ತಲ್ ಅವ್ವಲು ಫಲೈಸ ಕಬ್ಲಕ ಶೈಉನ್, ವಅನ್ತಲ್ ಆಖಿರು ಫಲೈಸ ಬಅ್‌ದಕ ಶೈಉನ್, ವಅನ್ತ ಝ್ಝಾಹಿರು ಫಲೈಸ ಫೌಕಕ ಶೈಉನ್, ವಅನ್ತಲ್ ಬಾತಿನು ಫಲೈಸ ದೂನಕ ಶೈಉನ್, ಇಕ್ದಿ ಅನ್ನ ದ್ದಯ್ನ ವಅಗ್ನಿನಾ ಮಿನಲ್ ಫಕ್ರ್

“ಓ ಅಲ್ಲಾಹ್! ಏಳಾಕಾಶಗಳ ರಬ್ಬೇ! ಭೂಮಿಯ ರಬ್ಬೇ! ಮಹಾ ಸಿಂಹಾಸನದ ರಬ್ಬೇ! ನಮ್ಮ ರಬ್ಬೇ! ಎಲ್ಲ ವಸ್ತುಗಳ ರಬ್ಬೇ! ಧಾನ್ಯ ಮತ್ತು ಖರ್ಜೂರ ಬೀಜವನ್ನು ಮೊಳಕೆ ಬರಿಸುವವನೇ! ತೌರಾತ್, ಇಂಜೀಲ್ ಮತ್ತು

ಫುರ್ಕಾನನ್ನು ಅವತೀರ್ಣಗೊಳಿಸಿದವನೇ! ನಿನ್ನ ನಿಯಂತ್ರಣದಲ್ಲಿರುವ ಸರ್ವ ವಸ್ತುಗಳ ಕೆಡುಕಿನಿಂದ ನಾನು ನಿನ್ನಲ್ಲಿ ರಕ್ಷೆ ಬೇಡುತ್ತೇನೆ. ಓ ಅಲ್ಲಾಹ್! ನೀನೇ ಆದಿ. ನಿನಗಿಂತ ಮೊದಲು ಏನೂ ಇಲ್ಲ. ನೀನೇ ಅಂತ್ಯ. ನಿನ್ನ ನಂತರ ಏನೂ ಇಲ್ಲ. ನೀನೇ ಅತ್ಯುನ್ನತನು. ನಿನಗಿಂತ ಮೇಲೆ ಏನೂ ಇಲ್ಲ. ನೀನೇ ಅತಿನಿಕಟನು. ನಿನಗಿಂತ ಹತ್ತಿರವಾಗಿ ಏನೂ ಇಲ್ಲ. ನಮ್ಮ ಸಾಲವನ್ನು ತೀರಿಸು. ನಮ್ಮನ್ನು ಬಡತನದಿಂದ ರಕ್ಷಿಸು."

6

«اللَّهُمَّ إِنِّي أُشْهِدُكَ وَأُشْهِدُ مَلَائِكَتَكَ وَحَمَلَةَ عَرْشِكَ، وَأُشْهِدُ مَنْ فِي السَّمَاوَاتِ وَمَنْ فِي الْأَرْضِ، أَنَّكَ أَنْتَ اللهُ لَا إِلَهَ إِلَّا أَنْتَ وَحْدَكَ لَا شَرِيكَ لَكَ، وَأَشْهَدُ أَنَّ مُحَمَّدًا عَبْدُكَ وَرَسُولُكَ»

ಅಲ್ಲಾಹುಮ್ಮ ಇನ್ನೀ ಅಸ್ಬಹ್ತು, ಉಶ್‌ಹಿದುಕ ವಉಶ್‌ಹಿದು ಹಮಲತ ಅರ್ಶಿಕ, ವಮಲಾಇಕತಕ, ವಜಮೀಅ ಖಲ್ಕಿಕ, ಅನ್ನಕ ಅನ್ತಲ್ಲಾಹು ಲಾ ಇಲಾಹ ಇಲ್ಲಾ ಅನ್ತ ವಹ್ದಕ ಲಾ ಶರೀಕ ಲಕ, ವಅನ್ನ ಮುಹಮ್ಮದನ್ ಅಬ್ದುಕ ವರಸೂಲುಕ್

ಓ ಅಲ್ಲಾಹ್! ನೀನೇ ಅಲ್ಲಾಹು, ನಿನ್ನ ಹೊರತು ಅನ್ಯ ಸತ್ಯ ಆರಾಧ್ಯರಿಲ್ಲ, ನೀನು ಏಕೈಕನು,

ನಿನಗೆ ಯಾವುದೇ ಸಹಭಾಗಿಗಳಿಲ್ಲ, ಮುಹಮ್ಮದ್(ಸ) ರವರು ನಿನ್ನ ದಾಸ ಮತ್ತು ಸಂದೇಶವಾಹಕರು ಎಂಬುದಕ್ಕೆ ನಿನ್ನನ್ನು, ನಿನ್ನ ಅರ್ಶ್‌ನ ವಾಹಕರನ್ನು, ನಿನ್ನ ಮಲಕ್‌ಗಳನ್ನು ಮತ್ತು ನಿನ್ನ ಸಂಪೂರ್ಣ ಸೃಷ್ಟಿಗಳನ್ನು ಸಾಕ್ಷಿಯಾಗಿಸುತ್ತಾ, ನಿನ್ನ ಅನುಗ್ರಹ ಮತ್ತು ಸಂರಕ್ಷಣೆಯೊಂದಿಗೆ ನಾನು ಬೆಳಗನ್ನು ಪ್ರವೇಶಿಸಿದ್ದೇನೆ."

7

«اللَّهُمَّ إِنِّي أَسْأَلُكَ بِأَنِّي أَشْهَدُ أَنَّكَ أَنْتَ اللهُ لاَ إِلَهَ إِلَّا أَنْتَ الأَحَدُ الصَّمَدُ، الَّذِي لَمْ يَلِدْ وَلَمْ يُولَدْ وَلَمْ يَكُنْ لَهُ كُفُوًا أَحَدٌ»

ಅಲ್ಲಾಹುಮ್ಮ ಇನ್ನೀ ಅಸ್‌ಅಲುಕ, ಬಿಅನ್ನೀ ಅಶ್‌ಹದು ಅನ್ನಕ ಅನ್ತಲ್ಲಾಹು ಲಾ ಇಲಾಹ ಇಲ್ಲಾ ಅನ್ತಲ್ ಅಹದು ಸ್ಸಮದುಲ್ಲದೀ ಲಮ್ ಯಲಿದ್ ವಲಮ್ ಯೂಲದ್ ವಲಮ್ ಯಕುನ್ ಲಹೂ ಕುಫುವನ್ ಅಹದ್

"ಓ ಅಲ್ಲಾಹ್! ನೀನು ಅಲ್ಲಾಹು, ನಿನ್ನ ಹೊರತು ಅನ್ಯ ಸತ್ಯ ಆರಾಧ್ಯರಿಲ್ಲ ಎಂದು ಸಾಕ್ಷ್ಯ ವಹಿಸುತ್ತಾ, ನೀನು ಏಕೈಕನು ಮತ್ತು ನಿರಪೇಕ್ಷನು, ನಿನಗೆ ಯಾವುದೇ ಸಂತತಿಯಿಲ್ಲ, ನೀನು ಯಾರ ಸಂತತಿಯೂ

ಅಲ್ಲ, ನಿನಗೆ ಸರಿಸಮಾನರಾಗಿ ಯಾರೂ ಇಲ್ಲ ಎನ್ನುವುದನ್ನು ಮುಂದಿಟ್ಟು ನಾನು ನಿನ್ನಲ್ಲಿ ಬೇಡುತ್ತೇನೆ."

ಈ ಪ್ರಾರ್ಥನೆ ಇಸ್ಮುಲ್ ಅಅಝಮ್ ಆಗಿದೆಯೆಂದು ಹದೀಸಿನಲ್ಲಿ ಬಂದಿದೆ. ಇದರ ಮೂಲಕ ಪ್ರಾರ್ಥಿಸಿದರೆ ಉತ್ತರ ಸಿಗುತ್ತದೆ ಮತ್ತು ಬೇಡಿದರೆ ಬೇಡಿಕೆ ಈಡೇರುತ್ತದೆ.

## 8

«لَا إِلَهَ إِلَّا اللهُ الْعَظِيمُ الْحَلِيمُ، لَا إِلَهَ إِلَّا اللهُ رَبُّ الْعَرْشِ الْعَظِيمِ، لَا إِلَهَ إِلَّا اللهُ رَبُّ السَّمَاوَاتِ وَرَبُّ الْأَرْضِ وَرَبُّ الْعَرْشِ الْكَرِيمِ»

ಲಾ ಇಲಾಹ ಇಲ್ಲಲ್ಲಾಹುಲ್ ಅಝೀಮುಲ್ ಹಲೀಮ್, ಲಾ ಇಲಾಹ ಇಲ್ಲಲ್ಲಾಹು ರಬ್ಬುಲ್ ಅರ್ಶಿಲ್ ಅಝೀಮ್, ಲಾ ಇಲಾಹ ಇಲ್ಲಲ್ಲಾಹು ರಬ್ಬು ಸ್ಸಮಾವಾತಿ ವರಬ್ಬುಲ್ ಅರ್ದಿ, ವರಬ್ಬುಲ್ ಅರ್ಶಿಲ್ ಕರೀಮ್

“ಮಹಾನನೂ ಸಹನಾಶೀಲನೂ ಆದ ಅಲ್ಲಾಹನ ಹೊರತು ಅನ್ಯ ಸತ್ಯ ಆರಾಧ್ಯರಿಲ್ಲ. ಮಹಾ ಸಿಂಹಾಸನದ ಒಡೆಯನಾದ ಅಲ್ಲಾಹನ ಹೊರತು ಅನ್ಯ

ಸತ್ಯ ಆರಾಧ್ಯರಿಲ್ಲ ಆಕಾಶಗಳ, ಭೂಮಿಯ ಮತ್ತು ಗೌರವಾನ್ವಿತ ಸಿಂಹಾಸನದ ರಬ್ಬ್ ಆಗಿರುವ ಅಲ್ಲಾಹನ ಹೊರತು ಅನ್ಯ ಸತ್ಯ ಆರಾಧ್ಯರಿಲ್ಲ."

## ಇದು ಕಷ್ಟ ಮತ್ತು ದುಃಖಗಳನ್ನು ನಿವಾರಿಸುವ ಪ್ರಾರ್ಥನೆ

9

«اللَّهُ، اللَّهُ رَبِّي لَا أُشْرِكُ بِهِ شَيْئًا»

ಅಲ್ಲಾಹು ಅಲ್ಲಾಹು ರಬ್ಬೀ ಲಾ ಉಶ್ರಿಕು ಬಿಹೀ ಶೈಅಃ

"ಅಲ್ಲಾಹು, ಅಲ್ಲಾಹು ನನ್ನ ರಬ್ಬ್. ನಾನು ಅವನೊಂದಿಗೆ ಏನನ್ನೂ ಸಹಭಾಗಿಯನ್ನಾಗಿ ಮಾಡುವುದಿಲ್ಲ."

## ಇದು ಕಷ್ಟ ಮತ್ತು ದುಃಖಗಳನ್ನು ನಿವಾರಿಸುವ ಪ್ರಾರ್ಥನೆ

## 10

«لَا إِلَهَ إِلَّا اللهُ وَحْدَهُ لَا شَرِيكَ لَهُ، اللهُ أَكْبَرُ كَبِيرًا، وَالْحَمْدُ لِلهِ كَثِيرًا، سُبْحَانَ اللهِ رَبِّ الْعَالَمِينَ، لَا حَوْلَ وَلَا قُوَّةَ إِلَّا بِاللهِ الْعَزِيزِ الْحَكِيمِ»

ಲಾ ಇಲಾಹ ಇಲ್ಲಲ್ಲಾಹು ವಹ್ದಹೂ ಲಾ ಶರೀಕ ಲಹೂ, ಅಲ್ಲಾಹು ಅಕ್ಬರು ಕಬೀರಾ, ವಲ್‌ಹಮ್ದುಲಿಲ್ಲಾಹಿ ಕಸೀರಾ, ಸುಬ್‌ಹಾನಲ್ಲಾಹಿ ರಬ್ಬಿಲ್ ಆಲಮೀನ್, ಲಾ ಹೌಲ ವಲಾ ಕುವ್ವತ ಇಲ್ಲಾ ಬಿಲ್ಲಾಹಿಲ್ ಅಝೀಝಿಲ್ ಹಕೀಮ್

“ಅಲ್ಲಾಹನ ಹೊರತು ಅನ್ಯ ಸತ್ಯ ಆರಾಧ್ಯರಿಲ್ಲ, ಅವನು ಏಕೈಕನು ಮತ್ತು ಸಹಭಾಗಿಗಳಿಲ್ಲದವನು. ಅಲ್ಲಾಹು

ಮಹಾನನು. ಅಲ್ಲಾಹನಿಗೆ ಅತ್ಯಧಿಕ ಸ್ತುತಿ. ಸರ್ವಲೋಕಗಳ ರಬ್ಬಾಗಿರುವ ಅಲ್ಲಾಹು ಸಕಲ ನ್ಯೂನತೆಗಳಿಂದಲೂ ಪರಿಶುದ್ಧನು. ಮಹಾ ಪ್ರತಾಪವುಳ್ಳವನೂ ಯುಕ್ತಿಪೂರ್ಣನೂ ಆದ ಅಲ್ಲಾಹನಿಂದಲ್ಲದೆ ಯಾವುದೇ ಶಕ್ತಿ ಸಾಮರ್ಥ್ಯವಿಲ್ಲ."

## 11

«لَا إِلَهَ إِلَّا اللهُ وَحْدَهُ لَا شَرِيكَ لَهُ، لَهُ الْمُلْكُ، وَلَهُ الْحَمْدُ، وَهُوَ عَلَى كُلِّ شَيْءٍ قَدِيرٌ، سُبْحَانَ اللهِ، وَالْحَمْدُ لِلَّهِ، وَلَا إِلَهَ إِلَّا اللهُ، وَاللهُ أَكْبَرُ، وَلَا حَوْلَ وَلَا قُوَّةَ إِلَّا بِاللهِ الْعَلِيِّ الْعَظِيمِ»

ಲಾ ಇಲಾಹ ಇಲ್ಲಲ್ಲಾಹು ವಹ್ದಹೂ ಲಾ ಶರೀಕ ಲಹೂ, ಲಹುಲ್ ಮುಲ್ಕು ವಲಹುಲ್ ಹಮ್ದು, ವಹುವ ಅಲಾ ಕುಲ್ಲಿ ಶೈಇನ್ ಕದೀರ್. ಸುಬ್‌ಹಾನಲ್ಲಾಹಿ, ವಲ್‌ಹಮ್ದುಲಿಲ್ಲಾಹಿ, ವಲಾಇಲಾಹ ಇಲ್ಲಲ್ಲಾಹು, ವಲ್ಲಾಹು ಅಕ್ಬರ್. ವಲಾ ಹೌಲ ವಲಾ ಕುವ್ವತ ಇಲ್ಲಾ ಬಿಲ್ಲಾಹಿಲ್ ಅಲಿಯ್ಯಿಲ್ ಅಝೀಮ್.

“ಅಲ್ಲಾಹನ ಹೊರತು ಅನ್ಯ ಸತ್ಯ ಆರಾಧ್ಯರಿಲ್ಲ, ಅವನು ಏಕೈಕನು ಮತ್ತು ಸಹಭಾಗಿಗಳಿಲ್ಲದವನು. ಆಧಿಪತ್ಯ ಅವನದ್ದು ಮತ್ತು ಸರ್ವಸ್ತುತಿ ಅವನಿಗೆ. ಅವನು ಎಲ್ಲ ವಿಷಯಗಳಲ್ಲೂ ಸಾಮರ್ಥ್ಯವುಳ್ಳವನು. ಅಲ್ಲಾಹು ಸಕಲ ನ್ಯೂನತೆಗಳಿಂದಲೂ ಪರಿಶುದ್ಧನು. ಅಲ್ಲಾಹನಿಗೆ ಸರ್ವಸ್ತುತಿ. ಅಲ್ಲಾಹನ ಹೊರತು ಅನ್ಯ ಸತ್ಯ ಆರಾಧ್ಯರಿಲ್ಲ. ಅಲ್ಲಾಹು ಮಹಾನನು. ಅತ್ಯುನ್ನತನೂ ಮಹೋನ್ನತನೂ ಆದ ಅಲ್ಲಾಹನಿಂದಲ್ಲದೆ ಯಾವುದೇ ಶಕ್ತಿ ಸಾಮರ್ಥ್ಯವಿಲ್ಲ.”

12

«لَا إِلَٰهَ إِلَّا اللهُ وَحْدَهُ، أَنْجَزَ وَعْدَهُ، وَنَصَرَ عَبْدَهُ، وَهَزَمَ الْأَحْزَابَ وَحْدَهُ»

ಲಾ ಇಲಾಹ ಇಲ್ಲಲ್ಲಾಹು ವಹ್ದಹೂ, ಅನ್ಜಝ ವಅ್‌ದಹೂ, ವನಸರ ಅಬ್ದಹೂ, ವಹಝಮಲ್ ಅಹ್‌ಝಾಬ ವಹ್ದಹೂ

ಅಲ್ಲಾಹನ ಹೊರತು ಅನ್ಯ ಸತ್ಯ ಆರಾಧ್ಯರಿಲ್ಲ, ಅವನು ಏಕೈಕನು. ಅವನು ವಾಗ್ದಾನ ಪಾಲಿಸಿದ್ದಾನೆ. ದಾಸನಿಗೆ ಸಹಾಯ ಮಾಡಿದ್ದಾನೆ. ಶತ್ರುಗಳ ಮಿತ್ರಪಕ್ಷಗಳನ್ನು ಒಂಟಿಯಾಗಿ ಸೋಲಿಸಿದ್ದಾನೆ.”

## 13

«اللَّهُمَّ أَنْتَ رَبِّي لاَ إِلَهَ إِلَّا أَنْتَ، خَلَقْتَنِي وَأَنَا عَبْدُكَ، وَأَنَا عَلَى عَهْدِكَ وَوَعْدِكَ مَا اسْتَطَعْتُ، أَعُوذُ بِكَ مِنْ شَرِّ مَا صَنَعْتُ، أَبُوءُ لَكَ بِنِعْمَتِكَ عَلَيَّ، وَأَبُوءُ لَكَ بِذَنْبِي فَاغْفِرْ لِي، فَإِنَّهُ لاَ يَغْفِرُ الذُّنُوبَ إِلَّا أَنْتَ»

ಅಲ್ಲಾಹುಮ್ಮ ಅನ್ತ ರಬ್ಬೀ ಲಾ ಇಲಾಹ ಇಲ್ಲಾ ಅನ್ತ ಖಲಕ್ತನೀ ವಅನ ಅಬ್ದುಕ, ವಅನ ಅಲಾ ಅಹ್ದಿಕ ವವಅ್‌ದಿಕ ಮಸ್ತತಅ್‌ತು, ಅಊದು ಬಿಕ ಮಿನ್ ಶರ್ರಿ ಮಾ ಸನಅ್‌ತು, ಅಬೂಉ ಲಕ ಬಿನಿಅ್‌ಮತಿಕ ಅಲಯ್ಯ, ವಅಬೂಉ ಬಿದಮ್ಬೀ ಫಗ್‌ಫಿರ್ ಲೀ ಇನ್ನಹೂ ಲಾ ಯಗ್‌ಫಿರು ದ್ದುನೂಬ ಇಲ್ಲಾ ಅನ್ತ್

“ಓ ಅಲ್ಲಾಹ್! ನೀನು ನನ್ನ ರಬ್ಬ್. ನಿನ್ನ ಹೊರತು ಅನ್ಯ ಸತ್ಯ ಆರಾಧ್ಯರಿಲ್ಲ. ನೀನು ನನ್ನನ್ನು ಸೃಷ್ಟಿಸಿರುವೆ. ನಾನು ನಿನ್ನ ದಾಸ. ನನಗೆ ಸಾಧ್ಯವಾಗುವ ಮಟ್ಟಿಗೆ ನಾನು ನಿನ್ನ ಕರಾರು ಮತ್ತು ವಾಗ್ದಾನವನ್ನು ಪಾಲಿಸುತ್ತಿದ್ದೇನೆ. ನಾನು ಮಾಡಿದ ಕರ್ಮಗಳ ಕೆಡುಕಿನಿಂದ ನಿನ್ನಲ್ಲಿ ರಕ್ಷೆ ಬೇಡುತ್ತೇನೆ. ನೀನು ನನಗೆ ಅನುಗ್ರಹಿಸಿದ ಅನುಗ್ರಹಗಳನ್ನು ನಾನು ಒಪ್ಪಿಕೊಳ್ಳುತ್ತೇನೆ. ನನ್ನ ಪಾಪವನ್ನೂ ನಾನು ಒಪ್ಪಿಕೊಳ್ಳುತ್ತೇನೆ. ಆದುದರಿಂದ ನನ್ನನ್ನು ಕ್ಷಮಿಸು. ಖಂಡಿತವಾಗಿಯೂ ನೀನಲ್ಲದೆ ಪಾಪಗಳನ್ನು ಕ್ಷಮಿಸುವವರಿಲ್ಲ.”

## 14

«اللَّهُمَّ إِنِّي أَسْأَلُكَ بِأَنَّ لَكَ الْحَمْدُ، لَا إِلَهَ إِلَّا أَنْتَ الْمَنَّانُ، بَدِيعُ السَّمَوَاتِ وَالْأَرْضِ، يَا ذَا الْجَلَالِ وَالْإِكْرَامِ، يَا حَيُّ يَا قَيُّومُ»

ಅಲ್ಲಾಹುಮ್ಮ ಇನ್ನೀ ಅಸ್‌ಅಲುಕ ಬಿಅನ್ನ ಲಕಲ್ ಹಮ್ದು, ಲಾ ಇಲಾಹ ಇಲ್ಲಾ ಅನ್ತ, ಅಲ್‌ಮನ್ನಾನು, ಬದೀಉ ಸ್ಸಮಾವಾತಿ ವಲ್ ಅರ್ದಿ, ಯಾ ದಲ್ ಜಲಾಲಿ ವಲ್ ಇಕ್ರಾಮಿ, ಯಾ ಹಯ್ಯು ಯಾ ಕಯ್ಯೂಮ್.

“ಓ ಅಲ್ಲಾಹ್! ಸರ್ವಸ್ತುತಿಗಳು ನಿನಗೇ ಮೀಸಲು ಎಂಬುದರ ಮೂಲಕ ನಾನು ನಿನ್ನಲ್ಲಿ ಬೇಡುತ್ತೇನೆ. ನಿನ್ನ ಹೊರತು ಅನ್ಯ ಸತ್ಯ ಆರಾಧ್ಯರಿಲ್ಲ. ನೀನು ಏಕೈಕನು. ನಿನಗೆ ಯಾವುದೇ ಸಹಭಾಗಿಗಳಿಲ್ಲ. ಅತ್ಯಧಿಕ

ಅನುಗ್ರಹಗಳನ್ನು ನೀಡುವವನು. ಪೂರ್ವ ಮಾದರಿಯಿಲ್ಲದೆ ಭೂಮ್ಯಾಕಾಶಗಳನ್ನು ಸೃಷ್ಟಿಸಿದವನೇ! ಸಾರ್ವಭೌಮತ್ವ ಮತ್ತು ಘನತೆಗಳ ಒಡೆಯನೇ! ನಿರಂತರವಾಗಿ ಜೀವಿಸುವವನೇ! ಸ್ವಯಂ ಅಸ್ತಿತ್ವದಲ್ಲಿರುವವನು ಮತ್ತು ಇತರೆಲ್ಲವನ್ನೂ ಸಂರಕ್ಷಿಸಿ ನಿಯಂತ್ರಿಸುವವನೇ!”

ಈ ಪ್ರಾರ್ಥನೆ ಇಸ್ಮುಲ್ ಅಲಅಝುಮ್ ಆಗಿದೆಯೆಂದು ಹದೀಸಿನಲ್ಲಿ ಬಂದಿದೆ. ಇದರ ಮೂಲಕ ಪ್ರಾರ್ಥಿಸಿದರೆ ಉತ್ತರ ಸಿಗುತ್ತದೆ ಮತ್ತು ಬೇಡಿದರೆ ಬೇಡಿಕೆ ಈಡೇರುತ್ತದೆ.

**15**

«سُبْحَانَكَ مَا أَعْظَمَكَ رَبَّنَا»

ಸುಬ್‌ಹಾನಕ ಮಾ ಅಅ್‌ಝಮ ರಬ್ಬನಾ

ಅಲ್ಲಾಹನ ಪರಿಶುದ್ಧಿಯನ್ನು ನಾನು ಸ್ತುತಿಸುತ್ತೇನೆ. ನಮ್ಮ ರಬ್ಬ್ ಎಷ್ಟು ಮಹಾಮಹಿಮನು!

16

«سُبْحَانَ ذِي الْجَبَرُوتِ وَالْمَلَكُوتِ وَالْكِبْرِيَاءِ وَالْعَظَمَةِ»

ಸುಬ್‌ಹಾನ ದಿಲ್ ಜಬರೂತಿ ವಲ್ ಮಲಕೂತಿ ವಲ್ ಕಿಬ್ರಿಯಾಇ ವಲ್ ಅಝ್ಮಃ

“ಸಕಲ ಅಧಿಕಾರಗಳ, ಆಧಿಪತ್ಯಗಳ, ಅಹಂಭಾವಗಳ ಮತ್ತು ಮಹಾತ್ಮ್ಯೆಗಳ ಒಡೆಯನಾದ ಅಲ್ಲಾಹು ಸಕಲ ನ್ಯೂನತೆಗಳಿಂದ ಮುಕ್ತನಾಗಿದ್ದಾನೆ.”

17

«اللهُ أَكْبَرُ اللهُ أَكْبَرُ اللهُ أَكْبَرُ ذُو الْمَلَكُوتِ وَالْجَبَرُوتِ وَالْكِبْرِيَاءِ وَالْعَظَمَةِ»

ಅಲ್ಲಾಹು ಅಕ್ಬರ್ (ಮೂರು ಸಲ) ದುಲ್ ಮಲಕೂತಿ ವಲ್-ಜಬರೂತಿ ವಲ್-ಕಿಬ್ರಿಯಾಇ ವಲ್-ಅಝುಮ

ಅಲ್ಲಾಹು ಮಹಾನನು (ಮೂರು ಸಲ) ಪರಮಾಧಿಕಾರವುಳ್ಳವನು, ಸರ್ವಾಧಿಕಾರವುಳ್ಳವನು, ಮಹಾ ಹಿರಿಮೆ ಮತ್ತು ಮಹಾಮಹಿಮೆಯುಳ್ಳವನು.

18

«اللهُ أَكْبَرُ كَبِيرًا، وَالْحَمْدُ لِلهِ كَثِيرًا، وَسُبْحَانَ اللهِ بُكْرَةً وَأَصِيلًا»

ಅಲ್ಲಾಹು ಅಕ್ಬರು ಕಬೀರನ್, ವಲ್‌ಹಮ್ದುಲಿಲ್ಲಾಹಿ ಕಸೀರನ್, ವಸುಬ್‌ಹಾನಲ್ಲಾಹಿ ಬುಕ್ರತನ್ ವಅಸೀಲಾ.

“ಅಲ್ಲಾಹು ಮಹಾನನು. ಅಲ್ಲಾಹನಿಗೆ ಅತ್ಯಧಿಕ ಸ್ತುತಿ. ಅಲ್ಲಾಹು ಸಕಲ ನ್ಯೂನತೆಗಳಿಂದಲೂ ಪರಿಶುದ್ಧನೆಂದು ಬೆಳಗ್ಗೆಯೂ ಸಂಜೆಯೂ ನಾನು ಘೋಷಿಸುತ್ತೇನೆ.”

## ಅಲ್ಲಾಹನನ್ನು ಸ್ತುತಿಸಿದ ಬಳಿಕ ಪ್ರವಾದಿ(ಸ) ರವರ ಮೇಲೆ ಸಲಾತ್ ಹೇಳುವುದು ಅಪೇಕ್ಷಣೀಯವಾಗಿದೆ.

«اللَّهُمَّ صَلِّ وَسَلِّم عَلَى مُحَمَّدٍ وَعَلَى آلِ مُحَمَّدٍ، كَمَا صَلَّيْتَ عَلَى إِبْرَاهِيمَ، وَعَلَى آلِ إِبْرَاهِيمَ، إِنَّكَ حَمِيدٌ مَجِيدٌ»

ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವಅಲಾ ಆಲಿ ಮುಹಮ್ಮದಿನ್ ಕಮಾ ಸಲ್ಲೈತ ಅಲಾ ಇಬ್ರಾಹೀಮ ವಅಲಾ ಆಲಿ ಇಬ್ರಾಹೀಮ ಇನ್ನಕ ಹಮೀದುನ್ ಮಜೀದ್.

صحيح الدعاء والثناء على الله تعالى

# ಕುರ್‌ಆನಿನಲ್ಲಿರುವ ಪ್ರಾರ್ಥನೆಗಳು



ಮುಂದಿನ

ಮೊದಲ ಪುಟಕ್ಕೆ

1

﴿حَسۡبِيَ ٱللَّهُ لَآ إِلَٰهَ إِلَّا هُوَۖ عَلَيۡهِ تَوَكَّلۡتُۖ وَهُوَ رَبُّ ٱلۡعَرۡشِ ٱلۡعَظِيمِ ١٢٩﴾

[التوبة:١٢٩]

"ನನಗೆ ಅಲ್ಲಾಹು ಸಾಕು. ಅವನ ಹೊರತು ಅನ್ಯ ಆರಾಧ್ಯರಿಲ್ಲ. ನಾನು ಅವನ ಮೇಲೆ ಭರವಸೆಯಿಟ್ಟಿರುವೆನು. ಅವನು ಮಹಾ ಸಿಂಹಾಸನದ ಒಡೆಯನಾಗಿರುವನು." (ಕುರ್‌ಆನ್ 9:129)

2

﴿لَّآ إِلَٰهَ إِلَّآ أَنتَ سُبۡحَٰنَكَ إِنِّي كُنتُ مِنَ ٱلظَّٰلِمِينَ٨٧﴾ [الأنبياء:٨٧]

“ನಿನ್ನ ಹೊರತು ಅನ್ಯ ಆರಾಧ್ಯರಿಲ್ಲ. ನೀನು ಪರಮ ಪಾವನನು! ಖಂಡಿತವಾಗಿಯೂ ನಾನು ಅಕ್ರಮಿಗಳಲ್ಲಿ ಸೇರಿದವನಾಗಿರುವೆನು." (ಕುರ್‌ಆನ್ 21:87)

3

﴿رَبِّ ٱجۡعَلۡنِي مُقِيمَ ٱلصَّلَوٰةِ وَمِن ذُرِّيَّتِيۚ رَبَّنَا وَتَقَبَّلۡ دُعَآءِ ٤٠﴾ [إبراهيم: ٤٠]

"ನನ್ನ ರಬ್ಬೇ! ನೀನು ನನ್ನನ್ನು ಮತ್ತು ನನ್ನ ಸಂತತಿಯಲ್ಲಿ ಸೇರಿದವರನ್ನು ನಮಾಝ್ ಸಂಸ್ಥಾಪಿಸುವವರನ್ನಾಗಿ ಮಾಡು. ನಮ್ಮ ರಬ್ಬೇ! ನನ್ನ ಪ್ರಾರ್ಥನೆಯನ್ನು ಸ್ವೀಕರಿಸು." (ಕುರ್‌ಆನ್ 14:40)

4

﴿هُنَالِكَ دَعَا زَكَرِيَّا رَبَّهُۥ ۖ قَالَ رَبِّ هَبْ لِى مِن لَّدُنكَ ذُرِّيَّةً طَيِّبَةً ۖ إِنَّكَ سَمِيعُ ٱلدُّعَآءِ ٣٨﴾ [آل عمران:٣٨]

"ನನ್ನ ರಬ್ಬೇ! ನಿನ್ನ ವತಿಯಿಂದ ನನಗೊಂದು ಉತ್ತಮ ಸಂತತಿಯನ್ನು ದಯಪಾಲಿಸು. ಖಂಡಿತವಾಗಿಯೂ ನೀನು ಪ್ರಾರ್ಥನೆಯನ್ನು ಆಲಿಸುವವನಾಗಿರುವೆ." (ಕುರ್‌ಆನ್ 3:38)

5

﴿رَبَّنَا ٱغۡفِرۡ لَنَا ذُنُوبَنَا وَإِسۡرَافَنَا فِيٓ أَمۡرِنَا وَثَبِّتۡ أَقۡدَامَنَا وَٱنصُرۡنَا عَلَى ٱلۡقَوۡمِ ٱلۡكَٰفِرِينَ ١٤٧﴾ [آل عمران:١٤٧]

"ನಮ್ಮ ರಬ್ಬೇ! ನಮ್ಮ ಪಾಪಗಳನ್ನೂ, ನಮ್ಮ ಕರ್ಮಗಳಲ್ಲಿ ಉಂಟಾದಂತಹ ಅತಿಕ್ರಮಗಳನ್ನೂ ಕ್ಷಮಿಸು, ನಮ್ಮ ಪಾದಗಳನ್ನು ಸುದೃಢಗೊಳಿಸು ಮತ್ತು ಸತ್ಯನಿಷೇಧಿಗಳಾದ ಜನರ ವಿರುದ್ಧ ನಮಗೆ ಸಹಾಯ ಮಾಡು." (ಕುರ್‌ಆನ್ 3:147)

6

﴿رَّبِّ ٱغْفِرْ وَٱرْحَمْ وَأَنتَ خَيْرُ ٱلرَّٰحِمِينَ ١١٨﴾ [المؤمنون:١١٨]

"ನನ್ನ ರಬ್ಬೇ! ನನ್ನನ್ನು ಕ್ಷಮಿಸು ಮತ್ತು ನನಗೆ ದಯೆ ತೋರು. ದಯೆ ತೋರುವವರಲ್ಲಿ ನೀನು ಅತ್ಯುತ್ತಮನಾಗಿರುವೆ." (ಕುರ್‌ಆನ್ 23:118)

7

﴿رَبِّ إِنِّي ظَلَمۡتُ نَفۡسِي فَٱغۡفِرۡ لِي﴾

[القصص:١٦]

"ನನ್ನ ರಬ್ಬೇ! ಖಂಡಿತವಾಗಿಯೂ ನಾನು ನನ್ನೊಂದಿಗೇ ಅನ್ಯಾಯವೆಸಗಿರುವೆನು. ಆದುದರಿಂದ ನನ್ನನ್ನು ಕ್ಷಮಿಸು." (ಕುರ್‌ಆನ್ 28:16)

8

﴿رَبَّنَآ أَفۡرِغۡ عَلَيۡنَا صَبۡرٗا وَثَبِّتۡ أَقۡدَامَنَا
وَٱنصُرۡنَا عَلَى ٱلۡقَوۡمِ ٱلۡكَٰفِرِينَ ٢٥٠﴾

[البقرة: ٢٥٠]

"ನಮ್ಮ ರಬ್ಬೇ! ನಮ್ಮ ಮೇಲೆ ತಾಳ್ಮೆಯನ್ನು ಸುರಿಸು, ನಮ್ಮ ಪಾದಗಳನ್ನು ಅಚಲಗೊಳಿಸು ಮತ್ತು ಸತ್ಯನಿಷೇಧಿಗಳಾದ ಜನರ ವಿರುದ್ಧ ನಮಗೆ ನೆರವನ್ನು ನೀಡು." (ಕುರ್‌ಆನ್ 2:250)

9

﴿رَبَّنَا لَا تُزِغۡ قُلُوبَنَا بَعۡدَ إِذۡ هَدَيۡتَنَا وَهَبۡ لَنَا مِن لَّدُنكَ رَحۡمَةًۚ إِنَّكَ أَنتَ ٱلۡوَهَّابُ ٨﴾ [آل عمران:٨]

"ನಮ್ಮ ರಬ್ಬೇ! ನಮ್ಮನ್ನು ಸನ್ಮಾರ್ಗಕ್ಕೆ ಸೇರಿಸಿದ ಬಳಿಕ ನಮ್ಮ ಹೃದಯಗಳನ್ನು ವಕ್ರಗೊಳಿಸದಿರು. ನಿನ್ನ ವತಿಯ ದಯೆಯನ್ನು ನಮಗೆ ದಯಪಾಲಿಸು. ಖಂಡಿತವಾಗಿಯೂ ನೀನು ಅತ್ಯಧಿಕ ಔದಾರ್ಯವುಳ್ಳವನಾಗಿರುವೆ." (ಕುರ್‌ಆನ್ 3:8)

10

﴿رَبِّ ٱشۡرَحۡ لِي صَدۡرِي ۝٢٥ وَيَسِّرۡ لِيٓ أَمۡرِي ۝٢٦﴾ [طه:٢٥-٢٦]

"ನನ್ನ ರಬ್ಬೇ! ನನ್ನ ಹೃದಯವನ್ನು ವಿಶಾಲಗೊಳಿಸು. ನನಗೆ ನನ್ನ ಕಾರ್ಯವನ್ನು ಸರಳಗೊಳಿಸು." (ಕುರ್‌ಆನ್ 20:26)

11

﴿مَسَّنِيَ ٱلضُّرُّ وَأَنتَ أَرۡحَمُ ٱلرَّٰحِمِينَ ٨٣﴾

[الأنبياء:٨٣]

"ನನಗೆ ಸಂಕಷ್ಟ ಬಾಧಿಸಿದೆ. ನೀನು ಕರುಣೆ ತೋರುವವರಲ್ಲೇ ಅತ್ಯಧಿಕ ಕರುಣೆ ತೋರುವವನಾಗಿರುವೆ." (ಕುರ್‌ಆನ್ 21:83)

12

﴿رَّبِّ أَعُوذُ بِكَ مِنْ هَمَزَٰتِ ٱلشَّيَٰطِينِ ﴿٩٧﴾ وَأَعُوذُ بِكَ رَبِّ أَن يَحْضُرُونِ ﴿٩٨﴾﴾

[المؤمنون:٩٧-٩٨]

"ನನ್ನ ರಬ್ಬೇ! ಸೈತಾನರ ದುರ್ಬೋಧನೆಗಳಿಂದ ನಾನು ನಿನ್ನಲ್ಲಿ ಅಭಯ ಯಾಚಿಸುತ್ತಿರುವೆನು. ನನ್ನ ರಬ್ಬೇ! ಅವರು (ಸೈತಾನರು) ನನ್ನ ಬಳಿ ಉಪಸ್ಥಿತರಾಗುವುದರಿಂದಲೂ ನಾನು ನಿನ್ನಲ್ಲಿ ಅಭಯ ಯಾಚಿಸುತ್ತಿರುವೆನು." (ಕುರ್‌ಆನ್ 23:98)

13

﴿رَبَّنَا ٱصۡرِفۡ عَنَّا عَذَابَ جَهَنَّمَۖ إِنَّ عَذَابَهَا كَانَ غَرَامًا ٦٥﴾ [الفرقان:٦٥]

"ನಮ್ಮ ರಬ್ಬೇ! ನಮ್ಮಿಂದ ನರಕ ಶಿಕ್ಷೆಯನ್ನು ತೊಲಗಿಸು. ಖಂಡಿತವಾಗಿಯೂ ಅದರ ಶಿಕ್ಷೆಯು ಬಿಟ್ಟು ತೊಲಗದ ವಿಪತ್ತಾಗಿದೆ." (ಕುರ್‌ಆನ್ 25:65)

14

﴿وَسِعَ رَبُّنَا كُلَّ شَيۡءٍ عِلۡمًاۚ عَلَى ٱللَّهِ تَوَكَّلۡنَاۚ رَبَّنَا ٱفۡتَحۡ بَيۡنَنَا وَبَيۡنَ قَوۡمِنَا بِٱلۡحَقِّ وَأَنتَ خَيۡرُ ٱلۡفَٰتِحِينَ﴾ [الأعراف:٨٩]

"ನಮ್ಮ ರಬ್ಬಿನ ಜ್ಞಾನವು ಸರ್ವ ವಿಷಯಗಳನ್ನೂ ಒಳಗೊಂಡಿದೆ. ನಾವು ಅಲ್ಲಾಹನ ಮೇಲೆ ಭರವಸೆಯಿಟ್ಟಿರುವೆವು. ನಮ್ಮ ರಬ್ಬೇ! ನಮ್ಮ ಮತ್ತು ನಮ್ಮ ಜನತೆಯ ಮಧ್ಯೆ ನೀನು ಸತ್ಯದೊಂದಿಗೆ ತೀರ್ಪು ನೀಡು. ತೀರ್ಪು ನೀಡುವವರಲ್ಲಿ ನೀನು ಅತ್ಯುತ್ತಮನಾಗಿರುವೆ." (ಕುರ್‌ಆನ್ 7:89)

**15**

﴿ٱرۡزُقۡنَا وَأَنتَ خَيۡرُ ٱلرَّٰزِقِينَ١١٤﴾

[المائدة: ١١٤]

"ನಮಗೆ ಅನ್ನಾಧಾರವನ್ನು ಕರುಣಿಸು. ಅನ್ನಾಧಾರವನ್ನು ಕರುಣಿಸುವವರಲ್ಲಿ ನೀನು ಅತ್ಯುತ್ತಮನಾಗಿರುವೆ." (ಕುರ್‌ಆನ್ 5:114)

16

﴿رَبَّنَآ ءَاتِنَا مِن لَّدُنكَ رَحۡمَةٗ وَهَيِّئۡ لَنَا مِنۡ أَمۡرِنَا رَشَدٗا١٠﴾ [الكهف:١٠]

"ನಮ್ಮ ರಬ್ಬೇ! ನಿನ್ನ ವತಿಯ ಕಾರುಣ್ಯವನ್ನು ನಮಗೆ ದಯಪಾಲಿಸು ಮತ್ತು ನಮ್ಮ ಕಾರ್ಯವನ್ನು ಸರಿಯಾದ ವಿಧದಲ್ಲಿ ನಿರ್ವಹಿಸಲು ನಮಗೆ ಅನುಕೂಲಮಾಡಿಕೊಡು." (ಕುರ್‌ಆನ್ 18:10)

17

﴿رَبِّ هَبۡ لِي حُكۡمٗا وَأَلۡحِقۡنِي بِٱلصَّٰلِحِينَ ٨٣﴾ [الشعراء: ٨٣]

"ನನ್ನ ರಬ್ಬೇ! ನನಗೆ ತತ್ವಜ್ಞಾನವನ್ನು ಕರುಣಿಸು ಮತ್ತು ನನ್ನನ್ನು ಸಜ್ಜನರೊಂದಿಗೆ ಸೇರಿಸು." (ಕುರ್‌ಆನ್ 26:83)

18

﴿رَّبِّ زِدۡنِي عِلۡمٗا﴾ [طه: ١١٤]

"ನನ್ನ ರಬ್ಬೇ! ನನಗೆ ಜ್ಞಾನವನ್ನು ಹೆಚ್ಚಿಸಿಕೊಡು." (ಕುರ್‌ಆನ್ 20:114)

19

﴿رَبِّ إِنِّي لِمَآ أَنزَلۡتَ إِلَيَّ مِنۡ خَيۡرٖ فَقِيرٞ ٢٤﴾ [القصص:٢٤]

"ನನ್ನ ರಬ್ಬೇ! ನೀನು ನನಗೆ ದಯಪಾಲಿಸುವ ಯಾವುದೇ ಒಳಿತಿಗೂ ನಾನು ಆವಶ್ಯಕತೆಯುಳ್ಳವನಾಗಿರುವೆನು." (ಕುರ್‌ಆನ್ 28:24)

20

﴿رَبَّنَا هَبۡ لَنَا مِنۡ أَزۡوَٰجِنَا وَذُرِّيَّٰتِنَا قُرَّةَ أَعۡيُنٖ وَٱجۡعَلۡنَا لِلۡمُتَّقِينَ إِمَامًا ٧٤﴾

[الفرقان: ٧٤]

"ನಮ್ಮ ರಬ್ಬೇ! ನಮ್ಮ ಪತ್ನಿಯರಲ್ಲಿ ಮತ್ತು ನಮ್ಮ ಸಂತತಿಗಳಲ್ಲಿ ನೀನು ನಮಗೆ ಕಣ್ತಣಿಸುವಿಕೆಯನ್ನು ದಯಪಾಲಿಸು ಮತ್ತು ಭಯಭಕ್ತಿ ಪಾಲಿಸುವವರಿಗೆ ನಮ್ಮನ್ನು ಮಾದರೀಯೋಗ್ಯರನ್ನಾಗಿ ಮಾಡು."

(ಕುರ್‌ಆನ್ 25:74)

21

﴿رَبِّ أَوْزِعْنِيٓ أَنْ أَشْكُرَ نِعْمَتَكَ ٱلَّتِيٓ أَنْعَمْتَ عَلَيَّ وَعَلَىٰ وَٰلِدَيَّ وَأَنْ أَعْمَلَ صَٰلِحًا تَرْضَىٰهُ وَأَدْخِلْنِي بِرَحْمَتِكَ فِي عِبَادِكَ ٱلصَّٰلِحِينَ ١٩﴾ [النمل:١٩]

"ನನ್ನ ರಬ್ಬೇ! ನನಗೂ ನನ್ನ ಮಾತಾಪಿತರಿಗೂ ನೀನು ದಯಪಾಲಿಸಿರುವ ನಿನ್ನ ಅನುಗ್ರಹಕ್ಕೆ ಕೃತಜ್ಞತೆ ಸಲ್ಲಿಸಲು ಮತ್ತು ನೀನು ತೃಪ್ತಿಪಡುವ ಸತ್ಕರ್ಮಗಳನ್ನು ಮಾಡಲು ನನಗೆ ಪ್ರೇರಣೆಯನ್ನು ನೀಡು. ನೀನು ನಿನ್ನ ಕಾರುಣ್ಯದಿಂದಾಗಿ ನಿನ್ನ ಸಜ್ಜನ ದಾಸರಲ್ಲಿ ನನ್ನನ್ನೂ ಸೇರಿಸು." (ಕುರ್‌ಆನ್ 27:19)

22

﴿رَبَّنَا تَقَبَّلْ مِنَّآ إِنَّكَ أَنتَ ٱلسَّمِيعُ ٱلْعَلِيمُ ﴿١٢٧﴾ وَتُبْ عَلَيْنَآ إِنَّكَ أَنتَ ٱلتَّوَّابُ ٱلرَّحِيمُ ﴿١٢٨﴾﴾ [البقرة:١٢٧-١٢٨]

"ನಮ್ಮ ರಬ್ಬೇ! ನಮ್ಮಿಂದ ಇದನ್ನು ಸ್ವೀಕರಿಸು. ಖಂಡಿತವಾಗಿಯೂ ನೀನು ಎಲ್ಲವನ್ನು ಆಲಿಸುವವನೂ ಅರಿಯುವವನೂ ಆಗಿರುವೆ. ನಮ್ಮ ಪಶ್ಚಾತ್ತಾಪವನ್ನು ಸ್ವೀಕರಿಸು. ಖಂಡಿತವಾಗಿಯೂ ನೀನು ಅತ್ಯಧಿಕ ಪಶ್ಚಾತ್ತಾಪ ಸ್ವೀಕರಿಸುವವನೂ, ಅಪಾರ ಕರುಣೆಯುಳ್ಳವನೂ ಆಗಿರುವೆ'."
(ಕುರ್‌ಆನ್ 2:127-128)

# ನಮಾಝಿನಲ್ಲಿ ಹೇಳುವ ಪ್ರಾರ್ಥನೆಗಳು



ಮುಂದಿನ

ಮೊದಲ ಪುಟಕ್ಕೆ

1

«اللَّهُمَّ بَاعِدْ بَيْنِي وَبَيْنَ خَطَايَايَ كَمَا بَاعَدْتَ بَيْنَ الْمَشْرِقِ وَالْمَغْرِبِ، اللَّهُمَّ نَقِّنِي مِنْ خَطَايَايَ كَمَا يُنَقَّى الثَّوْبُ الْأَبْيَضُ مِنَ الدَّنَسِ، اللَّهُمَّ اغْسِلْنِي مِنْ خَطَايَايَ بِالثَّلْجِ وَالْمَاءِ وَالْبَرَدِ»

ಅಲ್ಲಾಹುಮ್ಮ ಬಾಇದ್ ಬೈನೀ ವಬೈನ ಖತಾಯಾಯ ಕಮಾ ಬಾಅದ್ತ ಬೈನಲ್ ಮಶ್ರಿಕಿ ವಲ್ ಮಗ್ರಿಬ್, ಅಲ್ಲಾಹುಮ್ಮ ನಕ್ಕಿನೀ ಮಿನ್ ಖತಾಯಾಯ ಕಮಾ ಯುನಕ್ಕ ಸ್ಸೌಬುಲ್ ಅಬ್‌ಯದು ಮಿನ ದ್ದನಸ್, ಅಲ್ಲಾಹುಮ್ಮಗ್‌ಸಿಲ್‌ನೀ ಮಿನ್ ಖತಾಯಾಯ ಬಿಸ್ಸಲ್ಜಿ ವಲ್ ಮಾಇ ವಲ್ ಬರದ್

"ಓ ಅಲ್ಲಾಹ್! ಪೂರ್ವ ಮತ್ತು ಪಶ್ಚಿಮಗಳ ನಡುವೆ ಅಂತರವಿಟ್ಟಂತೆ ನನ್ನ ಮತ್ತು ನನ್ನ ಪಾಪಗಳ ನಡುವೆ ಅಂತರವಿಡು. ಬಿಳಿಬಟ್ಟೆಯಿಂದ ಕೊಳೆಯನ್ನು ತೊಲಗಿಸಿ ಶುದ್ಧ ಮಾಡುವಂತೆ ನನ್ನಿಂದ ಪಾಪಗಳನ್ನು ತೊಲಗಿಸಿ ಶುದ್ಧ ಮಾಡು. ಓ ಅಲ್ಲಾಹ್! ಮಂಜು, ನೀರು ಮತ್ತು ಹಿಮದಿಂದ ತೊಳೆದು ನನ್ನಿಂದ ಪಾಪಗಳನ್ನು ನಿವಾರಿಸು."

ಇದು ನಮಾಝ್ ಪ್ರಾರಂಭಿಸುವಾಗ ಹೇಳುವ ಪ್ರಾರ್ಥನೆ

2

«اللَّهُمَّ رَبَّ جَبْرَائِيلَ، وَمِيكَائِيلَ، وَإِسْرَافِيلَ، فَاطِرَ السَّمَاوَاتِ وَالْأَرْضِ، عَالِمَ الْغَيْبِ وَالشَّهَادَةِ، أَنْتَ تَحْكُمُ بَيْنَ عِبَادِكَ فِيمَا كَانُوا فِيهِ يَخْتَلِفُونَ، اهْدِنِي لِمَا اخْتُلِفَ فِيهِ مِنَ الْحَقِّ بِإِذْنِكَ، إِنَّكَ تَهْدِي مَنْ تَشَاءُ إِلَى صِرَاطٍ مُسْتَقِيمٍ»

ಅಲ್ಲಾಹುಮ್ಮ ರಬ್ಬ ಜಬ್ರಾಈಲ ವಮೀಕಾಈಲ ವಇಸ್ರಾಫೀಲ್! ಫಾತಿರ ಸ್ಸಮಾವಾತಿ ವಲ್‌ಅರ್ದ್! ಆಲಿಮಲ್ ಗೈಬಿ ವಶ್ಶಹಾದ! ಅನ್ತ ತಹ್ಕುಮು ಬೈನ ಇಬಾದಿಕ ಫೀಮಾ ಕಾನೂ ಫೀಹಿ ಯಖ್ತಲಿಫೂನ್.

ಇಹ್ದಿನೀ ಲಿಮಖ್ತುಲಫ ಫೀಹಿ ಮಿನಲ್ ಹಕ್ಕಿ ಬಿಇದ್ನಿಕ. ಇನ್ನಕ ತಹ್ದೀ ಮನ್ ತಶಾಉ ಇಲಾ ಸಿರಾತಿನ್ ಮುಸ್ತಕೀಮ್.

"ಓ ಅಲ್ಲಾಹ್! ಜಿಬ್ರಾಈಲ್, ಮೀಕಾಈಲ್ ಮತ್ತು ಇಸ್ರಾಫೀಲ್‌ರ ರಬ್ಬೇ! ಆಕಾಶಗಳ ಮತ್ತು ಭೂಮಿಯ ಸೃಷ್ಟಿಕರ್ತನೇ! ಅಗೋಚರವಾಗಿರುವುದನ್ನು ಮತ್ತು ಗೋಚರವಾಗಿರುವುದನ್ನು ಅರಿತವನೇ! ನಿನ್ನ ದಾಸರು ಯಾವ ವಿಷಯದಲ್ಲಿ ಭಿನ್ನಾಭಿಪ್ರಾಯ ಹೊಂದಿರುವರೋ ಆ ವಿಷಯದಲ್ಲಿ ನೀನು ಅವರ ನಡುವೆ ತೀರ್ಪು ನೀಡುವವನಾಗಿರುವೆ. ಅವರು ಯಾವ ವಿಷಯದಲ್ಲಿಭಿನ್ನಾಭಿಪ್ರಾಯಹೊಂದಿದರೋ ಅದರಲ್ಲಿರುವ ಸತ್ಯದೆಡೆಗೆ ನಿನ್ನ ಅನುಮತಿಯೊಂದಿಗೆ ನನ್ನನ್ನು ಮುನ್ನಡೆಸು. ಖಂಡಿತವಾಗಿಯೂ ನೀನಿಚ್ಛೆಸಿದವರನ್ನು

ನೀನು ನೇರವಾದ ಮಾರ್ಗದೆಡೆಗೆ ಮುನ್ನಡೆಸುವವನಾಗಿರುವೆ."

ಇದು ನಮಾಝ್ ಪ್ರಾರಂಭಿಸುವಾಗ -ವಿಶೇಷವಾಗಿ ರಾತ್ರಿ ನಮಾಝ್- ಹೇಳುವ ಪ್ರಾರ್ಥನೆ. ಇದು ಹೃದಯದಲ್ಲಿ ಸಂಶಯ ಉಂಟಾಗುವಾಗ ಹೇಳಬೇಕಾದ ಪ್ರಾರ್ಥನೆ

3

«وَجَّهْتُ وَجْهِيَ لِلَّذِي فَطَرَ السَّمَاوَاتِ وَالْأَرْضَ حَنِيفًا، وَمَا أَنَا مِنَ الْمُشْرِكِينَ، إِنَّ صَلَاتِي، وَنُسُكِي، وَمَحْيَايَ، وَمَمَاتِي لِلَّهِ رَبِّ الْعَالَمِينَ، لَا شَرِيكَ لَهُ، وَبِذَلِكَ أُمِرْتُ وَأَنَا مِنَ الْمُسْلِمِينَ، اللَّهُمَّ أَنْتَ الْمَلِكُ لَا إِلَهَ إِلَّا أَنْتَ أَنْتَ رَبِّي، وَأَنَا عَبْدُكَ، ظَلَمْتُ نَفْسِي، وَاعْتَرَفْتُ بِذَنْبِي، فَاغْفِرْ لِي ذُنُوبِي جَمِيعًا، إِنَّهُ لَا يَغْفِرُ الذُّنُوبَ إِلَّا أَنْتَ، وَاهْدِنِي لِأَحْسَنِ الْأَخْلَاقِ لَا يَهْدِي لِأَحْسَنِهَا إِلَّا أَنْتَ، وَاصْرِفْ عَنِّي سَيِّئَهَا لَا يَصْرِفُ عَنِّي سَيِّئَهَا إِلَّا أَنْتَ، لَبَّيْكَ وَسَعْدَيْكَ وَالْخَيْرُ كُلُّهُ

فِي يَدَيْكَ، وَالشَّرُّ لَيْسَ إِلَيْكَ، أَنَا بِكَ وَإِلَيْكَ، تَبَارَكْتَ وَتَعَالَيْتَ، أَسْتَغْفِرُكَ وَأَتُوبُ إِلَيْكَ»

ವಜ್ಜಹ್ತು ವಜ್‌ಹಿಯ ಲಿಲ್ಲದೀ ಫತರ ಸ್ಸಮಾವಾತಿ ವಲ್ ಅರ್‌ದ ಹನೀಫನ್ ವಮಾ ಅನ ಮಿನಲ್ ಮುಶ್ರಿಕೀನ್. ಇನ್ನ ಸಲಾತೀ ವನುಸುಕೀ ವಮಹ್ಯಾಯ ವಮಮಾತೀ ಲಿಲ್ಲಾಹಿ ರಬ್ಬಿಲ್ ಆಲಮೀನ್. ಲಾ ಶರೀಕ ಲಹೂ ವಬಿದಾಲಿಕ ಉಮಿರ್ತು ವಅನ ಮಿನಲ್ ಮುಸ್ಲಿಮೀನ್. ಅಲ್ಲಾಹುಮ್ಮ ಅನ್ತಲ್ ಮಲಿಕು ಲಾ ಇಲಾಹ ಇಲ್ಲಾ ಅನ್ತ, ಅನ್ತ ರಬ್ಬೀ ವಅನ ಅಬ್ದುಕ ಝಲಮ್ತು ನಫ್ಸೀ ವಅ್‌ತರಫ್ತು ಬಿದಮ್ಬೀ ಫಗ್‌ಫಿರ್ ಲೀ ದುನೂಬೀ ಜಮೀಅನ್, ಇನ್ನಹೂ ಲಾ ಯಗ್‌ಫಿರು ದ್ದುನೂಬ ಇಲ್ಲಾ ಅನ್ತ, ವಹ್ದಿನೀ ಲಿಅಹ್ಸನಿಲ್ ಅಖ್‌ಲಾಕಿ, ಲಾ ಯಹ್ದೀ ಲಿಅಹ್ಸನಿಹಾ ಇಲ್ಲಾ ಅನ್ತ, ವಸ್ರಿಫ್

ಅನ್ನೀ ಸಯ್ಯಿಅಹಾ, ಲಾ ಯಸ್ರಿಫು ಅನ್ನೀ ಸಯ್ಯಿಅಹಾ ಇಲ್ಲಾ ಅನ್ತ, ಲಬ್ಬಯ್ಕ, ವಸಅ್‌ದಯ್ಕ ವಲ್ ಖೈರು ಕುಲ್ಲುಹೂ ಬಿಯದೈಕ, ವಶ್ಶರ್ರು ಲೈಸ ಇಲೈಕ, ಅನ ಬಿಕ ವಇಲೈಕ, ತಬಾರಕ್ತ ವತಆಲೈತ, ಅಸ್ತಗ್‌ಫಿರುಕ ವಅತೂಬು ಇಲೈಕ್

"ಭೂಮ್ಯಾಕಾಶಗಳನ್ನು ಸೃಷ್ಟಿಸಿದವನ ಕಡೆಗೆ ನಾನು ನನ್ನ ಮುಖವನ್ನು ನಿಷ್ಕಳಂಕವಾಗಿ ತಿರುಗಿಸಿದ್ದೇನೆ. ನಾನು ಬಹುದೇವ ವಿಶ್ವಾಸಿಗಳಲ್ಲಿ ಸೇರಿದವನಲ್ಲ. ನನ್ನ ನಮಾಝ್, ಬಲಿಕರ್ಮ, ಜೀವನ ಮತ್ತು ಮರಣ ಸರ್ವಲೋಕಗಳ ರಬ್ಬಾಗಿರುವ ಅಲ್ಲಾಹನಿಗೆ ಮೀಸಲು. ಅವನಿಗೆ ಯಾವುದೇ ಸಹಭಾಗಿಗಳಿಲ್ಲ. ಇದನ್ನೇ ನನಗೆ ಆದೇಶಿಸಲಾಗಿದೆ. ನಾನು ಮುಸ್ಲಿಮರಲ್ಲಿ ಸೇರಿದವನು. ಓ ಅಲ್ಲಾಹ್! ನೀನು ಅಧಿಪತಿಯಾಗಿರುವೆ. ನಿನ್ನ ಹೊರತು

ಅನ್ಯ ಸತ್ಯ ಆರಾಧ್ಯರಿಲ್ಲ. ನೀನು ನನ್ನ ರಬ್ಬ್ ಮತ್ತು ನಾನು ನಿನ್ನ ದಾಸ. ನಾನು ನನ್ನ ಮೇಲೆಯೇ ಅನ್ಯಾಯವೆಸಗಿದ್ದೇನೆ. ನನ್ನ ಪಾಪಗಳನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದುದರಿಂದ ನನ್ನ ಎಲ್ಲ ಪಾಪಗಳನ್ನೂ ಕ್ಷಮಿಸು. ಖಂಡಿತವಾಗಿಯೂ ನೀನಲ್ಲದೆ ಪಾಪಗಳನ್ನು ಕ್ಷಮಿಸುವವರಿಲ್ಲ. ಅತ್ಯುತ್ತಮ ಗುಣ ನಡತೆಯ ಕಡೆಗೆ ನನ್ನನ್ನು ಮುನ್ನಡೆಸು. ಅತ್ಯುತ್ತಮ ಗುಣ ನಡತೆಯ ಕಡೆಗೆ ನೀನಲ್ಲದೆ ಮುನ್ನಡೆಸುವವರಿಲ್ಲ. ಕೆಟ್ಟ ಗುಣ ನಡತೆಯನ್ನು ನನ್ನಿಂದ ತೊಲಗಿಸು. ಕೆಟ್ಟ ಗುಣ ನಡತೆಯನ್ನು ನೀನಲ್ಲದೆ ತೊಲಗಿಸುವವರಿಲ್ಲ. ನಿನ್ನ ಕರೆಗೆ ಸ್ಪಂದಿಸಿ ಸಂತೋಷದಿಂದ ನಿನ್ನ ಸೇವೆ ಮಾಡಲು ನಾನು ಇಲ್ಲಿದ್ದೇನೆ. ಒಳಿತುಗಳೆಲ್ಲವೂ ನಿನ್ನ ಕೈಯಲ್ಲಿದೆ. ಕೆಡುಕು ನಿನ್ನಿಂದ ಉದ್ಭವಿಸುವುದಿಲ್ಲ. ನಿನ್ನ ಆಶ್ರಯವಲ್ಲದೆ

ನನಗೆ ಬೇರೆ ಆಶ್ರಯವಿಲ್ಲ. ನೀನು ಅನುಗ್ರಹಪೂರ್ಣನು ಮತ್ತು ಅತ್ಯುನ್ನತನು. ನಾನು ನಿನ್ನಲ್ಲಿ ಕ್ಷಮೆಯಾಚಿಸುತ್ತಾ ನಿನ್ನ ಕಡೆಗೆ ಪಶ್ಚಾತ್ತಾಪಪಟ್ಟು ಮರಳುತ್ತೇನೆ."

ಇದು ನಮಾಝ್ ಪ್ರಾರಂಭಿಸುವಾಗ -ವಿಶೇಷವಾಗಿ ರಾತ್ರಿ ನಮಾಝ್- ಹೇಳುವ ಪ್ರಾರ್ಥನೆ

4

«سُبْحَانَكَ اللَّهُمَّ رَبَّنَا وَبِحَمْدِكَ اللَّهُمَّ اغْفِرْ لِي»

ಸುಬ್‌ಹಾನಕಲ್ಲಾಹುಮ್ಮ ರಬ್ಬನಾ ವಬಿಹಮ್ದಿಕ, ಅಲ್ಲಾಹುಮ್ಮಗ್‌ಫಿರ್ ಲೀ

“ನೀನು ಸಕಲ ನ್ಯೂನತೆಗಳಿಂದಲೂ ಪರಿಶುದ್ಧನು. ನಮ್ಮ ರಬ್ಬ್ ಆಗಿರುವ ಓ ಅಲ್ಲಾಹ್! ನಿನ್ನ ಸ್ತುತಿಯೊಂದಿಗೆ. ಓ ಅಲ್ಲಾಹ್! ನನ್ನನ್ನು ಕ್ಷಮಿಸು.”

ಇದು ರುಕೂ ಮತ್ತು ಸುದೂದ್‌ನಲ್ಲಿ ಹೇಳುವ ಪ್ರಾರ್ಥನೆ

5

«اللَّهُمَّ أَعُوذُ بِرِضَاكَ مِنْ سَخَطِكَ، وَبِمُعَافَاتِكَ مِنْ عُقُوبَتِكَ، وَأَعُوذُ بِكَ مِنْكَ لَا أُحْصِي ثَنَاءً عَلَيْكَ أَنْتَ كَمَا أَثْنَيْتَ عَلَى نَفْسِكَ»

ಅಲ್ಲಾಹುಮ್ಮ ಅಊದು ಬಿರಿದಾಕ ಮಿನ್ ಸಖಿತಿಕ, ವಬಿಮುಆಫಾತಿಕ ಮಿನ್ ಉಕೂಬತಿಕ, ವಅಊದು ಬಿಕ ಮಿನ್ಕ, ಲಾ ಉಹ್ಸೀ ಸನಾಅನ್ ಅಲೈಕ, ಅನ್ತ ಕಮಾ ಅಸ್ನೈತ ಅಲಾ ನಫ್ಸಿಕ್

“ಓ ಅಲ್ಲಾಹ್! ನಿನ್ನ ಕೋಪಕ್ಕೆದುರಾಗಿ ನಿನ್ನ ತೃಪ್ತಿಯ ಮೂಲಕ, ನಿನ್ನ ಶಿಕ್ಷೆಗೆದುರಾಗಿ ನಿನ್ನ ಕ್ಷಮೆಯ ಮೂಲಕ ನಾನು ನಿನ್ನಲ್ಲಿ ರಕ್ಷೆ ಬೇಡುತ್ತೇನೆ. ನಿನಗೆದುರಾಗಿ ನಿನ್ನಲ್ಲಿ ರಕ್ಷೆ ಬೇಡುತ್ತೇನೆ. ನೀನು ನಿನ್ನನ್ನು

ಪ್ರಶಂಸಿಸಿದಂತೆ ನಿನ್ನ ಪ್ರಶಂಸೆಯನ್ನು ಲೆಕ್ಕ ಮಾಡಲು ನನಗೆ ಸಾಧ್ಯವಿಲ್ಲ."

## ಇದು ಸುದೂದ್‌ನಲ್ಲಿ ಹೇಳುವ ಪ್ರಾರ್ಥನೆ

6

«اللَّهُمَّ اغْفِرْ لِي ذَنْبِي كُلَّهُ دِقَّهُ، وَجِلَّهُ، وَأَوَّلَهُ وَآخِرَهُ وَعَلَانِيَتَهُ وَسِرَّهُ»

ಅಲ್ಲಾಹುಮ್ಮಗ್‌ಫಿರ್ ಲೀ ದಮ್ಬೀ ಕುಲ್ಲಹೂ ದಿಕ್ಕಹೂ ವಜಿಲ್ಲಹೂ, ವಅವ್ವಲಹೂ ವಆಖಿರಹೂ, ವಅಲಾನಿಯತಹೂ ವಸಿರ್‍ರಹ್

"ಓ ಅಲ್ಲಾಹ್! ನಾನು ಮಾಡಿದ ಎಲ್ಲ ಪಾಪಗಳನ್ನೂ ಕ್ಷಮಿಸು. ಚಿಕ್ಕದನ್ನು ಮತ್ತು ದೊಡ್ಡದನ್ನು. ಮೊದಲನೆಯದನ್ನು ಮತ್ತು ಕೊನೆಯದನ್ನು. ಬಹಿರಂಗವಾಗಿ ಮಾಡಿದ್ದನ್ನು ಮತ್ತು ಗುಪ್ತವಾಗಿ ಮಾಡಿದ್ದನ್ನು."

## ಇದು ಸುದೂದ್‌ನಲ್ಲಿ ಹೇಳುವ ಪ್ರಾರ್ಥನೆ

7

«اللَّهُمَّ اجْعَلْ لِي فِي قَلْبِي نُورًا، وَفِي لِسَانِي نُورًا، وَفِي سَمْعِي نُورًا، وَفِي بَصَرِي نُورًا، وَمِنْ فَوْقِي نُورًا، وَمِنْ تَحْتِي نُورًا، وَعَنْ يَمِينِي نُورًا، وَعَنْ شِمَالِي نُورًا، وَمِنْ بَيْنِ يَدَيَّ نُورًا، وَمِنْ خَلْفِي نُورًا، وَاجْعَلْ فِي نَفْسِي نُورًا، وَأَعْظِمْ لِي نُورًا»

ಅಲ್ಲಾಹುಮ್ಮಜ್‌ಅಲ್ ಫೀ ಕಲ್ಬೀ ನೂರನ್, ವಫೀ ಲಿಸಾನೀ ನೂರನ್, ವಫೀ ಸಮ್‌ಈ ನೂರನ್, ವಫೀ ಬಸರೀ ನೂರನ್, ವಮಿನ್ ಫೌಕೀ ನೂರನ್, ವಮಿನ್ ತಹ್ತೀ ನೂರನ್, ವಅನ್ ಯಮೀನೀ ನೂರನ್, ವಅನ್ ಶಿಮಾಲೀ ನೂರನ್, ವಮಿನ್

## ಅಮಾಮೀ ನೂರನ್, ವಮಿನ್ ಖಲ್ಫೀ ನೂರನ್, ವಜ್‌ಅಲ್ ಫೀ ನಫ್ಸೀ ನೂರನ್, ವಅಅ್‌ಝಿಮ್ ಲೀ ನೂರನ್

“ಓ ಅಲ್ಲಾಹ್! ನನ್ನ ಹೃದಯದಲ್ಲಿ ಬೆಳಕನ್ನಿಡು. ನನ್ನ ನಾಲಗೆಯಲ್ಲಿ ಬೆಳಕನ್ನಿಡು. ನನ್ನ ಶ್ರವಣಶಕ್ತಿಯಲ್ಲಿ ಬೆಳಕನ್ನಿಡು. ನನ್ನ ದೃಷ್ಟಿಯಲ್ಲಿ ಬೆಳಕನ್ನಿಡು. ನನ್ನ ಮೇಲ್ಭಾಗದಲ್ಲಿ ಬೆಳಕನ್ನಿಡು. ನನ್ನ ಕೆಳಭಾಗದಲ್ಲಿ ಬೆಳಕನ್ನಿಡು. ನನ್ನ ಬಲಭಾಗದಲ್ಲಿ ಬೆಳಕನ್ನಿಡು. ನನ್ನ ಎಡಭಾಗದಲ್ಲಿ ಬೆಳಕನ್ನಿಡು. ನನ್ನ ಮುಂಭಾಗದಲ್ಲಿ ಬೆಳಕನ್ನಿಡು. ನನ್ನ ಹಿಂಭಾಗದಲ್ಲಿ ಬೆಳಕನ್ನಿಡು. ನನ್ನ ಶರೀರದಲ್ಲಿ ಬೆಳಕನ್ನಿಡು. ನನಗೆ ಬೆಳಕನ್ನು ಹಿಗ್ಗಿಸಿಕೊಡು.”

## ಇದು ಸುದೂದ್‌ನಲ್ಲಿ -ವಿಶೇಷವಾಗಿ ರಾತ್ರಿ ನಮಾಝಿನ ಸುಜೂದಿನಲ್ಲಿ- ಹೇಳುವ ಪ್ರಾರ್ಥನೆ

## 8

«اللَّهُمَّ إِنِّي أَعُوذُ بِكَ مِنْ عَذَابِ جَهَنَّمَ، وَمِنْ عَذَابِ الْقَبْرِ، وَمِنْ فِتْنَةِ الْمَحْيَا وَالْمَمَاتِ، وَمِنْ شَرِّ فِتْنَةِ الْمَسِيحِ الدَّجَّالِ»

ಅಲ್ಲಾಹುಮ್ಮ ಇನ್ನೀ ಅಊದು ಬಿಕ ಮಿನ್ ಅದಾಬಿ ಜಹನ್ನಮ, ವಮಿನ್ ಅದಾಬಿಲ್ ಕಬ್ರಿ, ವಮಿನ್ ಫಿತ್ನತಿಲ್ ಮಹ್ಯಾ ವಲ್ ಮಮಾತಿ, ವಮಿನ್ ಶರ್ರಿ ಫಿತ್ನತಿಲ್ ಮಸೀಹಿ ದ್ದಜ್ಜಾಲ್

“ಓ ಅಲ್ಲಾಹ್! ನರಕಾಗ್ನಿಯ ಶಿಕ್ಷೆಯಿಂದ, ಗೋರಿ ಶಿಕ್ಷೆಯಿಂದ, ಜೀವನ ಮತ್ತು ಮರಣದ ಪರೀಕ್ಷೆಗಳಿಂದ ಮತ್ತು ಅಲ್‌ಮಸೀಹು ದ್ದಜ್ಜಾಲ್‌ನ ಪರೀಕ್ಷೆಗಳ ಕೆಡುಕಿನಿಂದ ನಾನು ನಿನ್ನಲ್ಲಿ ರಕ್ಷೆ ಬೇಡುತ್ತೇನೆ.”

ಇದು ಕೊನೆಯ ತಶಹ್ಹುದ್‌ನಲ್ಲಿ ಹೇಳುವ ಪ್ರಾರ್ಥನೆ

9

«اللَّهُمَّ أَعِنِّي عَلَى ذِكْرِكَ، وَشُكْرِكَ، وَحُسْنِ عِبَادَتِكَ»

ಅಲ್ಲಾಹುಮ್ಮ ಅಇನ್ನೀ ಅಲಾ ದಿಕ್ರಿಕ, ವಶುಕ್ರಿಕ ವಹುಸ್ನಿ ಇಬಾದತಿಕ್

“ಓ ಅಲ್ಲಾಹ್! ನಿನ್ನನ್ನು ಸ್ಮರಿಸಲು, ನಿನಗೆ ಕೃತಜ್ಞನಾಗಲು ಮತ್ತು ಉತ್ತಮವಾಗಿ ನಿನ್ನ ಆರಾಧನೆ ಮಾಡಲು ನನಗೆ ಸಹಾಯ ಮಾಡು.”

ಇದು ಕೊನೆಯ ತಶಹ್ಹುದ್‌ನಲ್ಲಿ ಹೇಳುವ ಪ್ರಾರ್ಥನೆ

10

«اللَّهُمَّ اغْفِرْ لِي مَا قَدَّمْتُ وَمَا أَخَّرْتُ، وَمَا أَسْرَرْتُ وَمَا أَعْلَنْتُ، وَمَا أَسْرَفْتُ، وَمَا أَنْتَ أَعْلَمُ بِهِ مِنِّي، أَنْتَ الْمُقَدِّمُ وَأَنْتَ الْمُؤَخِّرُ، لَا إِلَهَ إِلَّا أَنْتَ»

ಅಲ್ಲಾಹುಮ್ಮಗ್ಫಿರ್ ಲೀ ಮಾ ಕದ್ದಮ್ತು ವಮಾ ಅಖ್ಖರ್ತು, ವಮಾ ಅಸ್ರರ್ತು ವಮಾ ಅಅ್‌ಲನ್ತು, ವಮಾ ಅಸ್ರಫ್ತು, ವಮಾ ಅನ್ತ ಅಅ್‌ಲಮು ಬಿಹೀ ಮಿನ್ನೀ, ಅನ್ತಲ್ ಮುಕದ್ದಿಮು ವಅನ್ತಲ್ ಮುಅಖ್ಖಿರು, ಲಾ ಇಲಾಹ ಇಲ್ಲಾ ಅನ್ತ್

“ಓ ಅಲ್ಲಾಹ್! ನಾನು ಈಗಾಗಲೇ ಮಾಡಿರುವ, ಮುಂದೆ ಮಾಡಲಿರುವ, ಮರೆಮಾಚಿರುವ, ಬಹಿರಂಗಪಡಿಸಿರುವ, ಮಿತಿಮೀರಿರುವ

ಮತ್ತು ನೀನು ನನ್ನ ಬಗ್ಗೆ ನನಗಿಂತಲೂ ಹೆಚ್ಚು ಅರಿತಿರುವ ಪಾಪಗಳನ್ನು ಕ್ಷಮಿಸು. ನೀನು ಮುಂದೂಡುವವನು ಮತ್ತು ಹಿಂದೂಡುವವನು. ನಿನ್ನ ಹೊರತು ಅನ್ಯ ಸತ್ಯ ಆರಾಧ್ಯರಿಲ್ಲ."

## ಇದು ಕೊನೆಯ ತಶಹ್ಹುದ್‌ನಲ್ಲಿ ಹೇಳುವ ಪ್ರಾರ್ಥನೆ

11

«اللَّهُمَّ إِنِّي أَعُوذُ بِكَ مِنَ الْمَأْثَمِ، وَالْمَغْرَمِ»

ಅಲ್ಲಾಹುಮ್ಮ ಇನ್ನೀ ಅಊದು ಬಿಕ ಮಿನಲ್ ಮಅ್‌ಸಮಿ ವಲ್ ಮಗ್ರಮ್

“ಓ ಅಲ್ಲಾಹ್! ಪಾಪ ಮತ್ತು ಸಾಲಬಾಧೆಯಿಂದ ನಾನು ನಿನ್ನಲ್ಲಿ ರಕ್ಷೆ ಬೇಡುತ್ತೇನೆ.”

ಇದು ಕೊನೆಯ ತಶಹ್ಹುದ್‌ನಲ್ಲಿ ಹೇಳುವ ಪ್ರಾರ್ಥನೆ

12

«اللَّهُمَّ إِنِّي أَسْأَلُكَ الْجَنَّةَ، وَأَعُوذُ بِكَ مِنَ النَّارِ»

ಅಲ್ಲಾಹುಮ್ಮ ಇನ್ನೀ ಅಸ್‌ಅಲುಕಲ್ ಜನ್ನತ ವಅಊದು ಬಿಕ ಮಿನ ನ್ನಾರ್

“ಓ ಅಲ್ಲಾಹ್! ನಾನು ನಿನ್ನಲ್ಲಿ ಸ್ವರ್ಗವನ್ನು ಬೇಡುತ್ತೇನೆ. ನಾನು ನಿನ್ನಲ್ಲಿ ನರಕಾಗ್ನಿಯಿಂದ ರಕ್ಷೆ ಬೇಡುತ್ತೇನೆ.”

ಇದು ಕೊನೆಯ ತಶಹ್ಹುದ್‌ನಲ್ಲಿ ಹೇಳುವ ಪ್ರಾರ್ಥನೆ

## 13

«اللَّهُمَّ إِنِّي أَعُوذُ بِكَ مِنْ الْبُخْلِ وَأَعُوذُ بِكَ مِنْ الْجُبْنِ وَأَعُوذُ بِكَ أَنْ أُرَدَّ إِلَى أَرْذَلِ الْعُمُرِ وَأَعُوذُ بِكَ مِنْ فِتْنَةِ الدُّنْيَا وَأَعُوذُ بِكَ مِنْ عَذَابِ الْقَبْرِ»

ಅಲ್ಲಾಹುಮ್ಮ ಇನ್ನೀ ಅಊದು ಬಿಕ ಮಿನಲ್ ಬುಖ್ಲಿ, ವಅಊದು ಬಿಕ ಮಿನಲ್ ಜುಬ್ನಿ, ವಅಊದು ಬಿಕ ಮಿನ್ ಅನ್ ಉರದ್ದ ಇಲಾ ಅರ್ದಲಿಲ್ ಉಮ್ರಿ, ವಅಊದು ಬಿಕ ಮಿನ್ ಫಿತ್ನತಿ ದ್ದುನ್ಯಾ, ವಅಊದು ಬಿಕ ಮಿನ್ ಅದಾಬಿಲ್ ಕಬ್ರ್

“ಓ ಅಲ್ಲಾಹ್! ಜಿಪುಣತನದಿಂದ ನಾನು ನಿನ್ನಲ್ಲಿ ರಕ್ಷೆ ಬೇಡುತ್ತೇನೆ. ಹೇಡಿತನದಿಂದ

ನಾನು ನಿನ್ನಲ್ಲಿ ರಕ್ಷೆ ಬೇಡುತ್ತೇನೆ. ಅತಿನಿಕೃಷ್ಟ ಪ್ರಾಯದ ತನಕ ಬದುಕುವುದರಿಂದ ನಾನು ನಿನ್ನಲ್ಲಿ ರಕ್ಷೆ ಬೇಡುತ್ತೇನೆ. ಇಹಲೋಕದ ಪರೀಕ್ಷೆಗಳಿಂದ ಮತ್ತು ಗೋರಿ ಶಿಕ್ಷೆಯಿಂದ ನಾನು ನಿನ್ನಲ್ಲಿ ರಕ್ಷೆ ಬೇಡುತ್ತೇನೆ."

## ಇದು ಕೊನೆಯ ತಶಹ್ಹುದ್‌ನಲ್ಲಿ ಹೇಳುವ ಪ್ರಾರ್ಥನೆ

14

«اللَّهُمَّ إِنِّي ظَلَمْتُ نَفْسِي ظُلْمًا كَثِيرًا وَلَا يَغْفِرُ الذُّنُوبَ إِلَّا أَنْتَ، فَاغْفِرْ لِي مَغْفِرَةً مِنْ عِنْدِكَ، وَارْحَمْنِي إِنَّكَ أَنْتَ الْغَفُورُ الرَّحِيمُ»

ಅಲ್ಲಾಹುಮ್ಮ ಇನ್ನೀ ಝುಲಮ್ತು ನಫ್ಸೀ ಝುಲ್ಮನ್ ಕಸೀರನ್, ವಲಾ ಯಗ್‌ಫಿರು ದ್ದುನೂಬ ಇಲ್ಲಾ ಅನ್ತ, ಫಗ್‌ಫಿರ್ ಲೀ ಮಗ್‌ಫಿರತನ್ ಮಿನ್ ಇಂದಿಕ, ವರ್ಹಮ್‌ನೀ, ಇನ್ನಕ ಅನ್ತಲ್ ಗಫೂರು ರ್ರಹೀಮ್

"ಓ ಅಲ್ಲಾಹ್! ನಾನು ಸ್ವಯಂ ಅಸಂಖ್ಯ ಅನ್ಯಾಯಗಳನ್ನು ಮಾಡಿದ್ದೇನೆ. ಖಂಡಿತವಾಗಿಯೂ ನೀನಲ್ಲದೆ ಪಾಪಗಳನ್ನು

ಕ್ಷಮಿಸುವವರಿಲ್ಲ. ಆದುದರಿಂದ ನಿನ್ನ ವತಿಯ ಕ್ಷಮೆಯಿಂದ ನನ್ನನ್ನು ಕ್ಷಮಿಸು. ನನಗೆ ದಯೆ ತೋರು. ನಿಸ್ಸಂದೇಹವಾಗಿಯೂ ನೀನು ಅತ್ಯಧಿಕ ಕ್ಷಮಿಸುವವನೂ ಅಪಾರ ದಯೆಯುಳ್ಳವನೂ ಆಗಿರುವೆ."

## ಇದು ಸುಜೂದಿನಲ್ಲಿ ಅಥವಾ ಕೊನೆಯ ತಶಹ್ಹುದ್‌ನಲ್ಲಿ ಹೇಳುವ ಪ್ರಾರ್ಥನೆ

15

«اللَّهُمَّ حَاسِبْنِي حِسَابًا يَسِيرًا»

ಅಲ್ಲಾಹುಮ್ಮ ಹಾಸಿಬ್‌ನೀ ಹಿಸಾಬನ್ ಯಸೀರನ್

“ಓ ಅಲ್ಲಾಹ್! ನನ್ನನ್ನು ಅತಿ ಸರಳವಾಗಿ ವಿಚಾರಣೆ ಮಾಡು.”

ಇದು ಸುಜೂದಿನಲ್ಲಿ ಅಥವಾ ಕೊನೆಯ ತಶಹ್ಹುದ್‌ನಲ್ಲಿ ಹೇಳುವ ಪ್ರಾರ್ಥನೆ

16

«رَبِّ قِنِي عَذَابَكَ يَوْمَ تَبْعَثُ عِبَادَكَ»

ಅಲ್ಲಾಹುಮ್ಮ ಕಿನೀ ಅದಾಬಕ ಯೌಮ ತಬ್‌ಅಸು ಇಬಾದಕ್

“ಓ ಅಲ್ಲಾಹ್! ನಿನ್ನ ದಾಸರನ್ನು ಪುನಃ ಜೀವಂತಗೊಳಿಸುವಾಗ ನಿನ್ನ ಶಿಕ್ಷೆಯಿಂದ ನನ್ನನ್ನು ರಕ್ಷಿಸು.”

ಇದು ಸುಜೂದಿನಲ್ಲಿ ಅಥವಾ ಕೊನೆಯ ತಶಹ್ಹುದ್‌ನಲ್ಲಿ ಹೇಳುವ ಪ್ರಾರ್ಥನೆ

# ಪ್ರವಾದಿ(ಸ) ರವರ ಪ್ರಾರ್ಥನೆಗಳು



ಮುಂದಿನ

ಮೊದಲ ಪುಟಕ್ಕೆ

1

«اللَّهُمَّ رَبَّنَا آتِنَا فِي الدُّنْيَا حَسَنَةً، وَفِي الآخِرَةِ حَسَنَةً، وَقِنَا عَذَابَ النَّار»

ಅಲ್ಲಾಹುಮ್ಮ ರಬ್ಬನಾ ಆತಿನಾ ಫಿದ್ದುನ್ಯಾ ಹಸನತನ್ ವಫಿಲ್ ಆಖಿರತಿ ಹಸನತನ್ ವಕಿನಾ ಅದಾಬನ್ನಾರ್.

“ಓ ಅಲ್ಲಾಹ್! ಇಹಲೋಕದಲ್ಲಿ ನಮಗೆ ಒಳಿತನ್ನು ದಯಪಾಲಿಸು ಮತ್ತು ಪರಲೋಕದಲ್ಲೂ ನಮಗೆ ಒಳಿತನ್ನು ದಯಪಾಲಿಸು. ನರಕಾಗ್ನಿಯ ಶಿಕ್ಷೆಯಿಂದ ನಮ್ಮನ್ನು ಪಾರು ಮಾಡು.”

ಇದು ಪ್ರವಾದಿ(ಸ) ಅತಿಹೆಚ್ಚಾಗಿ ಪ್ರಾರ್ಥಿಸುತ್ತಿದ್ದ ಪ್ರಾರ್ಥನೆ

2

«اللَّهُمَّ اغْفِرْ لِي، وَارْحَمْنِي، وَاهْدِنِي، وَعَافِنِي، وَارْزُقْنِي»

ಅಲ್ಲಾಹುಮ್ಮಗ್‌ಫಿರ್ ಲೀ, ವರ್ಹಮ್‌ನೀ, ವಹ್ದಿನೀ, ವಆಫಿನೀ, ವರ್‌ಝುಕ್‌ನೀ

“ಓ ಅಲ್ಲಾಹ್! ನನ್ನನ್ನು ಕ್ಷಮಿಸು. ನನಗೆ ದಯೆ ತೋರು. ನನಗೆ ಮಾರ್ಗದರ್ಶನ ಮಾಡು. ನನಗೆ ಸೌಖ್ಯವನ್ನು ನೀಡು. ನನಗೆ ಜೀವನಾಧಾರವನ್ನು ಒದಗಿಸು.”

ಇದು ಇಹಲೋಕ ಮತ್ತು ಪರಲೋಕದ ಒಳಿತುಗಳನ್ನು ಒಟ್ಟಿಗೆ ನೀಡುವ ಪ್ರಾರ್ಥನೆ

## 3

«اَللّٰهُمَّ اكْفِنِيْ بِحَلاَلِكَ عَنْ حَرَامِكَ
وَاَغْنِنِيْ بِفَضْلِكَ عَمَّنْ سِوَاكَ»

ಅಲ್ಲಾಹುಮ್ಮಕ್ಫಿನೀ ಬಿಹಲಾಲಿಕ ಅನ್ ಹರಾಮಿಕ ವಅಗ್ನಿನೀ ಬಿಫದ್ಲಿಕ ಅಮ್ಮನ್ ಸಿವಾಕ್

"ಓ ಅಲ್ಲಾಹ್! ನಿಷಿದ್ಧವಾಗಿರುವುದನ್ನು ಬಿಟ್ಟು ಧರ್ಮಸಮ್ಮತವಾಗಿರುವುದು ಮಾತ್ರ ನನಗೆ ಸಾಕಾಗುವಂತೆ ಮಾಡು. ನೀನಲ್ಲದವರ ಔದಾರ್ಯವನ್ನು ಬಿಟ್ಟು ನಿನ್ನ ಔದಾರ್ಯ ಮಾತ್ರ ನನಗೆ ಸಾಕಾಗುವಂತೆ ಮಾಡು."

ಇದು ಸಾಲದಿಂದ ಮುಕ್ತನಾಗಲು ಪ್ರಾರ್ಥಿಸುವ ಪ್ರಾರ್ಥನೆ

## 4

«اللَّهُمَّ مُصَرِّفَ الْقُلُوبِ صَرِّفْ قُلُوبَنَا عَلَى طَاعَتِكَ» «يَا مُقَلِّبَ الْقُلُوبِ ثَبِّتْ قَلْبِي عَلَى دِينِكَ»

ಅಲ್ಲಾಹುಮ್ಮ ಯಾ ಮುಸರ್‍ರಿಫಲ್ ಕುಲೂಬ್ ಸರ್‍ರಿಫ್ ಕಲ್ಬೀ ಅಲಾ ತಾಅತಿಕ. ಅಲ್ಲಾಹುಮ್ಮ ಯಾ ಮುಕಲ್ಲಿಬಲ್ ಕುಲೂಬ್ ಸಬ್ಬಿತ್ ಕಲ್ಬೀ ಅಲಾ ದೀನಿಕ.

“ಓ ಅಲ್ಲಾಹ್! ಹೃದಯಗಳನ್ನು ತಿರುಗಿಸುವವನೇ! ನನ್ನ ಹೃದಯವನ್ನು ನಿನ್ನ ಆಜ್ಞಾಪಾಲನೆಯ ಕಡೆಗೆ ತಿರುಗಿಸು. ಓ ಅಲ್ಲಾಹ್! ಹೃದಯಗಳನ್ನು ಬುಡಮೇಲುಗೊಳಿಸುವವನೇ! ನನ್ನ

ಹೃದಯವನ್ನು ನಿನ್ನ ಧರ್ಮದ ಮೇಲೆ ಅಚಲವಾಗಿಡು."

ಇದು ಸತ್ಯದಲ್ಲಿ ಅಚಲವಾಗಿ ನಿಲ್ಲಲು ಮಾಡುವ ಪ್ರಾರ್ಥನೆ. ಇದು ಪ್ರವಾದಿ(ಸ) ರವರು ಅತಿಹೆಚ್ಚಾಗಿ ಪ್ರಾರ್ಥಿಸುತ್ತಿದ್ದ ಪ್ರಾರ್ಥನೆ

5

«اللهُمَّ إِنِّي أَسْأَلُكَ مِنَ الْخَيْرِ كُلِّهِ عَاجِلِهِ وَآجِلِهِ، مَا عَلِمْتُ مِنْهُ وَمَا لَمْ أَعْلَمْ، وَأَعُوذُ بِكَ مِنَ الشَّرِّ كُلِّهِ، عَاجِلِهِ وَآجِلِهِ مَا عَلِمْتُ مِنْهُ، وَمَا لَمْ أَعْلَمْ، اللهُمَّ إِنِّي أَسْأَلُكَ مِنْ خَيْرِ مَا سَأَلَكَ عَبْدُكَ وَنَبِيُّكَ مُحَمَّدٌ ﷺ، وَأَعُوذُ بِكَ مِنْ شَرِّ مَا عَاذَ مِنْهُ عَبْدُكَ وَنَبِيُّكَ، اللهُمَّ إِنِّي أَسْأَلُكَ الْجَنَّةَ وَمَا قَرَّبَ إِلَيْهَا مِنْ قَوْلٍ أَوْ عَمَلٍ، وَأَعُوذُ بِكَ مِنَ النَّارِ وَمَا قَرَّبَ إِلَيْهَا مِنْ قَوْلٍ أَوْ عَمَلٍ، وَأَسْأَلُكَ أَنْ تَجْعَلَ كُلَّ قَضَاءٍ تَقْضِيهِ لِي خَيْرًا»

(ಅಲ್ಲಾಹುಮ್ಮ ಇನ್ನೀ ಅಸ್‌ಅಲುಕ ಮಿನಲ್ ಖೈರಿ ಕುಲ್ಲಿಹೀ, ಆಜಿಲಿಹೀ ವಆಜಿಲಿಹೀ, ಮಾ ಅಲಿಮ್ತು ಮಿನ್‌ಹು ವಮಾ ಲಮ್ ಅಅಲಮ್, ವಅಊದು ಬಿಕ ಮಿನ ಶ್ಯರ್‌ರಿ ಕುಲ್ಲಿಹೀ, ಆಜಿಲಿಹೀ ವಆಜಿಲಿಹೀ, ಮಾ ಅಲಿಮ್ತು ಮಿನ್‌ಹು ವಮಾ ಲಮ್ ಅಅಲಮ್, ಅಲ್ಲಾಹುಮ್ಮ ಇನ್ನೀ ಅಸ್‌ಅಲುಕ ಮಿನ್ ಖೈರಿ ಮಾ ಸಅಲಕ ಅಬ್ದುಕ ವನಬಿಯ್ಯುಕ ಮುಹಮ್ಮದುನ್ ಸಲ್ಲಲ್ಲಾಹು ಅಲೈಹಿ ವಸಲ್ಲಮ, ವಅಊದು ಬಿಕ ಮಿನ್ ಶರ್‌ರಿ ಮಾ ಆದ ಮಿನ್‌ಹು ಅಬ್ದುಕ ನಬಿಯ್ಯುಕ. ಅಲ್ಲಾಹುಮ್ಮ ಇನ್ನೀ ಅಸ್‌ಅಲುಕಲ್ ಜನ್ನತ ವಮಾ ಕರ್‌ರಬ ಇಲೈಹಾ ಮಿನ್ ಕೌಲಿನ್ ಅವ್ ಅಮಲಿನ್, ವಅಊದು ಬಿಕ ಮಿನ ನ್ನಾರಿ ವಮಾ ಕರ್‌ರಬ ಇಲೈಹಾ ಮಿನ್ ಕೌಲಿನ್ ಅವ್ ಅಮಲಿನ್, ವ ವಅಸ್‌ಅಲುಕ ಅನ್ ತಜ್‌ಅಲ ಕುಲ್ಲ ಕದಾಇನ್ ಕದಯ್ತುಹೂ ಲೀ ಖೈರನ್)

“ಓ ಅಲ್ಲಾಹ್! ಐಹಿಕವಾದ ಮತ್ತು ಪಾರಲೌಕಿಕವಾದ ಒಳಿತುಗಳೆಲ್ಲವನ್ನೂ ನಾನು ನಿನ್ನೊಂದಿಗೆ ಬೇಡುತ್ತಿದ್ದೇನೆ, ಅವುಗಳಲ್ಲಿ ನಾನು ತಿಳಿದಿರುವುದನ್ನೂ ತಿಳಿಯದಿರುವುದನ್ನೂ (ಬೇಡುತ್ತಿದ್ದೇನೆ). ಐಹಿಕವಾದ ಮತ್ತು ಪಾರಲೌಕಿಕವಾದ ಕೆಡುಕುಗಳೆಲ್ಲದರಿಂದಲೂ ನಾನು ನಿನ್ನೊಂದಿಗೆ ಅಭಯ ಯಾಚಿಸುತ್ತಿದ್ದೇನೆ, ಅವುಗಳಲ್ಲಿ ನಾನು ತಿಳಿದಿರುವುದರಿಂದಲೂ ತಿಳಿಯದಿರುವುದರಿಂದಲೂ (ಅಭಯ ಯಾಚಿಸುತ್ತಿದ್ದೇನೆ). ಓ ಅಲ್ಲಾಹ್! ನಿನ್ನ ದಾಸ ಮತ್ತು ಪ್ರವಾದಿಯಾದ ಮುಹಮ್ಮದ್(ಸ) ರವರು ನಿನ್ನೊಂದಿಗೆ ಬೇಡಿದ ಒಳಿತುಗಳೆಲ್ಲವನ್ನೂ ನಾನು ನಿನ್ನೊಂದಿಗೆ ಬೇಡುತ್ತಿದ್ದೇನೆ, ನಿನ್ನ ದಾಸ ಮತ್ತು ಪ್ರವಾದಿಯಾದ ಮುಹಮ್ಮದ್(ಸ) ರವರು ನಿನ್ನೊಂದಿಗೆ ಅಭಯ ಯಾಚಿಸಿದ

ಕೆಡುಕುಗಳೆಲ್ಲದರಿಂದಲೂ ನಾನು ನಿನ್ನೊಂದಿಗೆ ಅಭಯ ಯಾಚಿಸುತ್ತಿದ್ದೇನೆ. ಓ ಅಲ್ಲಾಹ್! ಸ್ವರ್ಗವನ್ನು ಮತ್ತು ಅದಕ್ಕೆ ಹತ್ತಿರದಲ್ಲಿರುವ ಮಾತು ಮತ್ತು ಕರ್ಮವನ್ನು ನಾನು ನಿನ್ನೊಂದಿಗೆ ಬೇಡುತ್ತಿದ್ದೇನೆ, ನರಕ ಮತ್ತು ಅದಕ್ಕೆ ಹತ್ತಿರದಲ್ಲಿರುವ ಮಾತು ಮತ್ತು ಕರ್ಮದಿಂದ ನಾನು ನಿನ್ನೊಂದಿಗೆ ಅಭಯ ಯಾಚಿಸುತ್ತಿದ್ದೇನೆ. ನೀನು ನನ್ನ ಮೇಲೆ ವಿಧಿಸಿದ ಎಲ್ಲಾ ವಿಧಿಗಳೂ ನನಗೆ ಒಳಿತಾಗಿ ಮಾಡಬೇಕೆಂದು ಬೇಡುತ್ತೇನೆ."

ಇದು ಸಮಗ್ರವಾದ ಒಂದು ಪ್ರಾರ್ಥನೆ

6

«يَا حَيُّ يَا قَيُّومُ بِرَحْمَتِكَ أَسْتَغِيثُ، أَصْلِحْ لِي شَأْنِي كُلَّهُ، وَلَا تَكِلْنِي إِلَى نَفْسِي طَرْفَةَ عَيْنٍ»

ಯಾ ಹಯ್ಯು ಯಾ ಕಯ್ಯೂಮು ಬಿರಹ್ಮತಿಕ ಅಸ್ತಗೀಸು ಅಸ್ಲಿಹ್ ಲೀ ಶಅ್‌ನೀ ಕುಲ್ಲಹೂ ವಲಾ ತಕಿಲ್‌ನೀ ಇಲಾ ನಫ್ಸೀ ತರ್‌ಫತ ಐನ್

“ನಿರಂತರವಾಗಿ ಜೀವಿಸುವವನೇ! ಸ್ವಯಂ ಅಸ್ತಿತ್ವದಲ್ಲಿರುವವನು ಮತ್ತು ಇತರೆಲ್ಲವನ್ನೂ ಸಂರಕ್ಷಿಸಿ ನಿಯಂತ್ರಿಸುವವನೇ! ನಿನ್ನ ಕರುಣೆಯ ಮೂಲಕ ನಾನು ನಿನ್ನಲ್ಲಿ ಸಹಾಯ ಬೇಡುತ್ತೇನೆ. ನನ್ನ ಎಲ್ಲ ಕಾರ್ಯಗಳನ್ನೂ ನನಗೆ ಸರಿಪಡಿಸಿಕೊಡು.

ಕಣ್ಣೆವೆಯಿಕ್ಕುವಷ್ಟು ಸಮಯ ಕೂಡ ನಾನು ನನ್ನನ್ನೇ ಅವಲಂಬಿಸುವಂತೆ ಮಾಡದಿರು."

## ಇದು ಕಷ್ಟ ಮತ್ತು ದುಃಖವನ್ನು ನಿವಾರಿಸುವುದಕ್ಕಿರುವ ಪ್ರಾರ್ಥನೆ

## 7

«اللَّهُمَّ إِنِّي عَبْدُكَ ابْنُ عَبْدِكَ ابْنُ أَمَتِكَ نَاصِيَتِي بِيَدِكَ مَاضٍ فِيَّ حُكْمُكَ عَدْلٌ فِيَّ قَضَاؤُكَ، أَسْأَلُكَ بِكُلِّ اسْمٍ هُوَ لَكَ سَمَّيْتَ بِهِ نَفْسَكَ أَوْ أَنْزَلْتَهُ فِي كِتَابِكَ أَوْ عَلَّمْتَهُ أَحَدًا مِنْ خَلْقِكَ أَوِ اسْتَأْثَرْتَ بِهِ فِي عِلْمِ الْغَيْبِ عِنْدَكَ أَنْ تَجْعَلَ الْقُرْآنَ رَبِيعَ قَلْبِي وَنُورَ بَصَرِي وَجِلَاءَ حُزْنِي وَذَهَابَ هَمِّي»

ಅಲ್ಲಾಹುಮ್ಮ ಇನ್ನೀ ಅಬ್ದುಕ, ವಬ್ನು ಅಬ್ದಿಕ, ವಬ್ನು ಅಮತಿಕ, ನಾಸಿಯತೀ ಬಿಯದಿಕ, ಮಾದಿನ್ ಫಿಯ್ಯ ಹುಕ್ಮುಕ, ಅದ್ಲುನ್ ಫಿಯ್ಯ

ಕದಾಉಕ, ಅಸ್‌ಅಲುಕ ಬಿಕುಲ್ಲಿ ಇಸ್ಮಿನ್ ಹುವ ಲಕ, ಸಮ್ಮೈತ್ತು ಬಿಹೀ ನಫ್ಸಕ, ಅವ್ ಅನ್ಝಲ್ತಹೂ ಫೀ ಕಿತಾಬಿಕ, ಅವ್ ಅಲ್ಲಮ್ತಹೂ ಅಹದನ್ ಮಿನ್ ಖಲ್ಕಿಕ, ಅವಿಸ್ತಅ್‌ಸರ್ತ ಬಿಹೀ ಫೀ ಇಲ್ಮಿಲ್ ಗೈಬಿ ಇನ್ದಕ, ಅನ್ ತಜ್‌ಅಲಲ್ ಕುರ್‌ಆನ ರಬೀಅ ಕಲ್ಬೀ, ವನೂರ ಸದ್ರೀ, ವಜಲಾಅ ಹುಝ್ನೀ, ವದಹಾಬ ಹಮ್ಮೀ

"ಓ ಅಲ್ಲಾಹ್! ನಾನು ನಿನ್ನ ದಾಸ. ನಿನ್ನ ದಾಸನ ಮಗ. ನಿನ್ನ ದಾಸಿಯ ಮಗ. ನನ್ನ ಮುಂದಲೆ ನಿನ್ನ ಕೈಯಲ್ಲಿದೆ. ನಿನ್ನ ವಿಧಿ ನನ್ನಲ್ಲಿ ಜಾರಿಯಾಗಿದೆ. ನನ್ನ ಬಗ್ಗೆ ನಿನ್ನ ತೀರ್ಮಾನವು ನ್ಯಾಯಪೂರ್ಣವಾಗಿದೆ. ನೀನು ನಿನ್ನನ್ನು ಹೆಸರಿಸಿದ, ಅಥವಾ ನಿನ್ನ ಗ್ರಂಥದಲ್ಲಿ ಅವತೀರ್ಣಗೊಳಿಸಿದ, ಅಥವಾ ನಿನ್ನ ಸೃಷ್ಟಿಗಳಲ್ಲಿ ಯಾರಿಗಾದರೂ

ನೀನು ಕಲಿಸಿಕೊಟ್ಟ, ಅಥವಾ ನಿನ್ನ ಬಳಿ ಅದೃಶ್ಯಜ್ಞಾನದಲ್ಲಿ ಸಂರಕ್ಷಿಸಿಟ್ಟ ನಿನ್ನ ಎಲ್ಲ ಹೆಸರುಗಳ ಮೂಲಕ, ಕುರ್‌ಆನನ್ನು ನನ್ನ ಹೃದಯದ ವಸಂತವನ್ನಾಗಿ, ನನ್ನ ಎದೆಯ ಬೆಳಕನ್ನಾಗಿ, ನನ್ನ ದುಃಖದ ನಿವಾರಕವನ್ನಾಗಿ ಮತ್ತು ನನ್ನ ವ್ಯಥೆಯ ನಿವಾರಕವನ್ನಾಗಿ ಮಾಡಬೇಕೆಂದು ನಾನು ನಿನ್ನಲ್ಲಿ ಬೇಡುತ್ತೇನೆ."

## ಇದು ಕಷ್ಟ ಮತ್ತು ದುಃಖವನ್ನು ನಿವಾರಿಸುವುದಕ್ಕಿರುವ ಪ್ರಾರ್ಥನೆ

8

«اللَّهُمَّ لَا سَهْلَ إِلَّا مَا جَعَلْتَهُ سَهْلًا،
وَأَنْتَ تَجْعَلُ الْحَزْنَ سَهْلًا إِذَا شِئْتَ»

ಅಲ್ಲಾಹುಮ್ಮ ಲಾ ಸಹ್ಲ ಇಲ್ಲಾ ಮಾ ಜಅಲ್ತಹೂ ಸಹ್ಲನ್, ವಅನ್ತ ತಜ್‌ಅಲುಲ್ ಹಝ್ನ ಇದಾ ಶಿಅ್ತ ಸಹ್ಲನ್

“ಓ ಅಲ್ಲಾಹ್! ನೀನು ಸುಲಭಗೊಳಿಸಿದವುಗಳ ಹೊರತು ಬೇರಾವುದೂ ಸುಲಭವಲ್ಲ. ನೀನಿಚ್ಛಿಸಿದರೆ ನೀನು ಕಷ್ಟವನ್ನು ಸುಲಭವನ್ನಾಗಿ ಮಾಡುವೆ.”

ಇದು ಕಷ್ಟಗಳನ್ನು ಸುಲಭಗೊಳಿಸಲು ಮಾಡುವ ಪ್ರಾರ್ಥನೆ

9

«اللَّهُمَّ إِنِّي أَسْأَلُكَ الْهُدَى وَالتُّقَى،
وَالْعَفَافَ وَالْغِنَى»

ಅಲ್ಲಾಹುಮ್ಮ ಇನ್ನೀ ಅಸ್‌ಅಲುಕಲ್ ಹುದಾ ವತ್ತುಕಾ ವಲ್ ಅಫಾಫ ವಲ್ ಗಿನಾ

"ಓ ಅಲ್ಲಾಹ್! ನಾನು ನಿನ್ನೊಂದಿಗೆ ಮಾರ್ಗದರ್ಶನವನ್ನು, ಭಯಭಕ್ತಿಯನ್ನು, ಚಾರಿತ್ರ್ಯವನ್ನು ಮತ್ತು ಸಂಪನ್ನತೆಯನ್ನು ಬೇಡುತ್ತಿದ್ದೇನೆ."

10

«اللَّهُمَّ اهْدِنِي، وَسَدِّدْنِي»

ಅಲ್ಲಾಹುಮ್ಮ ಹ್ದಿನೀ ವಸದ್ದಿದ್‌ನೀ

“ಓ ಅಲ್ಲಾಹ್! ನನಗೆ ಮಾರ್ಗದರ್ಶನ ನೀಡು ಮತ್ತು ನನ್ನ ಮಾತನ್ನು ಸರಿಯಾಗಿಸು.”

## 11

«اللَّهُمَّ أَصْلِحْ لِي دِينِي الَّذِي هُوَ عِصْمَةُ أَمْرِي، وَأَصْلِحْ لِي دُنْيَايَ الَّتِي فِيهَا مَعَاشِي، وَأَصْلِحْ لِي آخِرَتِي الَّتِي فِيهَا مَعَادِي، وَاجْعَلِ الْحَيَاةَ زِيَادَةً لِي فِي كُلِّ خَيْرٍ، وَاجْعَلِ الْمَوْتَ رَاحَةً لِي مِنْ كُلِّ شَرٍّ»

ಅಲ್ಲಾಹುಮ್ಮ ಅಸ್ಲಿಹ್ ಲೀ ದೀನಿಲ್ಲದೀ ಹುವ ಇಸ್ಮತು ಅಮ್ರೀ ವಅಸ್ಲಿಹ್ ಲೀ ದುನ್ಯಾಯಲ್ಲತೀ ಫೀಹಾ ಮಆಶೀ ವಅಸ್ಲಿಹ್ ಲೀ ಆಖಿರತಿಲ್ಲತೀ ಫೀಹಾ ಮಆದೀ ವಜ್‌ಅಲಿಲ್ ಹಯಾತ ಝಿಯಾದತನ್ ಲೀ ಫೀ ಕುಲ್ಲಿ ಖೈರಿನ್ ವಜ್‌ಅಲಿಲ್ ಮೌತ ರಾಹತನ್ ಲೀ ಮಿನ್ ಕುಲ್ಲಿ ಶರ್ರ್

“ಓ ಅಲ್ಲಾಹ್! ನನ್ನ ಕಾರ್ಯಗಳ ಕೇಂದ್ರವಾಗಿರುವ ನನ್ನ ಧರ್ಮವನ್ನು ನನಗೆ ಉತ್ತಮ ಗೊಳಿಸು, ನಾನು ಬದುಕಬೇಕಾಗಿರುವ ನನ್ನ ಇಹಲೋಕವನ್ನು ನನಗೆ ಉತ್ತಮ ಗೊಳಿಸು, ನಾನು ಮರಳಬೇಕಾಗಿರುವ ನನ್ನ ಪರಲೋಕವನ್ನು ನನಗೆ ಉತ್ತಮಗೊಳಿಸು. ಬದುಕನ್ನು ಪ್ರತಿಯೊಂದು ಒಳಿತಿನಲ್ಲೂ ನನಗೆ ವರ್ಧಿಸು ಮತ್ತು ಮರಣವನ್ನು ಪ್ರತಿಯೊಂದು ಕೆಡುಕಿನಿಂದಲೂ ನನಗೆ ಮುಕ್ತವಾಗಿಸು.”

12

«اللَّهُمَّ إِنَّكَ عُفُوٌّ تُحِبُّ الْعَفْـوَ فَاعْفُ عَنِّي»

ಅಲ್ಲಾಹುಮ್ಮ ಇನ್ನಕ ಅಫುವ್ವುನ್ ತುಹಿಬ್ಬುಲ್ ಅಫ್ವ ಫಅಫು ಅನ್ನೀ

“ಓ ಅಲ್ಲಾಹ್! ನೀನು ಕ್ಷಮಿಸುವವನಾಗಿರುವೆ. ಕ್ಷಮೆಯನ್ನು ಇಷ್ಟಪಡುವವನಾಗಿರುವೆ. ಆದ್ದರಿಂದ ನನ್ನನ್ನು ಕ್ಷಮಿಸು.”

13

«اللَّهُمَّ اقْسِمْ لَنَا مِنْ خَشْيَتِكَ مَا يَحُولُ بَيْنَنَا وَبَيْنَ مَعَاصِيكَ، وَمِنْ طَاعَتِكَ مَا تُبَلِّغُنَا بِهِ جَنَّتَكَ، وَمِنَ اليَقِينِ مَا تُهَوِّنُ بِهِ عَلَيْنَا مُصِيبَاتِ الدُّنْيَا، وَمَتِّعْنَا بِأَسْمَاعِنَا وَأَبْصَارِنَا وَقُوَّتِنَا مَا أَحْيَيْتَنَا، وَاجْعَلْهُ الوَارِثَ مِنَّا، وَاجْعَلْ ثَأْرَنَا عَلَى مَنْ ظَلَمَنَا، وَانْصُرْنَا عَلَى مَنْ عَادَانَا، وَلاَ تَجْعَلْ مُصِيبَتَنَا فِي دِينِنَا، وَلاَ تَجْعَلِ الدُّنْيَا أَكْبَرَ هَمِّنَا وَلاَ مَبْلَغَ عِلْمِنَا، وَلاَ تُسَلِّطْ عَلَيْنَا مَنْ لاَ يَرْحَمُنَا»

ಅಲ್ಲಾಹುಮ್ಮ ಕ್ಸಿಮ್ ಲನಾ ಮಿನ್ ಖಿಶ್ಯತಿಕ ಮಾ ತಹೂಲು ಬೈನನಾ ವಬೈನ ಮಅ್‌ಸಿಯತಿಕ, ವಮಿನ್ ತಾಅತಿಕ ಮಾ ತುಬಲ್ಲಿಗುನಾ ಬಿಹೀ ಜನ್ನತಕ, ವಮಿನಲ್ ಯಕೀನಿ ಮಾ ತುಹವ್ವಿಲು ಅಲೈನಾ ಮಸಾಇಬ ದ್ದುನ್ಯಾ, ಅಲ್ಲಾಹುಮ್ಮ ಅಮ್ತಿಅ್‌ನಾ ಬಿಅಸ್ಮಾಇನಾ ವ ಅಬ್‌ಸಾರಿನಾ, ವಕುವ್ವತಿನಾ ಮಾ ಅಹ್ಯಯ್ತನಾ, ವಜ್‌ಅಲ್‌ಹುಲ್ ವಾರಿಸ ಮಿನ್ನಾ, ವಜ್‌ಅಲ್ ಸಅ್‌ರನಾ ಅಲಾ ಮನ್ ಝುಲಮನಾ, ವನ್ಸುರ್‌ನಾ ಅಲಾ ಮನ್ ಆದಾನಾ, ವಲಾ ತಜ್‌ಅಲ್ ಮುಸೀಬತನಾ ಫೀ ದೀನಿನಾ, ವಲಾ ತಜ್‌ಅಲಿದ್ದುನ್ಯಾ ಅಕ್ಬರ ಹಮ್ಮಿನಾ ವಲಾ ಮಬ್ಲಗ ಇಲ್ಮಿನಾ ವಲಾ ತುಸಲ್ಲಿತ್ ಅಲೈನಾ ಮನ್ ಲಾ ಯರ್ಹಮುನಾ.

“ಓ ಅಲ್ಲಾಹ್! ನಮ್ಮ ಮತ್ತು ನಮ್ಮ ಪಾಪಗಳ ಮಧ್ಯೆ ಗೋಡೆಯಾಗುವ ರೀತಿಯಲ್ಲಿ ನಿನ್ನ ಭಯಭಕ್ತಿಯನ್ನು, ನಿನ್ನ ಸ್ವರ್ಗವನ್ನು ನಮಗೆ ತಲುಪಿಸುವ ನಿನ್ನ ಆಜ್ಞಾಪಾಲನೆಯನ್ನು, ಇಹಲೋಕದ ಕಷ್ಟಗಳನ್ನು ನಮಗೆ ಸುಲಭಗೊಳಿಸುವ ನಿನ್ನ ದೃಢವಿಶ್ವಾಸವನ್ನು ನಮಗೆ ನೀಡು. ಓ ಅಲ್ಲಾಹ್! ನಮ್ಮನ್ನು ನೀನು ಜೀವಂತವಾಗಿಡುವ ತನಕ ನಮ್ಮ ಶ್ರವಣಗಳಲ್ಲಿ, ದೃಷ್ಟಿಗಳಲ್ಲಿ ಮತ್ತು ಶಕ್ತಿಯಲ್ಲಿ ನಮಗೆ ಆನಂದವನ್ನು ನೀಡು. ಅದನ್ನು ನಮ್ಮ ಉತ್ತರಾಧಿಕಾರಿಗಳಿಗೂ ನೀಡು. ನಮಗೆ ಅನ್ಯಾಯ ಮಾಡಿದವರ ವಿರುದ್ಧ ಪ್ರತೀಕಾರ ಕೈಗೊಳ್ಳುವಂತೆ ಮಾಡು. ನಮ್ಮ ಶತ್ರುಗಳ ವಿರುದ್ಧ ನಮಗೆ ಸಹಾಯ ಮಾಡು. ನಮ್ಮ ಧರ್ಮದ ವಿಷಯದಲ್ಲಿ ನಮಗೆ ಯಾವುದೇ ದುರಂತ ಎದುರಾಗದಂತೆ ಮಾಡು. ಇಹಲೋಕವನ್ನು ನಮ್ಮ ಜೀವನದ ಮುಖ್ಯ

ವಿಷಯವನ್ನಾಗಿ ಮತ್ತು ನಮ್ಮ ಜ್ಞಾನದ ಪರಿಮಿತಿಯನ್ನಾಗಿ ಮಾಡದಿರು. ನಮಗೆ ಕರುಣೆ ತೋರದವರಿಗೆ ನಮ್ಮ ಮೇಲೆ ಅಧಿಕಾರವನ್ನು ನೀಡದಿರು."

## 14

«رَبِّ أَعِنِّي وَلاَ تُعِنْ عَلَيَّ، وَانْصُرْنِي وَلاَ تَنْصُرْ عَلَيَّ، وَامْكُرْ لِي وَلاَ تَمْكُرْ عَلَيَّ، وَاهْدِنِي وَيَسِّرِ الهُدَى لِي، وَانْصُرْنِي عَلَى مَنْ بَغَى عَلَيَّ، رَبِّ اجْعَلْنِي لَكَ شَكَّارًا، لَكَ ذَكَّارًا، لَكَ رَهَّابًا، لَكَ مِطْوَاعًا، لَكَ مُخْبِتًا، إِلَيْكَ أَوَّاهًا مُنِيبًا، رَبِّ تَقَبَّلْ تَوْبَتِي، وَاغْسِلْ حَوْبَتِي، وَأَجِبْ دَعْوَتِي، وَثَبِّتْ حُجَّتِي، وَسَدِّدْ لِسَانِي، وَاهْدِ قَلْبِي، وَاسْلُلْ سَخِيمَةَ صَدْرِي».

ರಬ್ಬಿ ಅಇನ್ನೀ ವಲಾ ತುಇನ್ ಅಲಯ್ಯ ವನ್ಸುರ್‌ನೀ ವಲಾ ತನ್ಸುರ್ ಅಲಯ್ಯ

ವಮ್ಕುರ್‌ನೀ ವಲಾ ತಮ್ಕುರ್ ಅಲಯ್ಯ ವಹ್ದಿನೀ ವಯಸ್ಸಿರಿಲ್ ಹುದಾ ಲೀ. ವನ್ಸುರ್‌ನೀ ಅಲಾ ಮನ್ ಬಗಾ ಅಲಯ್ಯ, ರಬ್ಬಿಜ್‌ಅಲ್‌ನೀ ಲಕ ಶಕ್ಕಾರನ್ ಲಕ ದಕ್ಕಾರನ್ ಲಕ ರಹ್ಹಾಬನ್ ಲಕ ಮಿತ್ವಾಅನ್ ಲಕ ಮುಖ್ಬಿತನ್ ಇಲೈಕ ಅವ್ವಾಹನ್ ಮುನೀಬನ್, ರಬ್ಬಿ ತಕಬ್ಬಲ್ ತೌಬತೀ ವಗ್ಸಿಲ್ ಹೌಬತೀ ವಅಜಿಬ್ ದಅವತೀ ವಸಬ್ಬಿತ್ ಹುಜ್ಜತೀ ವಸದ್ದಿದ್ ಲಿಸಾನೀ ವಹ್ದಿ ಕಲ್ಬೀ ವಸ್ಲುಲ್ ಸಖೀಮತ ಸ್ವದ್ರೀ

“ನನ್ನ ರಬ್ಬೇ! ನನಗೆ ಸಹಾಯ ಮಾಡು, ನನ್ನ ವಿರುದ್ಧ ಸಹಾಯ ಮಾಡದಿರು. ನನಗೆ ನೆರವು ನೀಡು, ನನ್ನ ವಿರುದ್ಧ ನೆರವು ನೀಡದಿರು. ನನಗೋಸ್ಕರ ತಂತ್ರ ಹೂಡು, ನನ್ನ ವಿರುದ್ಧ ತಂತ್ರ ಹೂಡದಿರು. ನನ್ನನ್ನು ಮುನ್ನಡೆಸು ಮತ್ತು ನನಗೆ ನನ್ನ ಮಾರ್ಗದರ್ಶನವನ್ನು ಸುಲಭೀಕರಿಸು.

ನನ್ನ ವಿರುದ್ಧ ಬಂಡೇಳುವವರಿಗೆದುರಾಗಿ ನನಗೆ ನೆರವು ನೀಡು. ನನ್ನ ರಬ್ಬೇ! ನಿನಗೆ ಅತ್ಯಧಿಕ ಕೃತಜ್ಞತೆ ಸಲ್ಲಿಸುವಂತೆ, ನಿನ್ನನ್ನು ಅತ್ಯಧಿಕ ಸ್ಮರಿಸುವಂತೆ, ನಿನ್ನನ್ನು ಅತ್ಯಧಿಕ ಪೂಜಿಸುವಂತೆ, ನಿನಗೆ ವಿಧೇಯವಾಗಿರುವಂತೆ ಮತ್ತು ನಿನ್ನೆಡೆಗೆ ಪಶ್ಚಾತ್ತಾಪದೊಂದಿಗೆ ಮರಳುವಂತೆ ನನ್ನನ್ನು ಮಾಡು. ನನ್ನ ರಬ್ಬೇ! ನನ್ನ ಪಶ್ಚಾತ್ತಾಪವನ್ನು ಸ್ವೀಕರಿಸು, ನನ್ನ ಪಾಪವನ್ನು ತೊಳೆದುಬಿಡು, ನನ್ನ ಪ್ರಾರ್ಥನೆಗೆ ಉತ್ತರಿಸು, ನನ್ನ ಆಧಾರವನ್ನು ದೃಢಗೊಳಿಸು, ನನ್ನ ನಾಲಗೆಯನ್ನು ನೇರವಾಗಿಸು, ನನ್ನ ಹೃದಯವನ್ನು ಮುನ್ನಡೆಸು ಮತ್ತು ನನ್ನ ಹೃದಯದ ಮಾಲಿನ್ಯವನ್ನು ನಿವಾರಿಸು."

## 15

«اللَّهُمَّ إِنِّي أَسْأَلُكَ فِعْلَ الخَيْرَاتِ، وَتَرْكَ الْمُنْكَرَاتِ، وَحُبَّ الْمَسَاكِينِ، وَأَنْ تَغْفِرَ لِي وَتَرْحَمَنِي، وَإِذَا أَرَدْتَ فِتْنَةً فِي قَوْمٍ فَتَوَفَّنِي غَيْرَ مَفْتُونٍ، وَأَسْأَلُكَ حُبَّكَ وَحُبَّ مَنْ يُحِبُّكَ، وَحُبَّ عَمَلٍ يُقَرِّبُ إِلَى حُبِّكَ»

ಅಲ್ಲಾಹುಮ್ಮ ಇನ್ನೀ ಅಸ್‌ಅಲುಕ ಫಿಅ್‌ಲಲ್ ಖೈರಾತಿ, ವತರ್ಕಲ್ ಮುನ್ಕರಾತಿ, ವಹುಬ್ಬಲ್ ಮಸಾಕೀನಿ, ವಅನ್ ತಗ್ಫಿರ ಲೀ ವತರ್ಹಮನೀ, ವಇದಾ ಅರದ್ತ ಫಿತ್ನತನ್ ಫೀ ಕೌಮಿನ್ ಫತವಫ್ಫನೀ ಗೈರ ಮಫ್ತೂನಿನ್. ವಅಸ್‌ಅಲುಕ ಹುಬ್ಬಕ ವ ಹುಬ್ಬ ಮನ್ ಯುಹಿಬ್ಬುಕ, ವಹುಬ್ಬ ಅಮಲಿನ್ ಯುಕರ್‌ರಿಬು ಇಲಾ ಹುಬ್ಬಿಕ

"ಓ ಅಲ್ಲಾಹ್! ನಾನು ನಿನ್ನಲ್ಲಿ ಸತ್ಕರ್ಮಗಳನ್ನು, ದುಷ್ಕರ್ಮಗಳ ತೊರೆಯುವಿಕೆಯನ್ನು, ಬಡವರ ಪ್ರೀತಿಯನ್ನು ಬೇಡುತ್ತೇನೆ. ನೀನು ನನ್ನನ್ನು ಕ್ಷಮಿಸಬೇಕೆಂದು ಮತ್ತು ನನಗೆ ಕರುಣೆ ತೋರಬೇಕೆಂದು ಬೇಡುತ್ತೇನೆ. ನೀನು ಯಾವುದಾದರೂ ಜನತೆಯನ್ನು ಪರೀಕ್ಷಿಸಲು ಬಯಸಿದರೆ ಪರೀಕ್ಷೆಗೆ ಒಳಗಾಗದಂತೆ ನನ್ನನ್ನು ಮೃತಪಡಿಸಬೇಕೆಂದು ಬೇಡುತ್ತೇನೆ. ನಾನು ನಿನ್ನ ಪ್ರೀತಿಯನ್ನು, ನಿನ್ನನ್ನು ಪ್ರೀತಿಸುವವರ ಪ್ರೀತಿಯನ್ನು, ನಿನ್ನ ಪ್ರೀತಿಗೆ ಸಮೀಪಗೊಳಿಸುವ ಕರ್ಮದ ಪ್ರೀತಿಯನ್ನು ಬೇಡುತ್ತೇನೆ."

ಈ ಪ್ರಾರ್ಥನೆಗಳ ಬಗ್ಗೆ ಪ್ರವಾದಿ(ಸ) ರವರು ಹೇಳಿದರು: ಇವೆಲ್ಲವೂ ಸತ್ಯ. ಇವುಗಳನ್ನು ಕಲಿಯಿರಿ ನಂತರ ಇತರರಿಗೆ ಕಲಿಸಿರಿ.

## 16

«اللَّهُمَّ إِنِّي أَسْأَلُكَ الثَّبَاتَ فِي الْأَمْرِ، وَالْعَزِيمَةَ عَلَى الرُّشْدِ، وَأَسْأَلُكَ مُوجِبَاتِ رَحْمَتِكَ، وَعَزَائِمَ مَغْفِرَتِكَ، وَأَسْأَلُكَ شُكْرَ نِعْمَتِكَ، وَحُسْنَ عِبَادَتِكَ، وَأَسْأَلُكَ قَلْبًا سَلِيمًا، وَلِسَانًا صَادِقًا، وَأَسْأَلُكَ مِنْ خَيْرِ مَا تَعْلَمُ، وَأَعُوذُ بِكَ مِنْ شَرِّ مَا تَعْلَمُ، وَأَسْتَغْفِرُكَ لِمَا تَعْلَمُ، إِنَّكَ أَنْتَ عَلَّامُ الْغُيُوبِ»

ಅಲ್ಲಾಹುಮ್ಮ ಇನ್ನೀ ಅಸ್‌ಅಲುಕ ಸ್ಸಬಾತ ಫಿಲ್ ಅಮ್ರಿ, ವಲ್ ಅಝೀಮತ ಅಲ ರ್‍ರುಶ್ದಿ, ವಅಸ್‌ಅಲುಕ ಮೂಜಿಬಾತಿ ರಹ್ಮತಿಕ

ವಅಝ್ಮಾಇಮ ಮಗ್ಫಿರತಿಕ, ವಅಸ್‌ಅಲುಕ ಶುಕ್ರ ನಿಅ್‌ಮತಿಕ, ವಹುಸ್ನ ಇಬಾದತಿಕ, ವಅಸ್‌ಅಲುಕ ಕಲ್ಬನ್ ಸಲೀಮನ್, ವಲಿಸಾನನ್ ಸ್ವಾದಿಕನ್, ವಅಸ್‌ಅಲುಕ ಮಿನ್ ಖೈರಿ ಮಾ ತಅ್‌ಲಮು, ವಅಊದು ಬಿಕ ಮಿನ್ ಶರ್ರಿ ಮಾ ತಅ್‌ಲಮು, ವಅಸ್ತಗ್ಫಿರುಕ ಲಿಮಾ ತಅ್‌ಲಮು, ಇನ್ನಕ ಅನ್ತ ಅಲ್ಲಾಮುಲ್ ಗುಯೂಬ್.

“ಓ ಅಲ್ಲಾಹ್! ನೀನು ನನಗೆ ಆಜ್ಞಾಪಿಸಿದ ಕಾರ್ಯಗಳನ್ನು ಮಾಡುವುದರಲ್ಲಿ ನನ್ನನ್ನು ಸದೃಢವಾಗಿ ನಿಲ್ಲಿಸಬೇಕೆಂದು ಮತ್ತು ಸನ್ಮಾರ್ಗವನ್ನು ಅನುಸರಿಸುವುದರಲ್ಲಿ ದೃಢನಿರ್ಧಾರವನ್ನು ನೀಡಬೇಕೆಂದು ನಾನು ನಿನ್ನಲ್ಲಿ ಬೇಡುತ್ತೇನೆ. ನಿನ್ನ ಕರುಣೆಯನ್ನು ಮತ್ತು ಕ್ಷಮೆಯನ್ನು ಅನಿವಾರ್ಯಗೊಳಿಸುವ ವಿಷಯಗಳನ್ನು ನಾನು ಬೇಡುತ್ತೇನೆ. ನಿನ್ನ ಅನುಗ್ರಹಗಳಿಗೆ ಕೃತಜ್ಞತೆ ಸಲ್ಲಿಸಲು,

ನಿನ್ನನ್ನು ಉತ್ತಮ ರೀತಿಯಲ್ಲಿ ಆರಾಧನೆ ಮಾಡಲು ನಾನು ಬೇಡುತ್ತೇನೆ. ನಾನು ನಿನ್ನಲ್ಲಿ ಸ್ವಸ್ಥ ಹೃದಯ, ಸತ್ಯಸಂಧ ನಾಲಗೆಯನ್ನು ಬೇಡುತ್ತೇನೆ. ನೀನು ತಿಳಿದಿರುವ ಒಳಿತನ್ನು ನಾನು ಬೇಡುತ್ತೇನೆ. ನೀನು ತಿಳಿದಿರುವ ಕೆಡುಕುಗಳಿಂದ ನಾನು ನಿನ್ನಲ್ಲಿ ರಕ್ಷೆ ಬೇಡುತ್ತೇನೆ. ನೀನು ತಿಳಿದಿರುವ ವಿಷಯಗಳಲ್ಲಿ ನಾನು ನಿನ್ನಲ್ಲಿ ಕ್ಷಮೆ ಬೇಡುತ್ತೇನೆ."

ಇದು ಚಿನ್ನ ಮತ್ತು ಬೆಳ್ಳಿಯ ನಿಧಿಗಿಂತಲೂ ಉತ್ತಮವೆಂದು ಹದೀಸಿನಲ್ಲಿದೆ.

## 17

«اللَّهُمَّ اهْدِنِي فِيمَنْ هَدَيْتَ، وَعَافِنِي فِيمَنْ عَافَيْتَ، وَتَوَلَّنِي فِيمَنْ تَوَلَّيْتَ، وَبَارِكْ لِي فِيمَا أَعْطَيْتَ، وَقِنِي شَرَّ مَا قَضَيْتَ، إِنَّكَ تَقْضِي وَلَا يُقْضَى عَلَيْكَ، إِنَّهُ لَا يَذِلُّ مَنْ وَالَيْتَ، وَلَا يَعِزُّ مَنْ عَادَيْتَ، تَبَارَكْتَ رَبَّنَا وَتَعَالَيْتَ»

ಅಲ್ಲಾಹುಮ್ಮಹ್ದಿನೀ ಫೀಮನ್ ಹದಯ್ತ, ವಆಫಿನೀ ಫೀಮನ್ ಆಫೈತ, ವತವಲ್ಲನೀ ಫೀಮನ್ ತವಲ್ಲಯ್ತ, ವಬಾರಿಕ್ ಲೀ ಫೀಮಾ ಅಅ್‌ತಯ್ತ, ವಕಿನೀ ಶರ್ರ ಮಾ ಕದಯ್ತ, ಇನ್ನಕ ತಕ್‌ದೀ ವಲಾ ಯುಕ್‌ದಾ ಅಲೈಕ, ವಇನ್ನಹೂ ಲಾ ಯದಿಲ್ಲು ಮನ್

## ವಾಲೈತ, ವಲಾ ಯಇಝ್ಝು ಮನ್ ಆದಯ್ತ, ತಬಾರಕ್ತ ರಬ್ಬನಾ ವತಆಲಯ್ತ್

“ಓ ಅಲ್ಲಾಹ್! ನೀನು ಮಾರ್ಗದರ್ಶನ ಮಾಡಿದವರೊಡನೆ ನನಗೂ ಮಾರ್ಗದರ್ಶನ ಮಾಡು. ನೀನು ಕ್ಷಮಿಸಿದವರೊಡನೆ ನನ್ನನ್ನೂ ಕ್ಷಮಿಸು. ನೀನು ಸಂರಕ್ಷಿಸಿದವರೊಂದಿಗೆ ನನ್ನನ್ನೂ ಸಂರಕ್ಷಿಸು. ನೀನು ನನಗೆ ಕರುಣಿಸಿದವುಗಳಲ್ಲಿ ನನಗೆ ಬರಕತ್ತನ್ನು ದಯಪಾಲಿಸು. ನೀನು ವಿಧಿಸಿದ ಕೆಡುಕಿನಿಂದ ನನ್ನನ್ನು ರಕ್ಷಿಸು. ನೀನು ವಿಧಿಸುವವನಾಗಿರುವೆ. ನಿನ್ನ ಮೇಲೆ ವಿಧಿ ಜಾರಿಗೊಳಿಸುವವರಾರೂ ಇಲ್ಲ. ನಿನ್ನ ಸ್ನೇಹ ಪಡೆದವನು ನಿಂದನೆಗೊಳಗಾಗಲಾರ. ನಿನ್ನ ಶತ್ರುತ್ವಕ್ಕೆ ಒಳಗಾದವನು ಪ್ರತಾಪವನ್ನು ಪಡೆಯಲಾರ. ಓ ನಮ್ಮ ರಬ್ಬೇ! ನೀನು ಅನುಗ್ರಹಪೂರ್ಣನು ಮತ್ತು ಅತ್ಯುನ್ನತನು.”

## 18

«اللَّهُمَّ بِعِلْمِكَ الْغَيْبَ، وَقُدْرَتِكَ عَلَى الْخَلْقِ، أَحْيِنِي مَا عَلِمْتَ الْحَيَاةَ خَيْرًا لِي، وَتَوَفَّنِي إِذَا عَلِمْتَ الْوَفَاةَ خَيْرًا لِي، وَأَسْأَلُكَ خَشْيَتَكَ فِي الْغَيْبِ وَالشَّهَادَةِ، وَكَلِمَةَ الْإِخْلَاصِ فِي الرِّضَا وَالْغَضَبِ، وَأَسْأَلُكَ نَعِيمًا لَا يَنْفَدُ، وَقُرَّةَ عَيْنٍ لَا تَنْقَطِعُ، وَأَسْأَلُكَ الرِّضَاءَ بِالْقَضَاءِ، وَبَرْدَ الْعَيْشِ بَعْدَ الْمَوْتِ، وَلَذَّةَ النَّظَرِ إِلَى وَجْهِكَ، وَالشَّوْقَ إِلَى لِقَائِكَ، وَأَعُوذُ بِكَ مِنْ ضَرَّاءَ مُضِرَّةٍ، وَفِتْنَةٍ مُضِلَّةٍ، اللَّهُمَّ زَيِّنَّا بِزِينَةِ الْإِيمَانِ، وَاجْعَلْنَا هُدَاةً مُهْتَدِينَ»

ಅಲ್ಲಾಹುಮ್ಮ ಬಿಇಲ್ಮಿಕಲ್ ಗೈಬ ವಕುದ್ರತಿಕ ಅಲಲ್ ಖಲ್ಕಿ ಅಹ್ಯಿನೀ ಮಾ ಅಲಿಮ್ತಲ್ ಹಯಾತ ಖೈರನ್ ಲೀ ವತವಫ್ಫನೀ ಇದಾ ಅಲಿಮ್ತಲ್ ವಫಾತ ಖೈರನ್ ಲೀ, ವಅಸ್‌ಅಲುಕ ಖಶ್ಯತಕ ಫಿಲ್ ಗೈಬಿ ವಶ್ಶಹಾದತಿ, ವಕಲಿಮತಲ್ ಇಖ್ಲಾಸಿ ಫಿರ್ರಿದಾ ವಲ್ ಗದಬಿ, ವಅಸ್‌ಅಲುಕ ನಈಮನ್ ಲಾ ಯನ್‌ಫದು, ವಕುರ್‍ರತ ಐನಿನ್ ಲಾ ತನ್ಕತಿಉ, ವಅಸ್‌ಅಲುಕ ರ್‍ರಿದಾಅ ಬಿಲ್ ಕದಾಇ, ವಬರದಲ್ ಐಶಿ ಬಅ್‌ದಲ್ ಮೌತಿ, ವಲದ್ದತ ನ್ನಝುರಿ ಇಲಾ ವಜ್‌ಹಿಕ ವಶ್ಶೌಕ ಇಲಾ ಲಿಕಾಇಕ ವಅಊದು ಬಿಕ ಮಿನ್ ದರ್‍ರಾಅ ಮುದಿರ್‍ರತಿನ್ ವಫಿತ್ನತಿನ್ ಮುದಿಲ್ಲತಿನ್, ಅಲ್ಲಾಹುಮ್ಮ ಝಯ್ಯಿನ್ನಾ ಬಿಝೀನತಿಲ್ ಈಮಾನಿ ವಜ್‌ಅಲ್‌ನಾ ಹುದಾತನ್ ಮುಹ್ತದೀನ್

“ಓ ಅಲ್ಲಾಹ್! ನಿನ್ನ ಅದೃಶ್ಯಜ್ಞಾನ ಮತ್ತು ಸೃಷ್ಟಿಗಳ ಮೇಲೆ ನಿನಗಿರುವ ಸಾಮರ್ಥ್ಯದ ಆಧಾರದಲ್ಲಿ ಈ ಜೀವನವು ನನಗೆ ಒಳಿತಾಗಿರುವ ತನಕ ನನ್ನನ್ನು ಬದುಕಿಸು. ಮರಣವು ನನಗೆ ಒಳಿತಾಗಿದ್ದರೆ ನನ್ನನ್ನು ಮೃತಪಡಿಸು. ಓ ಅಲ್ಲಾಹ್! ದೃಶ್ಯ ಸ್ಥಿತಿಯಲ್ಲೂ ಅದೃಶ್ಯ ಸ್ಥಿತಿಯಲ್ಲೂ ನಿನ್ನನ್ನು ಭಯಪಟ್ಟು ಜೀವಿಸುವಂತೆ ನನ್ನನ್ನು ಮಾಡಬೇಕೆಂದು ನಾನು ನಿನ್ನಲ್ಲಿ ಬೇಡುತ್ತೇನೆ. ಸಂತೋಷದಲ್ಲಿರುವಾಗಲೂ, ಕೋಪದಲ್ಲಿರುವಾಗಲೂ ನಿಷ್ಕಳಂಕ ಮಾತನ್ನೇ ನುಡಿಯುವಂತೆ ಮಾಡಬೇಕೆಂದು ನಾನು ನಿನ್ನಲ್ಲಿ ಬೇಡುತ್ತೇನೆ. ಎಂದೂ ಮುಗಿಯದ ವರಗಳನ್ನು ಮತ್ತು ಎಂದೂ ಮುರಿಯದ ಕಣ್ತಂಪನ್ನು ನಾನು ನಿನ್ನಲ್ಲಿ ಬೇಡುತ್ತೇನೆ. ನಿನ್ನ ವಿಧಿಗೆ ತೃಪ್ತಿ ಸೂಚಿಸುವಂತೆ

ಮಾಡಬೇಕೆಂದು ನಾನು ನಿನ್ನಲ್ಲಿ ಬೇಡುತ್ತೇನೆ. ಮರಣಾನಂತರ ಸುಖವಾದ ಜೀವನವನ್ನು ಕರುಣಿಸುವಂತೆ ನಾನು ನಿನ್ನಲ್ಲಿ ಬೇಡುತ್ತೇನೆ. ನಿನ್ನ ಮುಖದೆಡೆಗೆ ನೋಡುವ ಮಧುರ ನೋಟವನ್ನು, ಹಾನಿಕರವಾದ ದುರಂತವೋ, ಪಥಭ್ರಷ್ಟಗೊಳಿಸುವ ಪರೀಕ್ಷೆಯೋ ಇಲ್ಲದೆ ನಿನ್ನನ್ನು ಭೇಟಿ ಮಾಡುವ ಆಸೆಯನ್ನು ನಾನು ನಿನ್ನಲ್ಲಿ ಬೇಡುತ್ತೇನೆ. ಓ ಅಲ್ಲಾಹ್! ಈಮಾನಿನ ಸೌಂದರ್ಯದಿಂದ ನಮ್ಮನ್ನು ಅಲಂಕರಿಸು. ಮಾರ್ಗದರ್ಶನ ನೀಡುವ ಮತ್ತು ಮಾರ್ಗದರ್ಶನ ಪಡೆದವರನ್ನಾಗಿ ನಮ್ಮನ್ನು ಮಾಡು."

19

«اللَّهُمَّ إِنِّي أَسْأَلُكَ الْعَافِيَةَ فِي الدُّنْيَا وَالْآخِرَةِ، اللَّهُمَّ أَسْأَلُكَ الْعَفْوَ وَالْعَافِيَةَ فِي دِينِي وَدُنْيَايَ وَأَهْلِي وَمَالِي، اللَّهُمَّ اسْتُرْ عَوْرَاتِي، وَآمِنْ رَوْعَاتِي، اللَّهُمَّ احْفَظْنِي مِنْ بَيْنِ يَدَيَّ، وَمِنْ خَلْفِي، وَعَنْ يَمِينِي، وَعَنْ شِمَالِي، وَمِنْ فَوْقِي، وَأَعُوذُ بِعَظَمَتِكَ أَنْ أُغْتَالَ مِنْ تَحْتِي»

ಅಲ್ಲಾಹುಮ್ಮ ಇನ್ನೀ ಅಸ್‌ಅಲುಕಲ್ ಆಫಿಯತ ಫಿದ್ದುನ್ಯಾ ವಲ್ ಆಖಿರತಿ, ಅಲ್ಲಾಹುಮ್ಮ ಅಸ್‌ಅಲುಕಲ್ ಅಫ್ವ ವಲ್ ಆಫಿಯತ ಫೀ ದೀನೀ ವದುನ್ಯಾಯ ವಅಹ್ಲೀ ವಮಾಲೀ, ಅಲ್ಲಾಹುಮ್ಮಸ್ತುರ್ ಔರಾತೀ ವಆಮಿನ್

ರೌಆತೀ, ಅಲ್ಲಾಹುಮ್ಮಹ್ಫಝ್‌ನೀ ಮಿನ್ ಬೈನಿ ಯದಯ್ಯ ವಮಿನ್ ಖಲ್ಫೀ ವಅನ್ ಯಮೀನೀ ವಅನ್ ಶಿಮಾಲೀ ವಮಿನ್ ಫೌಕೀ, ವಅಊದು ಬಿಅಝುಮತಿಕ ಅನ್ ಉಗ್ತಾಲ ಮಿನ್ ತಹ್ತೀ

"ಓ ಅಲ್ಲಾಹ್! ಇಹಲೋಕದಲ್ಲೂ, ಪರಲೋಕದಲ್ಲೂ ನಾನು ಕ್ಷಮೆ ಮತ್ತು ಸೌಖ್ಯವನ್ನು ಬೇಡುತ್ತೇನೆ. ಓ ಅಲ್ಲಾಹ್! ನನ್ನ ಧರ್ಮದಲ್ಲಿ, ಇಹಲೋಕದಲ್ಲಿ, ಕುಟುಂಬದಲ್ಲಿ ಮತ್ತು ಸಂಪತ್ತಿನಲ್ಲಿ ಕ್ಷಮೆ ಮತ್ತು ಸೌಖ್ಯವನ್ನು ಬೇಡುತ್ತೇನೆ. ಓ ಅಲ್ಲಾಹ್! ನನ್ನ ನ್ಯೂನತೆಗಳನ್ನು ಮರೆಮಾಚು. ನನ್ನ ಭಯವನ್ನು ನಿವಾರಿಸು. ಓ ಅಲ್ಲಾಹ್! ನನ್ನ ಮುಂಭಾಗದಿಂದ, ನನ್ನ ಹಿಂಭಾಗದಿಂದ, ನನ್ನ ಬಲಭಾಗದಿಂದ, ನನ್ನ ಎಡಭಾಗದಿಂದ, ನನ್ನ ಮೇಲ್ಭಾಗದಿಂದ ನನ್ನನ್ನು ರಕ್ಷಿಸು. ಭೂಮಿ ನನ್ನನ್ನು ನುಂಗಿ ಬಿಡುವುದರಿಂದ ನಾನು ನಿನ್ನ ಮಹಾತ್ಮೆಯ ಮೂಲಕ ನಿನ್ನಲ್ಲಿ ರಕ್ಷೆ ಬೇಡುತ್ತೇನೆ."

صحيح الدعاء والثناء على الله تعالى

# ಪ್ರವಾದಿ(ಸ) ರವರ ಅಭಯಯಾಚನೆಗಳು



ಮುಂದಿನ

ಮೊದಲ ಪುಟಕ್ಕೆ

1

«اللَّهُمَّ إِنِّي أَعُوذُ بِكَ مِنْ شَرِّ مَا عَمِلْتُ وَشَرِّ مَا لَمْ أَعْمَلْ»

ಅಲ್ಲಾಹುಮ್ಮ ಇನ್ನೀ ಅಊದು ಬಿಕ ಮಿನ್ ಶರ್‍ರಿ ಮಾ ಅಮಿಲ್ತು ವಮಿನ್ ಶರ್‍ರಿ ಮಾ ಲಮ್ ಅಅಮಲ್

"ಓ ಅಲ್ಲಾಹ್! ನಾನು ಮಾಡಿದ ಕರ್ಮದ ಕೆಡುಕಿನಿಂದ ಮತ್ತು ನಾನು ಮಾಡದ ಕರ್ಮದ ಕೆಡುಕಿನಿಂದ ನಾನು ನಿನ್ನೊಂದಿಗೆ ಅಭಯ ಯಾಚಿಸುತ್ತಿದ್ದೇನೆ."

ಇದು ಪ್ರವಾದಿ(ಸ) ರವರು ಅತಿಹೆಚ್ಚಾಗಿ ಪ್ರಾರ್ಥಿಸುತ್ತಿದ್ದ ಪ್ರಾರ್ಥನೆ

2

«اللَّهُمَّ إِنِّي أَعُوذُ بِكَ أَنْ أُشْرِكَ بِكَ وَأَنَا أَعْلَمُ، وَأَسْتَغْفِرُكَ لِمَا لَا أَعْلَمُ»

ಅಲ್ಲಾಹುಮ್ಮ ಇನ್ನೀ ಅಊದು ಬಿಕ ಅನ್ ಉಶ್ರಿಕ ಬಿಕ ವಅನ ಅಅ್‌ಲಮು ವಅಸ್ತಗ್ಫಿರುಕ ಲಿಮಾ ಲಾ ಅಅ್‌ಲಮ್

“ಓ ಅಲ್ಲಾಹ್! ನಾನು ಅರಿತವನಾಗಿದ್ದು ನಿನ್ನಲ್ಲಿ ಶಿರ್ಕ್ ಮಾಡುವುದರ ಬಗ್ಗೆ ನಾನು ನಿನ್ನಲ್ಲಿ ರಕ್ಷೆ ಬೇಡುತ್ತೇನೆ. ನನಗೆ ಅರಿವಿಲ್ಲದೆ ಮಾಡುವುದರ ಬಗ್ಗೆ ನಾನು ನಿನ್ನಲ್ಲಿ ಕ್ಷಮೆಯಾಚಿಸುತ್ತೇನೆ.”

ಇದು ತೋರಿಕೆಯನ್ನು ನಿವಾರಿಸುವ ಪ್ರಾರ್ಥನೆ

3

«اللَّهُمَّ إِنِّي أَعُوذُ بِكَ مِنْ زَوَالِ نِعْمَتِكَ، وَتَحَوُّلِ عَافِيَتِكَ، وَفُجَاءَةِ نِقْمَتِكَ، وَجَمِيعِ سَخَطِكَ»

ಅಲ್ಲಾಹುಮ್ಮ ಇನ್ನೀ ಅಊದು ಬಿಕ ಮಿನ್ ಝವಾಲಿ ನಿಅಮತಿಕ ವತಹವ್ವುಲಿ ಆಫಿಯತಿಕ ವಫುಜಾಅತಿ ನಿಕ್ಮತಿಕ ವಜಮೀಇ ಸಖತಿಕ್

“ಓ ಅಲ್ಲಾಹ್! (ನನ್ನ ಮೇಲಿರುವ) ನಿನ್ನ ಅನುಗ್ರಹಗಳ ನಿವಾರಣೆಯಿಂದ, ನಿನ್ನ ಸಂರಕ್ಷಣೆಯ ಬದಲಾವಣೆಯಿಂದ, ನಿನ್ನ ಹಠಾತ್ ಶಿಕ್ಷೆಯಿಂದ ಮತ್ತು ನಿನ್ನ ಸರ್ವ ಕ್ರೋಧಗಳಿಂದ ನಾನು ನಿನ್ನೊಂದಿಗೆ ಅಭಯ ಬೇಡುತ್ತಿದ್ದೇನೆ.”

4

«اللَّهُمَّ إِنِّي أَعُوذُ بِكَ مِنْ مُنْكَرَاتِ الأَخْلاَقِ، وَالأَعْمَالِ، وَالأَهْوَاءِ، وَالْأَدْوَاءِ»

ಅಲ್ಲಾಹುಮ್ಮ ಇನ್ನೀ ಅಊದು ಬಿಕ ಮಿನ್ ಮುನ್ಕರಾತಿಲ್ ಅಖ್ಲಾಕಿ ವಲ್ ಅಅ್ಮಾಲಿ ವಲ್ ಅಹ್ವಾಇ ವಲ್ ಅದ್ವಾಅ್

"ಓ ಅಲ್ಲಾಹ್! ನಾನು ನಿನ್ನಲ್ಲಿ ಕೆಟ್ಟ ಗುಣಗಳು, ಕರ್ಮಗಳು, ಇಚ್ಛೆಗಳು ಮತ್ತು ರೋಗಗಳಿಂದ ರಕ್ಷೆ ಬೇಡುತ್ತೇನೆ."

5

«اللَّهمَّ إنِّي أَعُوْذُ بِكَ مِنْ جَهْدِ البَلاَءِ، وَدَرَكِ الشَّقَاءِ، وَسُوءِ القَضَاءِ، وَشَمَاتَةِ الأَعْدَاءِ»

ಅಲ್ಲಾಹುಮ್ಮ ಇನ್ನೀ ಅಊದು ಬಿಕ ಮಿನ್ ಜಹ್ದಿಲ್ ಬಲಾಇ ವದರಕಿ ಶ್ಯಕಾಇ ವಸೂಇಲ್ ಕದಾಇ ವಶಮಾತತಿಲ್ ಅಅ್‌ದಾಅ್

“ಓ ಅಲ್ಲಾಹ್! ವಿಪತ್ತುಗಳ ಪ್ರಯಾಸ, ಹತಭಾಗ್ಯತನ, ದುರ್ವಿಧಿ ಮತ್ತು ಶತ್ರುಗಳ ಅವಹೇಳನಗಳಿಂದ ಅಭಯ ಯಾಚಿಸುತ್ತಿದ್ದೇನೆ.”

## 6

«اللَّهُمَّ إِنِّي أَعُوذُ بِكَ مِنَ الْعَجْزِ، وَالْكَسَلِ، وَالْجُبْنِ، وَالْبُخْلِ، وَالْهَرَمِ، وَعَذَابِ الْقَبْرِ اللَّهُمَّ آتِ نَفْسِي تَقْوَاهَا، وَزَكِّهَا أَنْتَ خَيْرُ مَنْ زَكَّاهَا، أَنْتَ وَلِيُّهَا وَمَوْلَاهَا، اللَّهُمَّ إِنِّي أَعُوذُ بِكَ مِنْ عِلْمٍ لَا يَنْفَعُ، وَمِنْ قَلْبٍ لَا يَخْشَعُ، وَمِنْ نَفْسٍ لَا تَشْبَعُ، وَمِنْ دَعْوَةٍ لَا يُسْتَجَابُ لَهَا»

ಅಲ್ಲಾಹುಮ್ಮ ಇನ್ನೀ ಅಊದು ಬಿಕ ಮಿನಲ್ ಅಜ್ಝಿ ವಲ್ ಕಸಲಿ ವಲ್ ಜುಬ್ನಿ ವಲ್ ಬುಖ್ಲಿ ವಲ್ ಹರಮಿ ವಅದಾಬಿಲ್ ಕಬ್ರ್, ಅಲ್ಲಾಹುಮ್ಮ ಆತಿ ನಫ್ಸೀ ತಕ್ವಾಹಾ ವಝುಕ್ಕಿಹಾ ಅನ್ತ ಖೈರು ಮನ್ ಝುಕ್ಕಾಹಾ

ಅನ್ತ ವಲಿಯ್ಯುಹಾ ವಮೌಲಾಹಾ, ಅಲ್ಲಾಹುಮ್ಮ ಇನ್ನೀ ಅಊದು ಬಿಕ ಮಿನ್ ಇಲ್ಮಿನ್ ಲಾ ಯನ್ಫಉ ವಮಿನ್ ಕಲ್ಬಿನ್ ಲಾ ಯಖ್‌ಶಉ ವಮಿನ್ ನಫ್ಸಿನ್ ಲಾ ತಶ್ಬಉ ವಮಿನ್ ದಅವತಿನ್ ಲಾ ಯುಸ್ತಜಾಬು ಲಹಾ

“ಓ ಅಲ್ಲಾಹ್! ದೌರ್ಬಲ್ಯ, ಸೋಮಾರಿತನ, ಹೇಡಿತನ, ಜಿಪುಣತೆ, ವೃದ್ಧಾಪ್ಯ ಮತ್ತು ಗೋರಿ ಶಿಕ್ಷೆಯಿಂದ ನಿನ್ನೊಂದಿಗೆ ಅಭಯ ಬೇಡುತ್ತಿದ್ದೇನೆ. ಓ ಅಲ್ಲಾಹ್! ನನ್ನ ದೇಹಕ್ಕೆ ಭಯಭಕ್ತಿಯನ್ನು ನೀಡು, ಅದನ್ನು ಶುದ್ಧೀಕರಿಸು, ಅದನ್ನು ಶುದ್ಧೀಕರಿಸಲು ನೀನೇ ಉತ್ತಮನಾಗಿರುವೆ. ನೀನು ಅದರ ಒಡೆಯನೂ, ರಕ್ಷಕನೂ ಆಗಿರುವೆ. ಓ ಅಲ್ಲಾಹ್! ಉಪಯೋಗವಿಲ್ಲದ ವಿದ್ಯೆ, ಭಕ್ತಿಯಿಲ್ಲದ ಹೃದಯ, ಸಂತೃಪ್ತವಾಗದ ಆತ್ಮ ಮತ್ತು ಉತ್ತರಿಸಲ್ಪಡದ ಪ್ರಾರ್ಥನೆಯಿಂದ ನಿನ್ನೊಂದಿಗೆ ಅಭಯ ಬೇಡುತ್ತಿದ್ದೇನೆ.”

## 7

«اللَّهُمَّ إِنِّي أَعُوذُ بِكَ مِنَ الهَمِّ وَالحَزَنِ، وَالعَجْزِ وَالكَسَلِ، وَالبُخْلِ وَالجُبْنِ، وَضَلَعِ الدَّيْنِ، وَغَلَبَةِ الرِّجَالِ»

ಅಲ್ಲಾಹುಮ್ಮ ಇನ್ನೀ ಅಊದು ಬಿಕ ಮಿನಲ್ ಹಮ್ಮಿ ವಲ್ ಹಝ್ನಿ, ವಲ್ ಅಜ್‌ಝಿ ವಲ್ ಕಸಲಿ, ವಲ್ ಬುಖ್ಲಿ ವಲ್ ಜುಬ್ನಿ, ವದಲಇ ದ್ದೈನಿ ವಗಲಬತಿ ರ್‍ರಿಜಾಲ್

“ಓ ಅಲ್ಲಾಹ್! ದುಃಖ ಮತ್ತು ವ್ಯಥೆಯುಂಟಾಗುವುದರಿಂದ, ಅಸಹಾಯಕತೆ ಮತ್ತು ಸೋಮಾರಿತನವುಂಟಾಗುವುದರಿಂದ, ಜಿಪುಣತನ ಮತ್ತು ಹೇಡಿತನವುಂಟಾಗುವುದರಿಂದ, ಸಾಲಭಾರ ಮತ್ತು ಜನರ ದಬ್ಬಾಳಿಕೆಯುಂಟಾಗುವುದರಿಂದ ನಾನು ನಿನ್ನಲ್ಲಿ ರಕ್ಷೆ ಬೇಡುತ್ತೇನೆ.”

**8**

«اللَّهُمَّ إِنِّي أَعُوذُ بِكَ مِنْ شَرِّ سَمْعِي، وَمِنْ شَرِّ بَصَرِي، وَمِنْ شَرِّ لِسَانِي، وَمِنْ شَرِّ قَلْبِي، وَمِنْ شَرِّ مَنِيِّي»

ಅಲ್ಲಾಹುಮ್ಮ ಇನ್ನೀ ಅಊದು ಬಿಕ ಮಿನ್ ಶರ್ರಿ ಸಮ್‌ಈ, ವಮಿನ್ ಶರ್ರಿ ಬಸರೀ, ವಮಿನ್ ಶರ್ರಿ ಲಿಸಾನೀ, ವಮಿನ್ ಶರ್ರಿ ಕಲ್ಬೀ, ವಮಿನ್ ಶರ್ರಿ ಮನಿಯ್ಯೀ

"ಓ ಅಲ್ಲಾಹ್! ನಾನು ನಿನ್ನಲ್ಲಿ ನನ್ನ ಶ್ರವಣದ ಕೆಡುಕಿನಿಂದ, ನನ್ನ ದೃಷ್ಟಿಯ ಕೆಡುಕಿನಿಂದ, ನನ್ನ ನಾಲಗೆಯ ಕೆಡುಕಿನಿಂದ, ನನ್ನ ಹೃದಯದ ಕೆಡುಕಿನಿಂದ ಮತ್ತು ನನ್ನ ಇಚ್ಛೆಗಳ ಕೆಡುಕಿನಿಂದ ರಕ್ಷೆ ಬೇಡುತ್ತೇನೆ."

9

«اللَّهُمَّ إِنِّي أَعُوذُ بِكَ مِنْ فِتْنَةِ النَّارِ وَمِنْ عَذَابِ النَّارِ، وَأَعُوذُ بِكَ مِنْ فِتْنَةِ الْقَبْرِ، وَأَعُوذُ بِكَ مِنْ عَذَابِ الْقَبْرِ، وَأَعُوذُ بِكَ مِنْ فِتْنَةِ الغِنَى، وَأَعُوذُ بِكَ مِنْ فِتْنَةِ الفَقْرِ، وَأَعُوذُ بِكَ مِنْ فِتْنَةِ المَسِيحِ الدَّجَّالِ»

ಅಲ್ಲಾಹುಮ್ಮ ಇನ್ನೀ ಅಊದು ಬಿಕ ಮಿನ್ ಫಿತ್ನತಿ ನ್ನಾರಿ ವಮಿನ್ ಅದಾಬಿನ್ನಾರಿ, ವಅಊದು ಬಿಕ ಮಿನ್ ಫಿತ್ನತಿಲ್ ಕಬ್ರಿ, ವಅಊದು ಬಿಕ ಮಿನ್ ಅದಾಬಿಲ್ ಕಬ್ರಿ, ವಅಊದು ಬಿಕ ಮಿನ್ ಫಿತ್ನತಿಲ್ ಗಿನಾ, ವಅಊದು ಬಿಕ ಮಿನ್ ಫಿತ್ನತಿಲ್ ಫಕ್ರ್, ವಅಊದು ಬಿಕ ಮಿನ್ ಫಿತ್ನತಿಲ್ ಮಸೀಹಿ ದ್ದಜ್ಜಾಲ್.

"ಓ ಅಲ್ಲಾಹ್! ನಾನು ನಿನ್ನಲ್ಲಿ ನರಕದ ಪರೀಕ್ಷೆಯಿಂದ ಮತ್ತು ನರಕದ ಶಿಕ್ಷೆಯಿಂದ ರಕ್ಷೆ ಬೇಡುತ್ತೇನೆ. ನಾನು ನಿನ್ನಲ್ಲಿ ಗೋರಿಯ ಪರೀಕ್ಷೆಯಿಂದ ಮತ್ತು ಗೋರಿಯ ಶಿಕ್ಷೆಯಿಂದ ರಕ್ಷೆ ಬೇಡುತ್ತೇನೆ.ನಾನು ನಿನ್ನಲ್ಲಿ ಶ್ರೀಮಂತಿಕೆಯ ಪರೀಕ್ಷೆಯಿಂದ ರಕ್ಷೆ ಬೇಡುತ್ತೇನೆ. ನಾನು ನಿನ್ನಲ್ಲಿ ಬಡತನದ ಪರೀಕ್ಷೆಯಿಂದ ರಕ್ಷೆ ಬೇಡುತ್ತೇನೆ. ನಾನು ನಿನ್ನಲ್ಲಿ ಮಸೀಹು ದ್ದಜ್ಜಾಲ್‌ನ ಪರೀಕ್ಷೆಯಿಂದ ರಕ್ಷೆ ಬೇಡುತ್ತೇನೆ."

## 10

«اللَّهُمَّ إِنِّي أَعُوذُ بِعِزَّتِكَ، لَا إِلَهَ إِلَّا أَنْتَ، أَنْ تُضِلَّنِي، أَنْتَ الْحَيُّ الَّذِي لَا يَمُوتُ، وَالْجِنُّ وَالْإِنْسُ يَمُوتُونَ»

ಅಲ್ಲಾಹುಮ್ಮ ಇನ್ನೀ ಅಊದು ಬಿಇಝ್ಝತಿಕ ಲಾ ಇಲಾಹ ಇಲ್ಲಾ ಅನ್ತ ಅನ್ ತುದಿಲ್ಲನೀ ಅನ್ತಲ್ ಹಯ್ಯುಲ್ಲದೀ ಲಾ ಯಮೂತು ವಲ್ ಜಿನ್ನು ವಲ್ ಇನ್ಸು ಯಮೂತೂನ್

"ಓ ಅಲ್ಲಾಹ್! ನೀನಲ್ಲದೆ ಆರಾಧಿಸಲರ್ಹರಾದವರು ಯಾರೂ ಇಲ್ಲ, ನನ್ನನ್ನು ದಾರಿಗೆಡಿಸಬಾರದೆಂದು ನಿನ್ನ ಪ್ರತಾಪದೊಂದಿಗೆ ನಾನು ಅಭಯ ಬೇಡುತ್ತಿದ್ದೇನೆ. ನೀನು ಎಂದೆಂದಿಗೂ ಮೃತಪಡದ ಅನಶ್ವರನಾಗಿರುವೆ.

ಜಿನ್ನ್ ಮತ್ತು ಮನುಷ್ಯರು ಮೃತಪಡುವವರಾಗಿದ್ದಾರೆ."

11

«اللَّهُمَّ إِنِّي أَعُوذُ بِكَ مِنَ البَرَصِ، وَالْجُنُونِ، وَالْجُذَامِ، وَمِنْ سَيِّئِ الْأَسْقَامِ»

ಅಲ್ಲಾಹುಮ್ಮ ಇನ್ನೀ ಅಊದು ಬಿಕ ಮಿನಲ್ ಬರಸ್, ವಲ್ ಜುನೂನ್, ವಲ್ ಜುದಾಮ್ ವಮಿನ್ ಸಯ್ಯಿಇಲ್ ಅಸ್ಕಾಮ್

"ಓ ಅಲ್ಲಾಹ್! ನಾನು ನಿನ್ನಲ್ಲಿ ಕುಷ್ಠರೋಗ, ಮತಿಭ್ರಾಂತಿ, ಅಂಟುರೋಗ ಮತ್ತು ಕೆಟ್ಟ ರೋಗಗಳಿಂದ ರಕ್ಷೆ ಬೇಡುತ್ತೇನೆ.

12

«اللَّهُمَّ إِنِّي أَعُوذُ بِكَ مِنْ يَوْمِ السَّوْءِ، وَمِنْ لَيْلَةِ السَّوْءِ، وَمِنْ سَاعَةِ السَّوْءِ، وَمِنْ صَاحِبِ السَّوْءِ، وَمِنْ جَارِ السَّوْءِ فِي دَارِ الْمُقَامَةِ»

ಅಲ್ಲಾಹುಮ್ಮ ಇನ್ನೀ ಅಊದು ಬಿಕ ಮಿನ್ ಯೌಮಿ ಸ್ಸೌಇ, ವಮಿನ್ ಲೈಲತಿ ಸ್ಸೌಇ, ವಮಿನ್ ಸಾಅತಿ ಸ್ಸೌಇ, ವಮಿನ್ ಸ್ವಾಹಿಬಿ ಸ್ಸೌಇ, ವಮಿನ್ ಜಾರಿ ಸ್ಸೌಇ ಫೀ ದಾರಿಲ್ ಮುಕಾಮ

"ಓ ಅಲ್ಲಾಹ್! ನಾನು ನಿನ್ನಲ್ಲಿ ಕೆಟ್ಟ ದಿನ, ಕೆಟ್ಟ ರಾತ್ರಿ, ಕೆಟ್ಟ ತಾಸು, ಕೆಟ್ಟ ಗೆಳೆಯ ಮತ್ತು ಕೆಟ್ಟ ನೆರೆಯವನಿಂದ ರಕ್ಷೆ ಬೇಡುತ್ತೇನೆ."

13

«أَعُوذُ بِاللهِ مِنَ الْفِتَنِ، مَا ظَهَرَ مِنْهَا وَمَا بَطَنَ»

ಅಊದು ಬಿಲ್ಲಾಹಿ ಮಿನಲ್ ಫಿತನಿ ಮಾ ಝುಹರ ಮಿನ್‌ಹಾ ವಮಾ ಬತನ್

"ಬಹಿರಂಗ ಮತ್ತು ಗೋಪ್ಯವಾಗಿರುವ ಎಲ್ಲಾ ಪರೀಕ್ಷೆಗಳಿಂದ ನಾನು ಅಲ್ಲಾಹನಲ್ಲಿ ರಕ್ಷೆ ಬೇಡುತ್ತೇನೆ."

صحيح الدعاء والثناء على الله تعالى

# ಮಂತ್ರದ ಪ್ರಾರ್ಥನೆಗಳು



ಮುಂದಿನ

ಮೊದಲ ಪುಟಕ್ಕೆ

1

## ಸೂರ ಅಲ್-ಫಾತಿಹ ಏಳು ಸಲ ಪಾರಾಯಣ ಮಾಡಬೇಕು

﴿أَعُوذُ بِاللَّهِ مِنَ الشَّيْطَانِ الرَّجِيمِ، بِسْمِ
ٱللَّهِ ٱلرَّحْمَٰنِ ٱلرَّحِيمِ ۝١ ٱلْحَمْدُ لِلَّهِ رَبِّ
ٱلْعَٰلَمِينَ ۝٢ ٱلرَّحْمَٰنِ ٱلرَّحِيمِ ۝٣ مَٰلِكِ يَوْمِ
ٱلدِّينِ ۝٤ إِيَّاكَ نَعْبُدُ وَإِيَّاكَ نَسْتَعِينُ ۝٥
ٱهْدِنَا ٱلصِّرَٰطَ ٱلْمُسْتَقِيمَ ۝٦ صِرَٰطَ ٱلَّذِينَ
أَنْعَمْتَ عَلَيْهِمْ غَيْرِ ٱلْمَغْضُوبِ عَلَيْهِمْ
وَلَا ٱلضَّآلِّينَ ۝٧﴾ [الفاتحة:١-٧]

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹುವಿನ ನಾಮದಿಂದ. ಸರ್ವಲೋಕಗಳ ಪರಿಪಾಲಕನಾಗಿರುವ ಅಲ್ಲಾಹುವಿಗೆ ಸ್ತುತಿ. ಪರಮ ದಯಾಮಯನೂ, ಕರುಣಾನಿಧಿಯೂ, ಪ್ರತಿಫಲ ದಿನದ ಒಡೆಯನೂ ಆಗಿರುವ (ಅಲ್ಲಾಹುವಿಗೆ). ನಾವು ನಿನ್ನನ್ನು ಮಾತ್ರ ಆರಾಧಿಸುವೆವು. ನಾವು ನಿನ್ನೊಂದಿಗೆ ಮಾತ್ರ ಸಹಾಯವನ್ನು ಬೇಡುವೆವು. ನಮ್ಮನ್ನು ನೇರವಾದ ಮಾರ್ಗದಲ್ಲಿ ಮುನ್ನಡೆಸು. ನೀನು ಅನುಗ್ರಹಿಸಿದವರ ಮಾರ್ಗದಲ್ಲಿ; ಕ್ರೋಧಕ್ಕೆ ಪಾತ್ರರಾದವರ ಮಾರ್ಗದಲ್ಲಲ್ಲ. ಪಥಭ್ರಷ್ಟರಾದವರ ಮಾರ್ಗದಲ್ಲೂ ಅಲ್ಲ.

2

ಆಯತುಲ್ ಕುರ್ಸೀ ಒಂದು ಸಲ ಪಾರಾಯಣ ಮಾಡಬೇಕು.

﴿ٱللَّهُ لَآ إِلَٰهَ إِلَّا هُوَ ٱلۡحَيُّ ٱلۡقَيُّومُۚ لَا تَأۡخُذُهُۥ
سِنَةٞ وَلَا نَوۡمٞۚ لَّهُۥ مَا فِي ٱلسَّمَٰوَٰتِ وَمَا فِي
ٱلۡأَرۡضِۗ مَن ذَا ٱلَّذِي يَشۡفَعُ عِندَهُۥٓ إِلَّا
بِإِذۡنِهِۦۚ يَعۡلَمُ مَا بَيۡنَ أَيۡدِيهِمۡ وَمَا خَلۡفَهُمۡۖ
وَلَا يُحِيطُونَ بِشَيۡءٖ مِّنۡ عِلۡمِهِۦٓ إِلَّا بِمَا
شَآءَۚ وَسِعَ كُرۡسِيُّهُ ٱلسَّمَٰوَٰتِ وَٱلۡأَرۡضَۖ وَلَا
يَـُٔودُهُۥ حِفۡظُهُمَاۚ وَهُوَ ٱلۡعَلِيُّ ٱلۡعَظِيمُ ٢٥٥﴾

[البقرة:٢٥٥]

ಅಲ್ಲಾಹು. ಅವನ ಹೊರತು ಅನ್ಯ ಸತ್ಯ ಆರಾಧ್ಯರಿಲ್ಲ. ಅವನು ನಿರಂತರ ಜೀವಿಸುವವನು. ಸ್ವಯಂ ಅಸ್ತಿತ್ವದಲ್ಲಿರುವವನು ಮತ್ತು ಇತರೆಲ್ಲವನ್ನೂ ಸಂರಕ್ಷಿಸಿ ನಿಯಂತ್ರಿಸುವವನು. ತೂಕಡಿಕೆಯೋ ನಿದ್ದೆಯೋ ಅವನನ್ನು ಹಿಡಿದುಕೊಳ್ಳುವುದಿಲ್ಲ. ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿರುವುದೆಲ್ಲವೂ ಅವನದ್ದು. ಅವನ ಅಪ್ಪಣೆಯಿಲ್ಲದೆ ಅವನ ಬಳಿ ಶಿಫಾರಸು ಮಾಡುವವರು ಯಾರು? ಅವರಿಗೆ ಈಗಾಗಲೇ ಸಂಭವಿಸಿರುವುದನ್ನು ಮತ್ತು ಮುಂದೆ ಸಂಭವಿಸಲಿರುವುದನ್ನು ಅವನು ಅರಿಯುತ್ತಾನೆ. ಅವನು ಇಚ್ಛಿಸಿದ್ದನ್ನು ಹೊರತು ಅವನ ಜ್ಞಾನದಿಂದ ಏನನ್ನೂ ಸೂಕ್ಷ್ಮವಾಗಿ ಅರಿಯಲು ಅವರಿಗೆ ಸಾಧ್ಯವಿಲ್ಲ. ಅವನ ಕುರ್ಸೀ ಭೂಮ್ಯಾಕಾಶಗಳನ್ನು ಆವರಿಸಿಕೊಂಡಿದೆ. ಅವುಗಳನ್ನು ಸಂರಕ್ಷಿಸುವುದು ಅವನಿಗೆ ಭಾರವಿರುವ ಸಂಗತಿಯೇ ಅಲ್ಲ. ಅವನು ಅತ್ಯುನ್ನತನೂ ಮಹಾನನೂ ಆಗಿದ್ದಾನೆ.

3

ಸೂರ ಅಲ್-ಇಖ್ಲಾಸ್ ಮತ್ತು ಮುಅವ್ವಿದತೈನ್ ಪಾರಾಯಣ ಮಾಡಿ ಎರಡು ಕೈಗಳಿಗೆ ಊದಿ ದೇಹದ ನೋವಿರುವ ಭಾಗಕ್ಕೆ 3 ಸಲ ಸವರ ಬೇಕು.

﴿قُلۡ هُوَ ٱللَّهُ أَحَدٌ ١ ٱللَّهُ ٱلصَّمَدُ ٢ لَمۡ يَلِدۡ وَلَمۡ يُولَدۡ ٣ وَلَمۡ يَكُن لَّهُۥ كُفُوًا أَحَدُۢ ٤﴾ [سورة الإخلاص]

ಹೇಳಿರಿ: ಅವನು ಅಲ್ಲಾಹು ಏಕೈಕನು. ಅವನು ನಿರಪೇಕ್ಷನು. ಸರ್ವವೂ ಅವನನ್ನೇ ಆಶ್ರಯಿಸಿಕೊಂಡಿವೆ. ಅವನಿಗೆ ಯಾವುದೇ ಸಂತತಿಯಿಲ್ಲ. ಅವನು ಯಾರದೇ ಸಂತತಿಯೂ ಅಲ್ಲ. ಅವನಿಗೆ ಸರಿಸಮಾನರಾಗಿ ಯಾರೂ ಇಲ್ಲ.

﴿قُلۡ أَعُوذُ بِرَبِّ ٱلۡفَلَقِ ١ مِن شَرِّ مَا خَلَقَ ٢ وَمِن شَرِّ غَاسِقٍ إِذَا وَقَبَ ٣ وَمِن شَرِّ ٱلنَّفَّٰثَٰتِ فِي ٱلۡعُقَدِ ٤ وَمِن شَرِّ حَاسِدٍ إِذَا حَسَدَ ٥﴾ [سورة الفلق]

ಹೇಳಿರಿ: ಪ್ರಭಾತದ ರಬ್ಬಿನಲ್ಲಿ ನಾನು ರಕ್ಷೆ ಬೇಡುತ್ತೇನೆ. ಅವನು ಸೃಷ್ಟಿಸಿದವುಗಳ ಕೆಡುಕಿನಿಂದ. ಇರುಳು ಕವಿಯುವಾಗ ರಾತ್ರಿಯ ಕೆಡುಕಿನಿಂದ. ಗಂಟುಗಳಿಗೆ ಊದುವ ಮಾಟಗಾತಿ ಸ್ತ್ರೀಯರ ಕೆಡುಕಿನಿಂದ. ಅಸೂಯೆಗಾರನು ಅಸೂಯೆಪಡುವಾಗ ಅವನ ಕೆಡುಕಿನಿಂದ.

﴿قُلۡ أَعُوذُ بِرَبِّ ٱلنَّاسِ ١ مَلِكِ ٱلنَّاسِ ٢
إِلَٰهِ ٱلنَّاسِ ٣ مِن شَرِّ ٱلۡوَسۡوَاسِ ٱلۡخَنَّاسِ ٤
ٱلَّذِي يُوَسۡوِسُ فِي صُدُورِ ٱلنَّاسِ ٥ مِنَ
ٱلۡجِنَّةِ وَٱلنَّاسِ ٦﴾ [سورة الناس]

ಹೇಳಿರಿ: ಮನುಷ್ಯರ ರಬ್ಬಿನಲ್ಲಿ ಮನುಷ್ಯರ ಅಧಿಪತಿಯಲ್ಲಿ, ಮನುಷ್ಯರ ಆರಾಧ್ಯನಲ್ಲಿ, ಮನುಷ್ಯರ ಹೃದಯದಲ್ಲಿ ದುರ್ಬೋಧನೆ ಮಾಡುವ ಜಿನ್ನ್‌ಗಳಲ್ಲಿ ಮತ್ತು ಮನುಷ್ಯರಲ್ಲಿ ಒಳಪಟ್ಟ ಹಿಂದಕ್ಕೆ ಸರಿಯುವ ದುರ್ಬೋಧಕರ ಕೆಡುಕಿನಿಂದ ನಾನು ರಕ್ಷೆ ಬೇಡುತ್ತೇನೆ.

4

«اللَّهُمَّ رَبَّ النَّاسِ أَذْهِبِ البَاسَ، اشْفِ أَنْتَ الشَّافِي، لاَ شِفَاءَ إِلَّا شِفَاؤُكَ، شِفَاءً لاَ يُغَادِرُ سَقَمًا»

ಅಲ್ಲಾಹುಮ್ಮ ರಬ್ಬನ್ನಾಸಿ, ಅದ್‌ಹಿಬಿಲ್ ಬಅ್‌ಸ, ಇಶ್ಫಿ ಅನ್ತ ಶ್ಶಾಫಿ, ಲಾ ಶಿಫಾಅ ಇಲ್ಲಾ ಶಿಫಾಉಕ, ಶಿಫಾಅನ್ ಲಾ ಯುಗಾದಿರು ಸಕಮ

ಓ ಅಲ್ಲಾಹ್! ಜನರ ರಬ್ಬೇ, ತೊಂದರೆಯನ್ನು ನಿವಾರಿಸು. ಗುಣಪಡಿಸು. ನೀನು ಗುಣಪಡಿಸುವವನು. ನಿನ್ನ ಉಪಶಮನವಲ್ಲದೆ ಬೇರೆ ಉಪಶಮನವಿಲ್ಲ. ನಿನ್ನ ಉಪಶಮನವು ಯಾವುದೇ ಕಾಯಿಲೆಯನ್ನು ಬಿಟ್ಟುಬಿಡುವುದಿಲ್ಲ.

ನೋವಿರುವ ಸ್ಥಳದ ಮೇಲೆ ಅಥವಾ ರೋಗಿಯ ಮೇಲೆ ಬಲಗೈಯಿಂದ ಸವರುತ್ತಾ ಈ ಪ್ರಾರ್ಥನೆ ಹೇಳಬೇಕು.

5

«بِسْمِ اللهِ، تُرْبَةُ أَرْضِنَا، بِرِيقَةِ بَعْضِنَا، يُشْفَى سَقِيمُنَا، بِإِذْنِ رَبِّنَا»

ಬಿಸ್ಮಿಲ್ಲಾಹಿ ತುರ್ಬತು ಅರ್ದಿನಾ, ಬಿರೀಕಿ ಬಅ್‌ದಿನಾ, ಯುಶ್ಫಾ ಸಕೀಮುನಾ, ಬಿಇದ್‌ನಿ ರಬ್ಬಿನಾ.

ಅಲ್ಲಾಹನ ನಾಮದಲ್ಲಿ, ನಮ್ಮ ಭೂಮಿಯ ಮಣ್ಣು ಕೆಲವರ ಜೊಲ್ಲಿನೊಂದಿಗೆ ಸೇರಿ ಅಲ್ಲಾಹನ ಅಪ್ಪಣೆಯೊಂದಿಗೆ ನಮ್ಮ ರೋಗಿಗಳನ್ನು ಗುಣಪಡಿಸುತ್ತದೆ.

ಬೆರಳಿನಿಂದ ಸ್ವಲ್ಪ ಜೊಲ್ಲು ತೆಗೆದು ಅದನ್ನು ಮಣ್ಣಿಗೆ ಸವರಿ ನಂತರ ಅದರಿಂದ ನೋವಿರುವ ಸ್ಥಳವನ್ನು ಅಥವಾ ಗಾಯವನ್ನು ಸವರುತ್ತಾ ಈ ಪ್ರಾರ್ಥನೆ ಹೇಳಬೇಕು.

6

«بِاسْمِ اللهِ» «أَعُوذُ بِاللهِ وَقُدْرَتِهِ مِنْ شَرِّ مَا أَجِدُ وَأُحَاذِرُ»

ಅಊದು ಬಿಲ್ಲಾಹಿ ವಕುದ್ರತಿಹೀ ಮಿನ್ ಶರ್ರಿ ಮಾ ಅಜಿದು ವಉಹಾದಿರು

ನಾನು ಅನುಭವಿಸುತ್ತಿರುವ ಮತ್ತು ಬಳಲುತ್ತಿರುವ ಈ ಕೆಡುಕಿನಿಂದ ಅಲ್ಲಾಹನಲ್ಲಿ ಮತ್ತು ಅವನ ಸಾಮರ್ಥ್ಯದಲ್ಲಿ ನಾನು ರಕ್ಷೆ ಬೇಡುತ್ತೇನೆ.

ಕೈಯನ್ನು ನೋವಿರುವ ಸ್ಥಳದಲ್ಲಿಟ್ಟು ಮೂರು ಸಲ ಬಿಸ್ಮಿಲ್ಲಾಹ್ ಎಂದು ಹೇಳಿ ನಂತರ ಏಳು ಸಲ ಅಊದು ಬಿಲ್ಲಾಹಿ ವಕುದ್ರತಿಹೀ ಮಿನ್ ಶರ್ರಿ ಮಾ ಅಜಿದು ವಉಹಾದಿರು ಎಂದು ಹೇಳಬೇಕು.

7

«أَعُوذُ بِكَلِمَاتِ اللهِ التَّامَّةِ، مِنْ كُلِّ شَيْطَانٍ وَهَامَّةٍ، وَمِنْ كُلِّ عَيْنٍ لاَمَّةٍ»

ಅಊದು ಬಿಕಲಿಮಾತಿಲ್ಲಾಹಿ ತ್ತಾಮ್ಮಃ, ಮಿನ್ ಕುಲ್ಲಿ ಶೈತಾನಿನ್ ವಹಾಮ್ಮಃ, ವಮಿನ್ ಕುಲ್ಲಿ ಐನಿನ್ ಲಾಮ್ಮಃ

ಅಲ್ಲಾಹನ ಪರಿಪೂರ್ಣ ವಚನಗಳೊಂದಿಗೆ, ಎಲ್ಲ ವಿಧ ಶೈತಾನರಿಂದ ಮತ್ತು ವಿಷಜಂತುಗಳಿಂದ ಮತ್ತು ಎಲ್ಲ ವಿಧ ಆಕ್ಷೇಪಕರ ದೃಷ್ಟಿಗಳಿಂದ ನಾನು ರಕ್ಷೆ ಬೇಡುತ್ತೇನೆ.

8

«أَعُوذُ بِكَلِمَاتِ اللهِ التَّامَّاتِ مِنْ شَرِّ مَا خَلَقَ»

ಅಊದು ಬಿಕಲಿಮಾತಿಲ್ಲಾಹಿ ತ್ತಾಮ್ಮಾತಿ ಮಿನ್ ಶರ್ರಿ ಮಾ ಖಲಕ್

ಅಲ್ಲಾಹನ ಪರಿಪೂರ್ಣ ವಚನಗಳೊಂದಿಗೆ ಅವನು ಸೃಷ್ಟಿಸಿದವುಗಳ ಕೆಡುಕಿನಿಂದ ನಾನು ರಕ್ಷೆ ಬೇಡುತ್ತೇನೆ.

9

«بِسْمِ اللهِ الَّذِي لَا يَضُرُّ مَعَ اسْمِهِ شَيْءٌ، فِي الْأَرْضِ، وَلَا فِي السَّمَاءِ، وَهُوَ السَّمِيعُ الْعَلِيمُ»

ಬಿಸ್ಮಿಲ್ಲಾಹಿಲ್ಲದೀ ಲಾ ಯದುರ್ರು ಮಅಸ್ಮಿಹೀ ಶೈಉನ್ ಫಿಲ್ ಅರ್ದಿ ವಲಾ ಫಿ ಸ್ಸಮಾಇ ವಹುವ ಸ್ಸಮೀಉಲ್ ಅಲೀಮ್

ಯಾರ ಹೆಸರಿನೊಂದಿಗೆ ಭೂಮಿಯಲ್ಲಾಗಲಿ, ಆಕಾಶದಲ್ಲಾಗಲಿ ಯಾವುದೇ ವಸ್ತು ಹಾನಿ ಮಾಡುವುದಿಲ್ಲವೋ ಆ ಅಲ್ಲಾಹನ ಹೆಸರಿನಿಂದ. ಅವನು ಎಲ್ಲವನ್ನು ಕೇಳುವವನೂ ಅರಿಯುವವನೂ ಆಗಿದ್ದಾನೆ.

3 ಸಲ

10

«بِاسْمِ اللهِ أَرْقِيكَ، مِنْ كُلِّ شَيْءٍ يُؤْذِيكَ، مِنْ شَرِّ كُلِّ نَفْسٍ أَوْ عَيْنِ حَاسِدٍ، اللهُ يَشْفِيكَ بِاسْمِ اللهِ أَرْقِيكَ»

ಬಿಸ್ಮಿಲ್ಲಾಹಿ ಅರ್ಕೀಕ, ಮಿನ್ ಕುಲ್ಲಿ ಶೈಇನ್ ಯುಅ್‌ದೀಕ, ಮಿನ್ ಶರ್ರಿ ಕುಲ್ಲಿ ನಫ್ಸಿನ್ ಅವ್ ಐನಿನ್ ಹಾಸಿದಿನ್. ಅಲ್ಲಾಹು ಯಶ್ಫೀಕ, ಬಿಸ್ಮಿಲ್ಲಾಹಿ ಅರ್ಕೀಕ

ಅಲ್ಲಾಹನ ನಾಮದಲ್ಲಿ ನಾನು ಮಂತ್ರಿಸುತ್ತೇನೆ. ನಿನ್ನನ್ನು ಉಪದ್ರವಿಸುವ ಎಲ್ಲಾ ವಸ್ತುಗಳಿಂದ, ಎಲ್ಲಾ ದೇಹಗಳ ಅಥವಾ ಅಸೂಯೆ ತುಂಬಿದ ಕಣ್ಣುಗಳ ಕೆಡುಕಿನಿಂದ, ಅಲ್ಲಾಹು ನಿನ್ನನ್ನು ಗುಣಪಡಿಸಲಿ. ಅಲ್ಲಾಹನ ನಾಮದಲ್ಲಿ ನಾನು ಮಂತ್ರಿಸುತ್ತೇನೆ.

11

«أَسْأَلُ اللهَ الْعَظِيمَ رَبَّ الْعَرْشِ الْعَظِيمِ أَنْ يَشْفِيَكَ»

ಅಸ್‌ಅಲುಲ್ಲಾಹಲ್ ಅಝೀಮ್, ರಬ್ಬಲ್ ಅರ್ಶಿಲ್ ಅಝೀಮ್ ಅನ್ ಯಶ್ಫಿಯಕ್

ಮಹಾನನಾದ ಅಲ್ಲಾಹನಲ್ಲಿ, ಮಹಾ ಸಿಂಹಾಸನದ ಒಡೆಯನಲ್ಲಿ, ನಿನ್ನನ್ನು ಗುಣಪಡಿಸಬೇಕೆಂದುನಾನು ಬೇಡುತ್ತೇನೆ.

ಏಳು ಸಲ ಹೇಳಬೇಕು. ಸ್ವಯಂ ಮಂತ್ರಿಸುವುದಾದರೆ ಅಸ್‌ಅಲುಲ್ಲಾಹಲ್ ಅಝೀಮ್, ರಬ್ಬಲ್ ಅರ್ಶಿಲ್ ಅಝೀಮ್ ಅನ್ ಯಶ್ಫಿಯನೀ ಎಂದು ಹೇಳಬೇಕು.

# ಮಂತ್ರಿಸುವಾಗ ಗಮನ ಹರಿಸಬೇಕಾದ ಕೆಲವು ಷರತ್ತುಗಳು ಮತ್ತು ಸೂಚನೆಗಳು:

1

ಮಂತ್ರ ಕುರ್‌ಆನ್ ಮತ್ತು ಸುನ್ನತ್ತಿನಲ್ಲಿ ಬಂದ ಮಂತ್ರವಾಗಿರಬೇಕು, ಮಂತ್ರದ ಶಬ್ದಗಳಲ್ಲಿ ಮತ್ತು ಮಂತ್ರಿಸುವ ರೂಪದಲ್ಲಿ ಅದು ಶಿರ್ಕ್, ಬಿದ್‌ಅತ್ ಮತ್ತು ಹರಾಮ್‌ಗಳಿಂದ ಮುಕ್ತವಾಗಿರಬೇಕು.

2

ಮುಸಲ್ಮಾನನು ಅಲ್ಲಾಹನಲ್ಲಿ ಅವಲಂಬಿತನಾಗಿ ಅವನ ಮೇಲೆ ಭರವಸೆಯಿಡಬೇಕು. ಮಂತ್ರ ಒಂದು ಕಾರಣ ಮಾತ್ರವಾಗಿದ್ದು ಅಲ್ಲಾಹನ ಅನುಮತಿಯಿಲ್ಲದಿದ್ದರೆ ಅದೇನೂ ಪ್ರಭಾವ ಬೀರುವುದಿಲ್ಲವೆಂದು ತಿಳಿದಿರಬೇಕು.

3

ಪರೀಕ್ಷಿಸುವುದಕ್ಕಾಗಿ ಮಂತ್ರಿಸಬಾರದು. ಮಂತ್ರ ಪ್ರಭಾವ ಬೀರುತ್ತದೆ ಎಂಬ ಬಲವಾದ ನಂಬಿಕೆಯಿಂದ ಮಂತ್ರಿಸಬೇಕು. ಮಂತ್ರಿಸುವವನು ಮತ್ತು ಮಂತ್ರಿಸಲ್ಪಡುವವನು ಇಬ್ಬರೂ ಮಂತ್ರದ ಪ್ರಭಾವದಲ್ಲಿ ಮತ್ತು ಅದು ಗುಣಪಡಿಸುತ್ತದೆ ಎಂಬ ವಿಷಯದಲ್ಲಿ ನಂಬಿಕೆ ಹೊಂದಿರಬೇಕು.

4

ಪವಿತ್ರ ಕುರ್‌ಆನಿನ ಎಲ್ಲ ಆಯತ್‌ಗಳೂ ಗುಣಪಡಿಸುವ ಆಯತ್‌ಗಳಾಗಿವೆ. ಅಲ್ಲಾಹು ಹೇಳುತ್ತಾನೆ -

﴿وَنُنَزِّلُ مِنَ ٱلْقُرْءَانِ مَا هُوَ شِفَآءٌ وَرَحْمَةٌ لِّلْمُؤْمِنِينَ﴾ [الإسراء:٨٢]

ಸತ್ಯವಿಶ್ವಾಸಿಗಳಿಗೆ ಉಪಶಮನ ಮತ್ತು ಕರುಣೆಯಾಗಿರುವುದನ್ನು ನಾನು ಕುರ್‌ಆನಿನಿಂದ ಅವತೀರ್ಣಗೊಳಿಸುತ್ತೇವೆ. ಆದರೆ ಮಂತ್ರಿಸಬೇಕೆಂದು ವರದಿಯಾಗಿರುವ ಆಯತ್‌ಗಳ ಮೂಲಕ ಮಂತ್ರಿಸುವುದು ಹೆಚ್ಚು ಯೋಗ್ಯವಾಗಿದೆ.

5

ರೋಗಿ ತನಗೆ ತಾನೇ ಮಂತ್ರಿಸುವುದು ಶ್ರೇಷ್ಠವಾಗಿದೆ. ಏಕೆಂದರೆ ಇದು ಅವನಿಗೆ ಹೆಚ್ಚು ಪ್ರಯೋಜನ ನೀಡುತ್ತದೆ. ತನ್ನ ಅಸಹಾಯಕತೆಯನ್ನು ಮತ್ತು ಅಗತ್ಯವನ್ನು ಅಲ್ಲಾಹನ ಮುಂದೆ ತೋಡಿಕೊಳ್ಳುವುದರಲ್ಲಿ ಅವನು ಹೆಚ್ಚು ಪ್ರಾಮಾಣಿಕನಾಗಿರುತ್ತಾನೆ. ಏಕೆಂದರೆ ಹೃದಯ ಸಾನಿಧ್ಯ ಮತ್ತು ಉದ್ದೇಶದ ನಿಷ್ಕಳಂಕತೆ ಮಂತ್ರದಲ್ಲಿ ಪರಿಣಾಮಕಾರಿಯಾಗಿದೆ.



صحيح الدعاء والثناء على الله تعالى

# ಬೆಳಿಗ್ಗೆ ಮತ್ತು ಸಂಜೆ ಹೇಳುವ ಪ್ರಾರ್ಥನೆಗಳು

1

«لَا إِلَهَ إِلَّا اللهُ وَحْدَهُ لَا شَرِيكَ لَهُ، لَهُ الْمُلْكُ وَلَهُ الْحَمْدُ، وَهُوَ عَلَى كُلِّ شَيْءٍ قَدِيرٌ»

ಲಾ ಇಲಾಹ ಇಲ್ಲಲ್ಲಾಹು ವಹ್ದಹೂ ಲಾ ಶರೀಕ ಲಹೂ, ಲಹುಲ್ ಮುಲ್ಕು ವಲಹುಲ್ ಹಮ್ದು ವಹುವ ಅಲಾ ಕುಲ್ಲಿ ಶೈಇನ್ ಕದೀರ್

ಅಲ್ಲಾಹನ ಹೊರತು ಅನ್ಯ ಸತ್ಯ ಆರಾಧ್ಯರಿಲ್ಲ, ಅವನು ಏಕೈಕನು ಮತ್ತು ಸಹಭಾಗಿಗಳಿಲ್ಲದವನು. ಆಧಿಪತ್ಯ ಅವನದ್ದು ಮತ್ತು ಸರ್ವಸ್ತುತಿ ಅವನಿಗೆ. ಅವನು ಎಲ್ಲ ವಿಷಯಗಳಲ್ಲೂ ಸಾಮರ್ಥ್ಯವುಳ್ಳವನು.

10 ಸಲ

2

«أَصْبَحْنَا وَأَصْبَحَ الْمُلْكُ لِلّٰهِ، وَالْحَمْدُ لِلّٰهِ، لاَ إِلَهَ إِلَّا اللّٰهُ وَحْدَهُ لاَ شَرِيكَ لَهُ، اللَّهُمَّ إِنِّي أَسْأَلُكَ خَيْرِ مَا فِي هَذَا الْيَوم، وَخَيْر مَا بعدِه، وَأَعُوذُ بِك مِنْ شَرِّ مَا فِي هَذا اليَوم، وَشَر مَا بَعْدِه، اللَّهُمَّ إِنِّي أَعُوذُ بِكَ مِنَ الْكَسَلِ، وَالْهَرَمِ، وَسُوءِ الْكِبَرِ، وَفِتْنَةِ الدُّنْيَا، وَعَذَابِ الْقَبْرِ»

ಅಸ್ಬಹ್‌ನಾ ವಅಸ್ಬಹಲ್ ಮುಲ್ಕು ಲಿಲ್ಲಾಹಿ, ವಲ್‌ಹಮ್ದು ಲಿಲ್ಲಾಹಿ, ಲಾ ಇಲಾಹ ಇಲ್ಲಲ್ಲಾಹು ವಹ್ದಹೂ ಲಾ ಶರೀಕ ಲಹೂ. ಅಲ್ಲಾಹುಮ್ಮ ಇನ್ನೀ ಅಸ್‌ಅಲುಕ ಖೈರ ಮಾ ಫೀ ಹಾದಲ್ ಯೌಮಿ ವಖೈರ ಮಾ

ಬಅ್‌ದಹೂ, ವಅಊದು ಬಿಕ ಮಿನ್ ಶರ್‍ರಿ ಮಾ ಫೀ ಹಾದಲ್ ಯೌಮಿ ವಶರ್‍ರಿ ಮಾ ಬಅ್‌ದಹೂ, ಅಲ್ಲಾಹುಮ್ಮ ಇನ್ನೀ ಅಊದು ಬಿಕ ಮಿನಲ್ ಕಸಲಿ, ವಲ್ ಹರಮಿ, ವಸೂಇಲ್ ಕಿಬರಿ, ವಫಿತ್ನತಿದ್ದುನ್ಯಾ ವಅದಾಬಿಲ್ ಕಬ್ರ್

ಅಲ್ಲಾಹನ ಅನುಗ್ರಹ ಮತ್ತು ಸಂರಕ್ಷಣೆಯೊಂದಿಗೆ ನಾವು ಬೆಳಗನ್ನು ಪ್ರವೇಶಿಸಿದೆವು. ಆಧಿಪತ್ಯಗಳೆಲ್ಲವೂ ಅಲ್ಲಾಹನಿಗೇ ಆಗಿವೆ. ಅಲ್ಲಾಹನಿಗೆ ಸರ್ವಸ್ತುತಿ. ಅಲ್ಲಾಹನ ಹೊರತು ಅನ್ಯ ಸತ್ಯ ಆರಾಧ್ಯರಿಲ್ಲ, ಅವನು ಏಕೈಕನು ಮತ್ತು ಸಹಭಾಗಿಗಳಿಲ್ಲದವನು. ಓ ಅಲ್ಲಾಹ್! ಈ ದಿನದಲ್ಲಿರುವ ಒಳಿತನ್ನು ಮತ್ತು ಈ ದಿನದ ನಂತರದ ದಿನಗಳಲ್ಲಿರುವ ಒಳಿತನ್ನು ನಾನು ನಿನ್ನಲ್ಲಿ ಬೇಡುತ್ತೇನೆ. ಈ ದಿನದಲ್ಲಿರುವ ಕೆಡುಕಿನಿಂದ ಮತ್ತು ಈ ದಿನದ ನಂತರದ

ದಿನಗಳಲ್ಲಿರುವ ಕೆಡುಕಿನಿಂದ ನಾನು ನಿನ್ನಲ್ಲಿ ರಕ್ಷೆ ಬೇಡುತ್ತೇನೆ. ಓ ಅಲ್ಲಾಹ್! ಸೋಮಾರಿತನದಿಂದ, ವೃದ್ಧಾಪ್ಯದ ಕೆಡುಕಿನಿಂದ ಇಹಲೋಕದ ಫಿತ್ನದಿಂದ ಮತ್ತು ಗೋರಿಯಲ್ಲಿರುವ ಶಿಕ್ಷೆಯಿಂದ ನಾನು ನಿನ್ನಲ್ಲಿ ರಕ್ಷೆ ಬೇಡುತ್ತೇನೆ.

## ಬೆಳಗ್ಗೆ ಹೇಳುವ ದಿಕ್ರ್

«أَمْسَيْنَا وَأَمْسَى الْمُلْكُ لِلَّهِ، وَالْحَمْدُ لِلَّهِ، لاَ إِلَهَ إِلَّا اللهُ وَحْدَهُ لاَ شَرِيكَ لَهُ، اللَّهُمَّ إِنِّي أَسْأَلُكَ خَيْرِ مَا فِي هَذِه اللَّيْلَةِ، وَخَيْر مَا بعدِها، وَأَعُوذُ بِك مِنْ شَرِّ مَا فِي هَذه اللَّيْلَةِ، وَشَر مَا بَعْدِها، اللَّهُمَّ إِنِّي أَعُوذُ بِكَ مِنَ الْكَسَلِ، وَالْهَرَمِ، وَسُوءِ الْكِبَرِ، وَفِتْنَةِ الدُّنْيَا، وَعَذَابِ الْقَبْرِ»

ಅಮ್‌ಸೈನಾ ವಅಮ್ಸಲ್ ಮುಲ್ಕು ಲಿಲ್ಲಾಹಿ, ವಲ್‌ಹಮ್ದು ಲಿಲ್ಲಾಹಿ, ಲಾ ಇಲಾಹ ಇಲ್ಲಲ್ಲಾಹು ವಹ್ದಹೂ ಲಾ ಶರೀಕ ಲಹೂ. ಅಲ್ಲಾಹುಮ್ಮ ಇನ್ನೀ ಅಸ್‌ಅಲುಕ ಖೈರ ಮಾ ಫೀ ಹಾದಿಹಿ ಲ್ಲೈಲತಿ ವಖೈರ ಮಾ ಬಅ್‌ದಹಾ, ವಅಊದು ಬಿಕ ಮಿನ್ ಶರ್ರಿ ಮಾ ಫೀ ಹಾದಿಹಿ ಲ್ಲೈಲತಿ ವಶರ್ರಿ ಮಾ

ಬಲ್‌ದಹಾ, ಅಲ್ಲಾಹುಮ್ಮ ಇನ್ನೀ ಅಊದು ಬಿಕ ಮಿನಲ್ ಕಸಲಿ, ವಲ್ ಹರಮಿ, ವಸೂಇಲ್ ಕಿಬರಿ, ವಫಿತ್ನತಿದ್ದುನ್ಯಾ ವಅದಾಬಿಲ್ ಕಬ್ರ್

ಅಲ್ಲಾಹನ ಅನುಗ್ರಹ ಮತ್ತು ಸಂರಕ್ಷಣೆಯೊಂದಿಗೆ ನಾವು ಸಂಜೆಯನ್ನು ಪ್ರವೇಶಿಸಿದೆವು. ಆಧಿಪತ್ಯಗಳೆಲ್ಲವೂ ಅಲ್ಲಾಹನಿಗೇ ಆಗಿವೆ. ಅಲ್ಲಾಹನಿಗೆ ಸರ್ವಸ್ತುತಿ. ಅಲ್ಲಾಹನ ಹೊರತು ಅನ್ಯ ಸತ್ಯ ಆರಾಧ್ಯರಿಲ್ಲ, ಅವನು ಏಕೈಕನು ಮತ್ತು ಸಹಭಾಗಿಗಳಿಲ್ಲದವನು. ಓ ಅಲ್ಲಾಹ್! ಈ ರಾತ್ರಿಯಲ್ಲಿರುವ ಒಳಿತನ್ನು ಮತ್ತು ಈ ರಾತ್ರಿಯ ನಂತರದ ರಾತ್ರಿಗಳಲ್ಲಿರುವ ಒಳಿತನ್ನು ನಾನು ನಿನ್ನಲ್ಲಿ ಬೇಡುತ್ತೇನೆ. ಈ ರಾತ್ರಿಯಲ್ಲಿರುವ ಕೆಡುಕಿನಿಂದ ಮತ್ತು ಈ ರಾತ್ರಿಯ ನಂತರದ

ರಾತ್ರಿಗಳಲ್ಲಿರುವ ಕೆಡುಕಿನಿಂದ ನಾನು ನಿನ್ನಲ್ಲಿ ರಕ್ಷೆ ಬೇಡುತ್ತೇನೆ. ಓ ಅಲ್ಲಾಹ್! ಸೋಮಾರಿತನದಿಂದ, ವೃದ್ಧಾಪ್ಯದ ಕೆಡುಕಿನಿಂದ ಇಹಲೋಕದ ಫಿತ್ನದಿಂದ ಮತ್ತು ಗೋರಿಯಲ್ಲಿರುವ ಶಿಕ್ಷೆಯಿಂದ ನಾನು ನಿನ್ನಲ್ಲಿ ರಕ್ಷೆ ಬೇಡುತ್ತೇನೆ.

## ಸಂಜೆ ಹೇಳುವ ದಿಕ್ರ್

3

«اللَّهُمَّ أَنْتَ رَبِّي لَا إِلَهَ إِلَّا أَنْتَ خَلَقْتَنِي، وَأَنَا عَبْدُكَ، وَأَنَا عَلَى عَهْدِكَ وَوَعْدِكَ مَا اسْتَطَعْتُ، أَعُوذُ بِكَ مِنْ شَرِّ مَا صَنَعْتُ، أَبُوءُ لَكَ بِنِعْمَتِكَ عَلَيَّ، وَأَبُوءُ لَكَ بِذَنْبِي فَاغْفِرْ لِي فَإِنَّهُ لَا يَغْفِرُ الذُّنُوبَ إِلَّا أَنْتَ»

ಅಲ್ಲಾಹುಮ್ಮ ಅನ್ತ ರಬ್ಬೀ ಲಾ ಇಲಾಹ ಇಲ್ಲಾ ಅನ್ತ ಖಲಕ್ತನೀ ವಅನ ಅಬ್ದುಕ, ವಅನ ಅಲಾ ಅಹ್ದಿಕ ವವಅ್‌ದಿಕ ಮಸ್ತತಅ್‌ತು, ಅಊದು ಬಿಕ ಮಿನ್ ಶರ್ರಿ ಮಾ ಸನಅ್‌ತು, ಅಬೂಉ ಲಕ ಬಿನಿಅ್‌ಮತಿಕ ಅಲಯ್ಯ, ವಅಬೂಉ ಬಿದಮ್ಬೀ ಫಗ್‌ಫಿರ್ ಲೀ ಇನ್ನಹೂ ಲಾ ಯಗ್‌ಫಿರು ದ್ದುನೂಬ ಇಲ್ಲಾ ಅನ್ತ್

ಓ ಅಲ್ಲಾಹ್! ನೀನು ನನ್ನ ರಬ್ಬ್. ನಿನ್ನ ಹೊರತು ಅನ್ಯ ಸತ್ಯ ಆರಾಧ್ಯರಿಲ್ಲ. ನೀನು ನನ್ನನ್ನು ಸೃಷ್ಟಿಸಿರುವೆ. ನಾನು ನಿನ್ನ ದಾಸ. ನನಗೆ ಸಾಧ್ಯವಾಗುವ ಮಟ್ಟಿಗೆ ನಾನು ನಿನ್ನ ಕರಾರು ಮತ್ತು ವಾಗ್ದಾನವನ್ನು ಪಾಲಿಸುತ್ತಿದ್ದೇನೆ. ನಾನು ಮಾಡಿದ ಕರ್ಮಗಳ ಕೆಡುಕಿನಿಂದ ನಿನ್ನಲ್ಲಿ ರಕ್ಷೆ ಬೇಡುತ್ತೇನೆ. ನೀನು ನನಗೆ ಅನುಗ್ರಹಿಸಿದ ಅನುಗ್ರಹಗಳನ್ನು ನಾನು ಒಪ್ಪಿಕೊಳ್ಳುತ್ತೇನೆ. ನನ್ನ ಪಾಪವನ್ನೂ ನಾನು ಒಪ್ಪಿಕೊಳ್ಳುತ್ತೇನೆ. ಆದುದರಿಂದ ನನ್ನನ್ನು ಕ್ಷಮಿಸು. ಖಂಡಿತವಾಗಿಯೂ ನೀನಲ್ಲದೆ ಪಾಪಗಳನ್ನು ಕ್ಷಮಿಸುವವರಿಲ್ಲ.

4

«اللَّهُمَّ بِكَ أَصْبَحْنَا، وَبِكَ أَمْسَيْنَا، وَبِكَ نَحْيَا، وَبِكَ نَمُوتُ، وَإِلَيْكَ الْمَصِيرُ»

ಓ ಅಲ್ಲಾಹ್! ನಿನ್ನ ಅನುಗ್ರಹ ಮತ್ತು ಸಂರಕ್ಷಣೆಯೊಂದಿಗೆ ನಾವು ಬೆಳಗನ್ನು ಪ್ರವೇಶಿಸಿದೆವು. ನಿನ್ನ ಅನುಗ್ರಹ ಮತ್ತು ಸಂರಕ್ಷಣೆಯೊಂದಿಗೆ ನಾವು ಸಂಜೆಯನ್ನು ಪ್ರವೇಶಿಸಿದೆವು. ನಿನ್ನ ಅಪ್ಪಣೆಯಿಂದಲೇ ನಾವು ಜೀವಂತವಿರುವುದು. ನಿನ್ನ ಅಪ್ಪಣೆಯಿಂದಲೇ ನಾವು ಮರಣಹೊಂದುವೆವು. ಪುನರುತ್ಥಾನವು ನಿನ್ನ ಕಡೆಗೇ ಆಗಿದೆ.

## ಬೆಳಗ್ಗೆ ಹೇಳುವ ದಿಕ್ರ್

«اللَّهُمَّ بِكَ أَمْسَيْنَا وَبِكَ أَصْبَحْنَا وَبِكَ نَحْيَا وَبِكَ نَمُوتُ وَإِلَيْكَ النُّشُورُ»

ಅಲ್ಲಾಹುಮ್ಮ ಬಿಕ ಅಮ್‌ಸೈನಾ ವಬಿಕ ಅಮ್ಸೈನಾ ವಬಿಕ ನಹ್ಯಾ ವಬಿಕ ನಮೂತು ವಇಲೈಕ ನ್ನುಶೂರ್

ಓ ಅಲ್ಲಾಹ್! ನಿನ್ನ ಅನುಗ್ರಹ ಮತ್ತು ಸಂರಕ್ಷಣೆಯೊಂದಿಗೆ ನಾವು ಸಂಜೆಯನ್ನು ಪ್ರವೇಶಿಸಿದೆವು. ನಿನ್ನ ಅನುಗ್ರಹ ಮತ್ತು ಸಂರಕ್ಷಣೆಯೊಂದಿಗೆ ನಾವು ಬೆಳಗನ್ನು ಪ್ರವೇಶಿಸಿದೆವು. ನಿನ್ನ ಅಪ್ಪಣೆಯಿಂದಲೇ ನಾವು ಜೀವಂತವಿರುವುದು. ನಿನ್ನ ಅಪ್ಪಣೆಯಿಂದಲೇ ನಾವು ಮರಣಹೊಂದುವೆವು. ಪುನರುತ್ಥಾನವು ನಿನ್ನ ಕಡೆಗೇ ಆಗಿದೆ.

ಸಂಜೆ ಹೇಳುವ ದಿಕ್ರ್

5

«اللَّهُمَّ فَاطِرَ السَّمَوَاتِ وَالْأَرْضِ، عَالِمَ الْغَيْبِ وَالشَّهَادَةِ، لَا إِلَهَ إِلَّا أَنْتَ رَبَّ كُلِّ شَيْءٍ وَمَلِيكَهُ، أَعُوذُ بِكَ مِنْ شَرِّ نَفْسِي وَمِنْ شَرِّ الشَّيْطَانِ وَشِرْكِهِ، وَأَنْ أَقْتَرِفَ عَلَى نَفْسِي سُوءًا، أَوْ أَجُرَّهُ إِلَى مُسْلِمٍ»

ಅಲ್ಲಾಹುಮ್ಮ ಫಾತಿರ ಸ್ಸಮಾವಾತಿ ವಲ್ ಅರ್ದಿ, ಆಲಿಮಲ್ ಗೈಬಿ ವಶ್ಶಹಾದತಿ, ಲಾಇಲಾಹ ಇಲ್ಲಾ ಅನ್ತ, ರಬ್ಬ ಕುಲ್ಲಿ ಶೈಇನ್ ವಮಲೀಕಹೂ, ಅಊದು ಬಿಕ ಮಿನ್ ಶರ್ರಿ ನಫ್ಸೀ ವಶರ್ರಿ ಶ್ಶೈತಾನಿ ವಶಿರ್ಕಿಹ್, ವಅನ್ ಅಕ್‌ತರಿಫ ಅಲಾ ನಫ್ಸೀ ಸೂಅನ್, ಅವ್ ಅಜುರ್ರಹು ಇಲಾ ಮುಸ್ಲಿಮ್

ಓ ಅಲ್ಲಾಹ್! ಭೂಮಿ ಆಕಾಶಗಳ ಸೃಷ್ಟಿಕರ್ತನೇ! ದೃಶ್ಯ ಮತ್ತು ಅದೃಶ್ಯಗಳನ್ನು ಅರಿಯುವವನೇ! ನಿನ್ನ ಹೊರತು ಅನ್ಯ ಸತ್ಯ ಆರಾಧ್ಯರಿಲ್ಲ. ಎಲ್ಲ ವಸ್ತುಗಳ ರಬ್ಬ್ ಮತ್ತು ಅಧಿಪತಿಯೇ! ನಾನು ಮಾಡಿದ ಕರ್ಮಗಳ ಕೆಡುಕಿನಿಂದ ನಾನು ನಿನ್ನಲ್ಲಿ ರಕ್ಷೆ ಬೇಡುತ್ತೇನೆ. ಶೈತಾನನ ಹಾಗೂ ಅವನ ಸಹಭಾಗಿತ್ವದ ಕೆಡುಕಿನಿಂದ ನಾನು ನಿನ್ನಲ್ಲಿ ರಕ್ಷೆ ಬೇಡುತ್ತೇನೆ. ಸ್ವಯಂ ಪಾಪವೆಸಗುವುದರಿಂದ ಅಥವಾ ಅದನ್ನು ಒಬ್ಬ ಮುಸ್ಲಿಮನ ಕಡೆಗೆ ಎಳೆಯುವುದರಿಂದ ನಾನು ನಿನ್ನಲ್ಲಿ ರಕ್ಷೆ ಬೇಡುತ್ತೇನೆ.

6

«بِسْمِ اللهِ الَّذِي لَا يَضُرُّ مَعَ اسْمِهِ شَيْءٌ فِي الْأَرْضِ وَلَا فِي السَّمَاءِ وَهُوَ السَّمِيعُ الْعَلِيمُ»

ಬಿಸ್ಮಿಲ್ಲಾಹಿಲ್ಲದೀ ಲಾ ಯದುರ್ರು ಮಅಸ್ಮಿಹೀ ಶೈಉನ್ ಫಿಲ್ ಅರ್ದಿ ವಲಾ ಫಿ ಸ್ಸಮಾಇ ವಹುವ ಸ್ಸಮೀಉಲ್ ಅಲೀಮ್

ಯಾರ ಹೆಸರಿನೊಂದಿಗೆ ಭೂಮಿಯಲ್ಲಾಗಲಿ, ಆಕಾಶದಲ್ಲಾಗಲಿ ಯಾವುದೇ ವಸ್ತು ಹಾನಿ ಮಾಡುವುದಿಲ್ಲವೋ ಆ ಅಲ್ಲಾಹನ ಹೆಸರಿನಿಂದ. ಅವನು ಎಲ್ಲವನ್ನು ಕೇಳುವವನೂ ಅರಿಯುವವನೂ ಆಗಿದ್ದಾನೆ.

3 ಸಲ

7

«رَضِيتُ بِاللهِ رَبًّا، وَبِالْإِسْلَامِ دِينًا،
وَبِمُحَمَّدٍ صَلَّى اللهُ عَلَيْهِ وَسَلَّمَ نَبِيًّا»

ರದೀತು ಬಿಲ್ಲಾಹಿ ರಬ್ಬನ್, ವಬಿಲ್ ಇಸ್ಲಾಮಿ ದೀನನ್, ವಬಿಮುಹಮ್ಮದಿನ್ ಸಲ್ಲಲ್ಲಾಹು ಅಲೈಹಿ ವಸಲ್ಲಮ ನಬಿಯ್ಯನ್

ರಬ್ಬ್ ಆಗಿ ಅಲ್ಲಾಹನಲ್ಲಿ, ಧರ್ಮವಾಗಿ ಇಸ್ಲಾಮಿನಲ್ಲಿ ಮತ್ತು ಪ್ರವಾದಿಯಾಗಿ ಮುಹಮ್ಮದ್(ಸ) ರಲ್ಲಿ ನನಗೆ ತೃಪ್ತಿಯಿದೆ.

8

«اللَّهُمَّ إِنِّي أَسْأَلُكَ الْعَافِيَةَ فِي الدُّنْيَا وَالْآخِرَةِ، اللَّهُمَّ إِنِّي أَسْأَلُكَ الْعَفْوَ وَالْعَافِيَةَ فِي دِينِي وَدُنْيَايَ، وَأَهْلِي وَمَالِي، اللَّهُمَّ اسْتُرْ عَوْرَاتِي، وَآمِنْ رَوْعَاتِي، اللَّهُمَّ احْفَظْنِي مِنْ بَيْنِ يَدَيَّ وَمِنْ خَلْفِي، وَعَنْ يَمِينِي وَعَنْ شِمَالِي، وَمِنْ فَوْقِي، وَأَعُوذُ بِعَظَمَتِكَ أَنْ أُغْتَالَ مِنْ تَحْتِي»

ಅಲ್ಲಾಹುಮ್ಮ ಇನ್ನೀ ಅಸ್‌ಅಲುಕಲ್ ಆಫಿಯತ ಫಿದ್ದುನ್ಯಾ ವಲ್ ಆಖಿರತಿ, ಅಲ್ಲಾಹುಮ್ಮ ಇನ್ನೀ ಅಸ್‌ಅಲುಕಲ್ ಅಫ್ವ ವಲ್ ಆಫಿಯತ ಫೀ ದೀನೀ ವದುನ್ಯಾಯ ವಅಹ್ಲೀ ವಮಾಲೀ, ಅಲ್ಲಾಹುಮ್ಮಸ್ತುರ್ ಔರಾತೀ ವಆಮಿನ್

ರೌಆತೀ, ಅಲ್ಲಾಹುಮ್ಮ್ರಫ್ಝ್‌ನೀ ಮಿನ್ ಬೈನಿ ಯದಯ್ಯ ವಮಿನ್ ಖಲ್ಫೀ ವಅನ್ ಯಮೀನೀ ವಅನ್ ಶಿಮಾಲೀ ವಮಿನ್ ಫೌಕೀ, ವಅಊದು ಬಿಅಝ್‌ಮತಿಕ ಅನ್ ಉಗ್ತಾಲ ಮಿನ್ ತಹ್ತೀ

ಓ ಅಲ್ಲಾಹ್! ಇಹಲೋಕದಲ್ಲೂ, ಪರಲೋಕದಲ್ಲೂ ನಾನು ಸೌಖ್ಯವನ್ನು ಬೇಡುತ್ತೇನೆ. ಓ ಅಲ್ಲಾಹ್! ನನ್ನ ಧರ್ಮದಲ್ಲಿ, ಇಹಲೋಕದಲ್ಲಿ, ಕುಟುಂಬದಲ್ಲಿ ಮತ್ತು ಸಂಪತ್ತಿನಲ್ಲಿ ಕ್ಷಮೆ ಮತ್ತು ಸೌಖ್ಯವನ್ನು ಬೇಡುತ್ತೇನೆ. ಓ ಅಲ್ಲಾಹ್! ನನ್ನ ನ್ಯೂನತೆಗಳನ್ನು ಮರೆಮಾಚು. ನನ್ನ ಭಯವನ್ನು ನಿವಾರಿಸು. ಓ ಅಲ್ಲಾಹ್! ನನ್ನ ಮುಂಭಾಗದಿಂದ, ನನ್ನ ಹಿಂಭಾಗದಿಂದ, ನನ್ನ ಬಲಭಾಗದಿಂದ, ನನ್ನ ಎಡಭಾಗದಿಂದ, ನನ್ನ ಮೇಲ್ಭಾಗದಿಂದ ನನ್ನನ್ನು ರಕ್ಷಿಸು. ಭೂಮಿ ನನ್ನನ್ನು ನುಂಗಿ ಬಿಡುವುದರಿಂದ ನಾನು ನಿನ್ನ ಮಹಾತ್ಮೆಯ ಮೂಲಕ ನಿನ್ನಲ್ಲಿ ರಕ್ಷೆ ಬೇಡುತ್ತೇನೆ.

9

«أَعُوذُ بِكَلِمَاتِ اللهِ التَّامَّاتِ مِنْ شَرِّ مَا خَلَقَ»

ಅಊದು ಬಿಕಲಿಮಾತಿಲ್ಲಾಹಿ ತ್ತಾಮ್ಮಾತಿ ಮಿನ್ ಶರ್ರಿ ಮಾ ಖಲಕ್

ಅಲ್ಲಾಹನ ಪರಿಪೂರ್ಣ ವಚನಗಳೊಂದಿಗೆ ಅವನು ಸೃಷ್ಟಿಸಿದವುಗಳ ಕೆಡುಕಿನಿಂದ ನಾನು ರಕ್ಷೆ ಬೇಡುತ್ತೇನೆ.

## 10

«أَصْبَحْنَا عَلَى فِطْرَةِ الْإِسْلَامِ، وَكَلِمَةِ الْإِخْلَاصِ، وَدِينِ نَبِيِّنَا مُحَمَّدٍ -صَلَّى اللهُ عَلَيْهِ وَسَلَّمَ- وَمِلَّةِ أَبِينَا إِبْرَاهِيمَ حَنِيفًا، وَمَا كَانَ مِنْ الْمُشْرِكِينَ»

ಅಸ್ಬಹ್‌ನಾ ಅಲಾ ಫಿತ್ರತಿಲ್ ಇಸ್ಲಾಮಿ, ವಕಲಿಮತಿಲ್ ಇಖ್ಲಾಸಿ, ವದೀನಿ ನಬಿಯ್ಯಿನಾ ಮುಹಮ್ಮದಿನ್ ಸಲ್ಲಲ್ಲಾಹು ಅಲೈಹಿ ವಸಲ್ಲಮ, ವಮಿಲ್ಲತಿ ಅಬೀನಾ ಇಬ್ರಾಹೀಮ ಹನೀಫನ್ ವಮಾ ಕಾನ ಮಿನಲ್ ಮುಶ್ರಿಕೀನ್

ಇಸ್ಲಾಮಿನ ಶುದ್ಧ ಪ್ರಕೃತಿಯಲ್ಲಿ, ನಿಷ್ಕಳಂಕ ವಚನದಲ್ಲಿ, ನಮ್ಮ ಪ್ರವಾದಿ

ಮುಹಮ್ಮದ್(ಸ) ರವರ ಧರ್ಮದಲ್ಲಿ ಮತ್ತು ನಿಷ್ಕಳಂಕರೂ, ಮುಸ್ಲಿಮರೂ ಆಗಿರುವ ಇಬ್ರಾಹೀಂ(ಅ) ರ ಮಾರ್ಗದಲ್ಲಿ ಅಲ್ಲಾಹನ ಅನುಗ್ರಹ ಮತ್ತು ಸಂರಕ್ಷಣೆಯೊಂದಿಗೆ ನಾವು ಬೆಳಗನ್ನು ಪ್ರವೇಶಿಸಿದೆವು. ಅವರೆಂದೂ ಬಹುದೇವವಿಶ್ವಾಸಿಗಳಲ್ಲಿ ಸೇರಿದವರಲ್ಲ.

## ಬೆಳಗ್ಗೆ ಹೇಳುವ ದಿಕ್ರ್

«أَمْسَيْنَا عَلَى فِطْرَةِ الإِسْلاَمِ، وَكَلِمَةِ الْإِخْلَاصِ، وَدِينِ نَبِيِّنَا مُحَمَّدٍ -صَلَّى اللهُ عَلَيْهِ وَسَلَّمَ- وَمِلَّةِ أَبِينَا إِبْرَاهِيمَ حَنِيفًا، وَمَا كَانَ مِنْ الْمُشْرِكِينَ»

ಅಮ್ಸೈನಾ ಅಲಾ ಫಿತ್ರತಿಲ್ ಇಸ್ಲಾಮಿ, ವಕಲಿಮತಿಲ್ ಇಖ್ಲಾಸಿ, ವದೀನಿ

ನಬಿಯ್ಯಿನಾ ಮುಹಮ್ಮದಿನ್ ಸಲ್ಲಲ್ಲಾಹು ಅಲೈಹಿ ವಸಲ್ಲಮ, ವಮಿಲ್ಲತಿ ಅಬೀನಾ ಇಬ್ರಾಹೀಮ ಹನೀಫನ್ ವಮಾ ಕಾನ ಮಿನಲ್ ಮುಶ್ರಿಕೀನ್

ಇಸ್ಲಾಮಿನ ಶುದ್ಧ ಪ್ರಕೃತಿಯಲ್ಲಿ, ನಿಷ್ಕಳಂಕ ವಚನದಲ್ಲಿ, ನಮ್ಮ ಪ್ರವಾದಿ ಮುಹಮ್ಮದ್(ಸ) ರವರ ಧರ್ಮದಲ್ಲಿ ಮತ್ತು ನಿಷ್ಕಳಂಕರೂ, ಮುಸ್ಲಿಮರೂ ಆಗಿರುವ ಇಬ್ರಾಹೀಂ(ಅ) ರ ಮಾರ್ಗದಲ್ಲಿ ಅಲ್ಲಾಹನ ಅನುಗ್ರಹ ಮತ್ತು ಸಂರಕ್ಷಣೆಯೊಂದಿಗೆ ನಾವು ಸಂಜೆಯನ್ನು ಪ್ರವೇಶಿಸಿದೆವು. ಅವರೆಂದೂ ಬಹುದೇವವಿಶ್ವಾಸಿಗಳಲ್ಲಿ ಸೇರಿದವರಲ್ಲ.

## ಸಂಜೆ ಹೇಳುವ ದಿಕ್ರ್

11

«يَا حَيُّ يَا قَيُّومُ بِرَحْمَتِكَ أَسْتَغِيثُ أَصْلِحْ لِي شَأْنِي كُلَّهُ، وَلَا تَكِلْنِي إِلَى نَفْسِي طَرْفَةَ عَيْنٍ»

ಯಾ ಹಯ್ಯು ಯಾ ಕಯ್ಯೂಮು ಬಿರಹ್ಮತಿಕ ಅಸ್ತಗೀಸು ಅಸ್ಲಿಹ್ ಲೀ ಶಅ್‌ನೀ ಕುಲ್ಲಹೂ ವಲಾ ತಕಿಲ್‌ನೀ ಇಲಾ ನಫ್ಸೀ ತರ್‌ಫತ ಐನ್

ನಿರಂತರವಾಗಿ ಜೀವಿಸುವವನೇ! ಸ್ವಯಂ ಅಸ್ತಿತ್ವದಲ್ಲಿರುವವನು ಮತ್ತು ಇತರೆಲ್ಲವನ್ನೂ ಸಂರಕ್ಷಿಸಿ ನಿಯಂತ್ರಿಸುವವನೇ! ನಿನ್ನ ಕರುಣೆಯ ಮೂಲಕ ನಾನು ನಿನ್ನಲ್ಲಿ ಸಹಾಯ ಬೇಡುತ್ತೇನೆ. ನನ್ನ ಎಲ್ಲ ಕಾರ್ಯಗಳನ್ನೂ ನನಗೆ ಸರಿಪಡಿಸಿಕೊಡು. ಕಣ್ಣೆವೆಯಿಕ್ಕುವಷ್ಟು ಸಮಯ ಕೂಡ ನಾನು ನನ್ನನ್ನೇ ಅವಲಂಬಿಸುವಂತೆ ಮಾಡದಿರು.

12

«حَسْبِيَ اللهُ لاَ إِلَهَ إِلَّا هُوَ عَلَيْهِ تَوَكَّلْتُ وَهُوَ رَبُّ الْعَرْشِ الْعَظِيمِ»

ಹಸ್ಬಿಯಲ್ಲಾಹು ಲಾ ಇಲಾಹ ಇಲ್ಲಾ ಹುವ ಅಲೈಹಿ ತವಕ್ಕಲ್ತು ವಹುವ ರಬ್ಬುಲ್ ಅರ್ಶಿಲ್ ಅಝೀಮ್

ನನಗೆ ಅಲ್ಲಾಹು ಸಾಕು. ಅವನ ಹೊರತು ಅನ್ಯ ಸತ್ಯ ಆರಾಧ್ಯರಿಲ್ಲ. ನಾನು ಅವನಲ್ಲಿ ಭರವಸೆಯನ್ನಿಟ್ಟಿದ್ದೇನೆ. ಅವನು ಮಹಾ ಸಿಂಹಾಸನದ ಒಡೆಯನಾಗಿದ್ದಾನೆ.

7 ಸಲ



ಮುಂದಿನ
ಮೊದಲ ಪುಟಕ್ಕೆ

# ಹದೀಸ್‌ಗಳ ತಖ್ರೀಜ್

## ಮೊದಲನೆಯದು: ಪ್ರಶಂಸೆಯ ಹದೀಸ್‌ಗಳ ತಖ್ರೀಜ್

1 ಮುಸ್ಲಿಂ (600)

2 ಮುಸ್ಲಿಂ (477)

3 ಅಲ್-ಬೈಹಕಿ ಶುಅಬುಲ್-ಈಮಾನ್‌ನಲ್ಲಿ (4087) ವರದಿ ಮಾಡಿದ್ದಾರೆ. ಶೈಖ್ ಅಲ್-ಅಲ್ಬಾನಿ ಸಹೀಹು ತ್ತರ್ಗೀಬ್ (1576) ನಲ್ಲಿ ಇದನ್ನು ಸಹೀಹ್ ಎಂದಿದ್ದಾರೆ.

4 ಅಲ್-ಬುಖಾರಿ (1120), (7442) ಮತ್ತು ಮುಸ್ಲಿಂ (769)

5 ಮುಸ್ಲಿಂ (2713).

6 ಅಲ್-ಹಾಕಿಮ್ ಮುಸ್ತದ್ರಕ್ (1920) ನಲ್ಲಿ ವರದಿ ಮಾಡಿದ್ದಾರೆ ಮತ್ತು ಶೈಖ್ ಅಲ್-ಅಲ್ಬಾನಿ ಸಿಲ್ಸಿಲತುಸ್ಸಹೀಹ (267) ದಲ್ಲಿ

ಸಹೀಹ್ ಇದನ್ನು ಎಂದಿದ್ದಾರೆ.

7 ಅಬೂ ದಾವೂದ್ (1493) ಮತ್ತು ಅತ್ತಿರ್ಮಿದಿ (3475) ವರದಿ ಮಾಡಿದ್ದಾರೆ. ಅತ್ತಿರ್ಮಿದಿ ಇದನ್ನು ಹಸನ್ ಎಂದಿದ್ದಾರೆ ಮತ್ತು ಶೈಖ್ ಅಲ್-ಅಲ್ಬಾನಿ ಮಿಶ್ಕಾತುಲ್-ಮಸಾಬೀಹ್ (2/708) ನಲ್ಲಿ ಇದನ್ನು ಸಹೀಹ್ ಎಂದಿದ್ದಾರೆ.

8 ಅಲ್-ಬುಖಾರಿ (6345) ಮತ್ತು ಮುಸ್ಲಿಂ (2730)

9 ಅಬೂ ದಾವೂದ್ (1525) ಮತ್ತು ಇಬ್ನ್ ಮಾಜ (3382) ವರದಿ ಮಾಡಿದ್ದಾರೆ. ಶೈಖ್ ಅಲ್-ಅಲ್ಬಾನಿ ಸಹೀಹು ತ್ತಗ್ರೀಬ್ ವತ್ತರ್ಹೀಬ್ (1824) ನಲ್ಲಿ ಸಹೀಹ್ ಎಂದಿದ್ದಾರೆ.

10 ಮುಸ್ಲಿಂ (2696)

11 ಇಬ್ನ್ ಮಾಜ (3878). ಶೈಖ್ ಅಲ್-ಅಲ್ಬಾನಿ ಇದನ್ನು ಸಹೀಹ್ ಎಂದಿದ್ದಾರೆ.

12 ಮುಸ್ಲಿಂ (1218)

13 ಅಲ್-ಬುಖಾರಿ (6306)

14 ಅಬೂ ದಾವೂದ್ (1495) ಮತ್ತು ಅತ್ತಿರ್ಮಿದಿ

(3544) ವರದಿ ಮಾಡಿದ್ದಾರೆ. ಶೈಖ್ ಅಲ್-ಅಲ್ಬಾನಿ ಮಿಶ್ಕಾತುಲ್-ಮಸಾಬೀಹ್ (2/708) ನಲ್ಲಿ ಇದನ್ನು ಸಹೀಹ್ ಎಂದಿದ್ದಾರೆ.

15 ಅತ್ತಬರಾನಿ ಅಲ್-ಅವ್ಸತ್ (7324) ನಲ್ಲಿ ವರದಿ ಮಾಡಿದ್ದಾರೆ ಮತ್ತು ಶೈಖ್ ಅಲ್-ಅಲ್ಬಾನಿ ಅತ್ತಗ್ರೀಬ್ (1839) ನಲ್ಲಿ ಇದನ್ನು ಸಹೀಹ್ ಎಂದಿದ್ದಾರೆ.

16 ಅಹ್ಮದ್ (6/24) ಮತ್ತು ಅಬೂ ದಾವೂದ್ (873) ವರದಿ ಮಾಡಿದ್ದಾರೆ. ಶೈಖ್ ಅಲ್-ಅಲ್ಬಾನಿ ಮಿಶ್ಕಾತುಲ್ ಮಸಾಬೀಹ್ (1/192) ನಲ್ಲಿ ಇದನ್ನು ಸಹೀಹ್ ಎಂದಿದ್ದಾರೆ.

17 ಅಬೂ ದಾವೂದ್ (874) ಮತ್ತು ಅನ್ನಸಾಈ (1069) ವರದಿ ಮಾಡಿದ್ದಾರೆ ಮತ್ತು ಶೈಖ್ ಅಲ್-ಅಲ್ಬಾನಿ ಸಹೀಹ್ ಸುನನುನ್ನಸಾಈ (3/289) ನಲ್ಲಿ ಇದನ್ನು ಸಹೀಹ್ ಎಂದಿದ್ದಾರೆ.

18 ಮುಸ್ಲಿಂ (601)

## ಎರಡನೆಯದು: ನಮಾಝ್‌ನಲ್ಲಿ ಹೇಳುವ ಪ್ರಾರ್ಥನೆಗಳ ಹದೀಸ್‌ಗಳ ತಖ್ರೀಜ್

1 ಅಲ್-ಬುಖಾರಿ (744) ಮತ್ತು ಮುಸ್ಲಿಂ (598).

2 ಮುಸ್ಲಿಂ (770)

3 ಮುಸ್ಲಿಂ (771)

4 ಅಲ್-ಬುಖಾರಿ (794) ಮತ್ತು ಮುಸ್ಲಿಂ (484).

5 ಮುಸ್ಲಿಂ (486).

6 ಮುಸ್ಲಿಂ (483).

7 ಅಲ್-ಬುಖಾರಿ (6316) ಮತ್ತು ಮುಸ್ಲಿಂ (763)

8 ಅಲ್-ಬುಖಾರಿ (1377) ಮತ್ತು ಮುಸ್ಲಿಂ (588)

9 ಅಬೂ ದಾವೂದ್ (1522) ಮತ್ತು ಅನ್ನಸಾಈ (1303) ವರದಿ ಮಾಡಿದ್ದಾರೆ. ಶೈಖ್ ಅಲ್-ಅಲ್ಬಾನಿ ಮಿಶ್ಕಾತುಲ್ ಮಸಾಬೀಹ್ (1/299) ನಲ್ಲಿ ಇದನ್ನು ಸಹೀಹ್ ಎಂದಿದ್ದಾರೆ.

10 ಮುಸ್ಲಿಂ (771)

11 ಅಲ್-ಬುಖಾರಿ (798) ಮತ್ತು ಮುಸ್ಲಿಂ (589).

12 ಅಬೂ ದಾವೂದ್ (792) ಮತ್ತು ಇಬ್ನ್ ಮಾಜ (910) ವರದಿ ಮಾಡಿದ್ದಾರೆ. ಶೈಖ್ ಅಲ್-ಅಲ್ಬಾನಿ ಸಹೀಹುಲ್-ಜಾಮಿಇ ಸ್ಸಗೀರ್ (1/604) ನಲ್ಲಿ ಇದನ್ನು ಸಹೀಹ್ ಎಂದಿದ್ದಾರೆ.

13 ಅಲ್-ಬುಖಾರಿ (2822), (6390)

14 ಅಲ್-ಬುಖಾರಿ (834) ಮತ್ತು ಮುಸ್ಲಿಂ (2705)

15 ಅಲ್-ಹಾಕಿಮ್ ಮುಸ್ತದ್ರಕ್ (190) ನಲ್ಲಿ ವರದಿ ಮಾಡಿದ್ದಾರೆ ಮತ್ತು ಸಹೀಹ್ ಎಂದಿದ್ದಾರೆ.

16 ಮುಸ್ಲಿಂ (709)

## ಮೂರನೆಯದು: ಪ್ರವಾದಿಯವರ(ಸ) ಪ್ರಾರ್ಥನೆಗಳ ಹದೀಸ್‌ಗಳ ತಖ್ರೀಜ್

1 ಅಲ್-ಬುಖಾರಿ (6389) ಮತ್ತು ಮುಸ್ಲಿಂ (2690)

2 ಮುಸ್ಲಿಂ (2697)

3 ಅತ್ತಿರ್ಮಿದಿ (3563) ವರದಿ ಮಾಡಿ ಹಸನ್ ಎಂದಿದ್ದಾರೆ. ಶೈಖ್ ಅಲ್-ಅಲ್ಬಾನಿ ಅಸ್ಸಹೀಹದಲ್ಲಿ (1/532) ಇದರ ಸನದ್ ಹಸನ್ ಎಂದಿದ್ದಾರೆ.

4 ಇದನ್ನು ಮುಸ್ಲಿಂ (2654) ವರದಿ ಮಾಡಿದ್ದಾರೆ. ಯಾ ಮುಕಲ್ಲಿಬಲ್ ಕುಲೂಬ್ ಸಬ್ಬಿತ್ ಕಲ್ಬೀ ಅಲಾ ದೀನಿಕ್ ಎಂಬ ಮಾತನ್ನು ಅತ್ತಿರ್ಮಿದಿ ವರದಿ ಮಾಡಿದ್ದಾರೆ (3522) ಮತ್ತು "ಹಸನ್ ಹದೀಸ್" ಎಂದಿದ್ದಾರೆ.

5 ಅಹ್ಮದ್ (6/134), ಇಬ್ನ್ ಮಾಜ (2/1264) ವರದಿ ಮಾಡಿದ್ದಾರೆ. ಶೈಖ್ ಅಲ್-ಅಲ್ಬಾನಿ ಸಹೀಹುಲ್-ಜಾಮಿಇ ಸ್ಸಗೀರ್ (1/274) ನಲ್ಲಿ ಇದನ್ನು ಸಹೀಹ್ ಎಂದಿದ್ದಾರೆ.

6 ಅತ್ತಿರ್ಮಿದಿ (3524) ಮತ್ತು ಅನ್ನಸಾಈ ಅಸ್ಸುನನುಲ್-ಕುಬ್ರಾದಲ್ಲಿ (9/212) ವರದಿ ಮಾಡಿದ್ದಾರೆ. ಶೈಖ್ ಅಲ್-ಅಲ್ಬಾನಿ ಸಹೀಹುಲ್-ಜಾಮಿಅನಲ್ಲಿ ಇದನ್ನು ಹಸನ್ ಎಂದಿದ್ದಾರೆ. (5820 - 1913).

7 ಅಹ್ಮದ್ (4318). ಶೈಖುಲ್-ಇಸ್ಲಾಂ ಇಬ್ನ್ ತೈಮಿಯ್ಯ ಮತ್ತು ಅವರ ವಿದ್ಯಾರ್ಥಿ ಇಬ್ನುಲ್-ಖಯ್ಯಿಮ್ ಇದನ್ನು ಸಹೀಹ್ ಎಂದಿದ್ದಾರೆ. ನೋಡಿ: ಶಿಫಾಉಲ್-ಅಲೀಲ್, ಪುಟ 274.

8 ಇಬ್ನ್ ಹಿಬ್ಬಾನ್ (974) "ಕಷ್ಟವಾದ ವಿಷಯವನ್ನು ಸುಲಭಗೊಳಿಸಲು ಅಲ್ಲಾಹನೊಡನೆ ಬೇಡುವುದು ಪ್ರೋತ್ಸಾಹನೀಯವಾಗಿದೆ ಎಂಬ ಅಧ್ಯಾಯದಲ್ಲಿ ವರದಿ ಮಾಡಿದ್ದಾರೆ. ಶೈಖ್ ಅಲ್-ಅಲ್ಬಾನಿ ಅಸ್ಸಹೀಹದಲ್ಲಿ (2886) ಇದನ್ನು ಸಹೀಹ್ ಎಂದಿದ್ದಾರೆ.

9 ಮುಸ್ಲಿಂ (2721). ಈ ಪ್ರಾರ್ಥನೆಯ ಬಗ್ಗೆ ಶೈಖ್ ಅಸ್ಸಅದಿ(ರ) "ಈ ಪ್ರಾರ್ಥನೆಯು ಅತ್ಯಂತ ಸಮಗ್ರ ಮತ್ತು ಹೆಚ್ಚು ಪ್ರಯೋಜನಕಾರಿಯಾದ ಪ್ರಾರ್ಥನೆಗಳಲ್ಲಿ ಒಂದಾಗಿದೆ. ಇದು ಧಾರ್ಮಿಕ ಮತ್ತು ಪಾರಲೌಕಿಕ ಒಳಿತುಗಳನ್ನು ಬೇಡುವುದನ್ನು ಒಳಗೊಂಡಿದೆ" ಎಂದು ಹೇಳಿದ್ದಾರೆ. ಪು. (205)

10 ಮುಸ್ಲಿಂ (2725)

11 ಮುಸ್ಲಿಂ (2720)

12 ಅತ್ತಿರ್ಮಿದಿ (3513) ಇದನ್ನು ವರದಿ ಮಾಡಿ ಹಸನ್ ಎಂದಿದ್ದಾರೆ

13 ಅತ್ತಿರ್ಮಿದಿ (3502) ಮತ್ತು ಅನ್ನಸಾಈ ಅಸ್ಸುನನುಲ್-ಕುಬ್ರಾದಲ್ಲಿ (10161) ವರದಿ ಮಾಡಿದ್ದಾರೆ. ಶೈಖ್ ಅಲ್-ಅಲ್ಬಾನಿ ಸಹೀಹುಲ್-ಜಾಮಿಯಲ್ಲಿ ಹಸನ್ ಎಂದಿದ್ದಾರೆ (1268)

14 ಅತ್ತಿರ್ಮಿದಿ ಇದನ್ನು ವರದಿ ಮಾಡಿ ಹೀಗೆ ಹೇಳಿದ್ದಾರೆ: “ಈ ಹದೀಸ್ ಹಸನ್ ಸಹೀಹ್ ಆಗಿದೆ.”

15 ಅಹ್ಮದ್ (22109) ಮತ್ತು ಅತ್ತಿರ್ಮಿದಿ (3235) ವರದಿ ಮಾಡಿದ್ದಾರೆ. ಅತ್ತಿರ್ಮಿದಿ ಇದನ್ನು ಹಸನ್ ಸಹೀಹ್ ಎಂದಿದ್ದಾರೆ.

16 ಅತ್ತಬರಾನಿ ಇದನ್ನು ಅಲ್-ಕಬೀರ್ (7135) ನಲ್ಲಿ ವರದಿ ಮಾಡಿದ್ದಾರೆ. ಶೈಖ್ ಅಲ್-ಅಲ್ಬಾನಿ ತಮ್ಮ ಅಸ್ಸಹೀಹದಲ್ಲಿ “ಇದರ ಸನದ್ ಉತ್ತಮವಾಗಿದೆ” ಎಂದಿದ್ದಾರೆ.

17 ಅಹ್ಮದ್ (1718) ಮತ್ತು ಅಬೂ ದಾವೂದ್ (1425) ವರದಿ ಮಾಡಿದ್ದಾರೆ. ಶೈಖ್ ಅಲ್-ಅಲ್ಬಾನಿ ಮಿಶ್ಕಾತುಲ್ ಮಸಾಬೀಹ್ (1273)

ನಲ್ಲಿ ಇದನ್ನು ಸಹೀಹ್ ಎಂದಿದ್ದಾರೆ.

18 ಅಹ್ಮದ್ (18325) ಮತ್ತು ಅನ್ನಸಾಈ (1305) ವರದಿ ಮಾಡಿದ್ದಾರೆ. ಶೈಖ್ ಅಲ್-ಅಲ್ಬಾನಿ ಸಹೀಹುಲ್ ಜಾಮಿಯಲ್ಲಿ ಸಹೀಹ್ ಎಂದಿದ್ದಾರೆ (1301)

19 ಅಬೂ ದಾವೂದ್ (5074) ಮತ್ತು ಅಲ್-ಬುಖಾರಿ ಅಲ್-ಅದಬುಲ್-ಮುಫ್ರದ್ (1200) ನಲ್ಲಿ ವರದಿ ಮಾಡಿದ್ದಾರೆ. ಶೈಖ್ ಅಲ್-ಅಲ್ಬಾನಿ ಸಹೀಹುಲ್-ಅದಬಿಲ್-ಮುಫ್ರದ್ (912) ನಲ್ಲಿ ಇದನ್ನು ಸಹೀಹ್ ಎಂದಿದ್ದಾರೆ.

## ನಾಲ್ಕನೆಯದು: ಪ್ರವಾದಿಯವರ(ಸ) ಅಭಯಯಾಚನೆಯ ಹದೀಸ್‌ಗಳ ತಖ್ರೀಜ್

1 ಮುಸ್ಲಿಂ (2716) ಮತ್ತು ಅನ್ನಸಾಈ (5524)

2 ಅಲ್-ಬುಖಾರಿ ಅಲ್-ಅದಬುಲ್-ಮುಫ್ರದ್ (716) ನಲ್ಲಿ ವರದಿ ಮಾಡಿದ್ದಾರೆ. ಶೈಖ್ ಅಲ್-ಅಲ್ಬಾನಿ ಸಹೀಹುಲ್-ಜಾಮಿಇ ಸ್ಸಗೀರ್ (1/694) ನಲ್ಲಿ ಸಹೀಹ್ ಎಂದಿದ್ದಾರೆ.

3 ಮುಸ್ಲಿಂ (2739)

4 ಅತ್ತಿರ್ಮಿದಿ (3591) ಮತ್ತು ಅತ್ತಬರಾನಿ ಅಲ್-ಕಬೀರ್ (36) ನಲ್ಲಿ ವರದಿ ಮಾಡಿದ್ದಾರೆ. ಶೈಖ್ ಅಲ್-ಅಲ್ಬಾನಿ ಸಹೀಹುಲ್ ಜಾಮಿ (1/278) ನಲ್ಲಿ ಇದನ್ನು ಸಹೀಹ್ ಎಂದಿದ್ದಾರೆ.

5 ಅಲ್-ಬುಖಾರಿ (6616) ಮತ್ತು ಮುಸ್ಲಿಂ (2707)

6 ಮುಸ್ಲಿಂ (2722).

7 ಅಲ್-ಬುಖಾರಿ (2893). ಇದರ ಒಂದು ಭಾಗವನ್ನು ಮುಸ್ಲಿಂ ವರದಿ ಮಾಡಿದ್ದಾರೆ (2706).

8 ಅಬೂ ದಾವೂದ್ (1551) ಮತ್ತು ಅತ್ತಿರ್ಮಿದಿ (3492) ವರದಿ ಮಾಡಿದ್ದಾರೆ. ಶೈಖ್ ಅಲ್-ಅಲ್ಬಾನಿ ಸಹೀಹುಲ್ ಜಾಮಿ '(2/811) ನಲ್ಲಿ ಇದನ್ನು ಸಹೀಹ್ ಎಂದಿದ್ದಾರೆ.

9 ಅಲ್-ಬುಖಾರಿ (6376) ಮತ್ತು ಮುಸ್ಲಿಂ (589)

10 ಮುಸ್ಲಿಂ (2717)

11 ಅಬೂ ದಾವೂದ್ (1554) ಮತ್ತು ಅನ್ನಸಾಈ

(5493) ವರದಿ ಮಾಡಿದ್ದಾರೆ. ಶೈಖ್ ಅಲ್-ಅಲ್ಬಾನಿ ಸಹೀಹುಲ್ ಜಾಮಿ (1/275) ನಲ್ಲಿ ಸಹೀಹ್ ಎಂದಿದ್ದಾರೆ.

12 ಅತ್ತಬರಾನಿ ಅಲ್-ಕಬೀರ್ (810) ನಲ್ಲಿ ವರದಿ ಮಾಡಿದ್ದಾರೆ. ಶೈಖ್ ಅಲ್-ಅಲ್ಬಾನಿಯವರು ಸಹೀಹುಲ್ ಜಾಮಿ (1299) ನಲ್ಲಿ ಹಸನ್ ಎಂದಿದ್ದಾರೆ.

13 ಅಹ್ಮದ್ (2667) ಮತ್ತು ಮುಸ್ಲಿಂ (2867) ವರದಿ ಮಾಡಿದ್ದಾರೆ.

## ಐದನೆಯದು: ಮಂತ್ರಿಸುವ ಪ್ರಾರ್ಥನೆಗಳ ತಖ್ರೀಜ್

1 ಅಲ್-ಬುಖಾರಿ (5749) ಮತ್ತು ಮುಸ್ಲಿಂ (2201). ಅವರು ಸೂರ ಅಲ್-ಫಾತಿಹಾದ ಮೂಲಕ ಏಳು ಸಲ ಮಂತ್ರಿಸಿದರೆಂದು ಸುನನುತ್ತಿರ್ಮಿದಿ (2063) ಯಲ್ಲಿದೆ.

2 ಮುಸ್ಲಿಂ (810). ಇದು ಅಲ್ಲಾಹನ ಗ್ರಂಥದಲ್ಲಿರುವ ಅತಿದೊಡ್ಡ ಆಯತ್ ಎಂದು ಹೇಳಲಾಗಿದೆ. ಇದು ಶೈತಾನರಿಂದ ರಕ್ಷಿಸುತ್ತದೆ ಎಂದು

ಅಲ್-ಬುಖಾರಿ (2311) ಯವರ ವರದಿಯಲ್ಲಿದೆ.

3 ಅಲ್-ಬುಖಾರಿ (5735), (5748), ಮತ್ತು ಮುಸ್ಲಿಂ (2192)

4 ಅಲ್-ಬುಖಾರಿ (5742), (5743)

5 ಅಲ್-ಬುಖಾರಿ (5745, 5746) ಮತ್ತು ಮುಸ್ಲಿಂ (2194) ಇಮಾಂ ನವವಿಯವರ ಶರ್ಹ್ ಮುಸ್ಲಿಂನಲ್ಲಿ (14/184) ಇದರ ವ್ಯಾಖ್ಯಾನವನ್ನು ನೋಡಿ.

6 ಮುಸ್ಲಿಂ (2202)

7 ಅಲ್-ಬುಖಾರಿ (3371)

8 ಮುಸ್ಲಿಂ (2709)

9 ಅಬೂ ದಾವೂದ್ (5088) ಮತ್ತು ಇಬ್ನ್ ಮಾಜ (3869) ವರದಿ ಮಾಡಿದ್ದಾರೆ. ಶೈಖ್ ಅಲ್-ಅಲ್ಬಾನಿ ಮಿಶ್ಕಾತುಲ್ ಮಸಾಬೀಹ್ (2391) ನಲ್ಲಿ ಸಹೀಹ್ ಎಂದಿದ್ದಾರೆ.

10 ಮುಸ್ಲಿಂ (2186)

11 ಅಬೂ ದಾವೂದ್ (3106) ಮತ್ತು ಅತ್ತಿರ್ಮಿದಿ

(2083) ವರದಿ ಮಾಡಿದ್ದಾರೆ. ಶೈಖ್ ಅಲ್-ಅಲ್ಬಾನಿಯವರು ಸಹೀಹುತ್ತರ್ಗೀಬ್ (3480) ನಲ್ಲಿ ಸಹೀಹ್ ಎಂದಿದ್ದಾರೆ.

## ಆರು: ಬೆಳಿಗ್ಗೆ ಮತ್ತು ಸಂಜೆ ಹೇಳುವ ಹದೀಸ್‌ಗಳ ತಖ್ರೀಜ್

1. ಅಹ್ಮದ್ (8719). ಇಬ್ನ್ ಬಾಝ್(ರ) ತಮ್ಮ ತುಹ್ಫತುಲ್ ಅಖ್ಯಾರ್ ಎಂಬ ಸಂದೇಶದಲ್ಲಿ ಇದರ ಸನದನ್ನು ಹಸನ್ ಎಂದಿದ್ದಾರೆ.
2. ಮುಸ್ಲಿಂ (2723)
3. ಅಲ್-ಬುಖಾರಿ (3606)
4. ಅಬೂ ದಾವೂದ್ (5068) ಮತ್ತು ಅತ್ತಿರ್ಮಿದಿ (3391) ವರದಿ ಮಾಡಿದ್ದಾರೆ. ಇಬ್ನ್ ಬಾಝ್ ಇದರ ಸನದನ್ನು ಸಹೀಹ್ ಎಂದಿದ್ದಾರೆ.
5. ಅಹ್ಮದ್ (6597), ಅಬೂ ದಾವೂದ್ (5076) ಮತ್ತು ಅತ್ತಿರ್ಮಿದಿ (3529) ವರದಿ ಮಾಡಿದ್ದಾರೆ. ಅಲ್-ಬುಖಾರಿ ಇದನ್ನು ಅಲ್-ಅದಬುಲ್-ಮುಫ್ರದ್‌ನಲ್ಲಿ ವರದಿ ಮಾಡಿದ್ದಾರೆ ಮತ್ತು

ಇಬ್ನ್ ಬಾಝ್ ಇದನ್ನು ಹಸನ್ ಎಂದಿದ್ದಾರೆ.

6 ಇಮಾಮ್ ಅಹ್ಮದ್ (446) ಮತ್ತು ಅತ್ತಿರ್ಮಿದಿ ಹದೀಸ್ ಸಂಖ್ಯೆ (10179) ವರದಿ ಮಾಡಿದ್ದಾರೆ. ಅತ್ತಿರ್ಮಿದಿ ಇದನ್ನು ಹಸನ್ ಸಹೀಹ್ ಎಂದಿದ್ದಾರೆ.

7 ಇದನ್ನು ಇಮಾಮ್ ಅಹ್ಮದ್ (18967) ಮತ್ತು ಅತ್ತಿರ್ಮಿದಿ (3389) ವರದಿ ಮಾಡಿದ್ದಾರೆ. ಇಬ್ನ್ ಬಾಝ್ ಇದರ ಸನದನ್ನು ಹಸನ್ ಎಂದಿದ್ದಾರೆ.

8 ಅಹ್ಮದ್ ಅಲ್-ಮುಸ್ನದ್ (4785) ನಲ್ಲಿ ಮತ್ತು ಅಬು ದಾವೂದ್ (5074) ವರದಿ ಮಾಡಿದ್ದಾರೆ. ಅಲ್-ಹಾಕಿಮ್ ಇದನ್ನು ಸಹೀಹ್ ಎಂದಿದ್ದಾರೆ.

9 ಅಹ್ಮದ್ (7898) ಮತ್ತು ಅತ್ತಿರ್ಮಿದಿ (3437) ವರದಿ ಮಾಡಿದ್ದಾರೆ. ಇಬ್ನ್ ಬಾಝ್ ಇದರ ಸನದನ್ನು ಸಹೀಹ್ ಎಂದಿದ್ದಾರೆ.

10 ಅಹ್ಮದ್ (15367,21144). ಇಬ್ನ್ ಬಾಝ್ ಇದರ ಸನದನ್ನು ಸಹೀಹ್ ಎಂದಿದ್ದಾರೆ.

11 ಅನ್ನಸಾಈ (10405) ಮತ್ತು ಅಲ್-ಬಝ್ಝಾರ್

(2/282) ವರದಿ ಮಾಡಿದ್ದಾರೆ. ಶೈಖ್ ಅಲ್-ಅಲ್ಬಾನಿ ತಮ್ಮ ಅಸ್ಸಿಲ್ಸಿಲತು ಸ್ಸಹೀಹ 1/449 ದಲ್ಲಿ ಇದನ್ನು ಹಸನ್ ಎಂದಿದ್ದಾರೆ.

12 ಅಬೂ ದಾವೂದ್ (5081). ಸರಿಯಾದ ಅಭಿಪ್ರಾಯ ಪ್ರಕಾರ ಈ ಹದೀಸ್ ಮೌಕೂಫ್ ಆಗಿದೆ. ಶೈಖ್ ಅಲ್-ಅಲ್ಬಾನಿ ಹೇಳಿದಂತೆ ಇದು ಮರ್ಫೂಅ್‌ನ ಪದವಿಯನ್ನು ಹೊಂದಿದೆ. (ನೋಡಿ: ಅಸ್ಸಿಲ್ಸಿಲತು ಸ್ಸಹೀಹ 11/449).

العلمية الوقفية اقتداء

ಇಕ್ತಿದಾ ವೈಜ್ಞಾನಿಕ ದತ್ತಿ ಸಂಸ್ಥೆ

ಪ್ರವಾದಿ(ಸ) ರವರ ಚರ್ಯೆ ಮತ್ತು ದೈನಂದಿನ
ದಿಕ್ರ್‌ಗಳನ್ನು ಪ್ರಚಾರ ಮಾಡುವುದು ನಮ್ಮ ಉದ್ದೇಶ

ನಮ್ಮನ್ನು ಸಂಪರ್ಕಿಸಿ

0 0 9 6 6 5 0 3 7 6 6 2 2 2

doa.eqtidaa.com

@eqtidaa1

Download on the App Store

ANDROID APP ON Google play